ಮಾನವಿಕ ಕರ್ನಾಟಕ

ಸಂಪುಟ - ೩೨

ಸಂಚಿಕೆ - ೧

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ೫೭೦ ೦೦೬

೨೦೦೧

ಮಾನವಿಕ ಕರ್ನಾಟಕ

ಸಂಪುಟ ೩೨ ಸಂಚಿಕೆ ೧

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೨೦೦೨

MANAVIKA KARNATAKA : A Kannada Quarterly of the University of Mysore. Volume No. 32, No. 1, Edited by Prof. Ambalike Hiriyanna and Dr. R. Ramakrishna, Published by the Director, Prasaranga, University of Mysore, Manasagangotri, Mysore 570 006. pp.10+80.

ಪ್ರಧಾನ ಸಂಪಾದಕರು

ಪ್ರೊ. ಲಕ್ಷ್ಮೀನಾರಾಯಣ ಅರೋರಾ

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ

ಡಾ. ಆರ್. ರಾಮಕೃಷ್ಣ

ಮುದ್ರಕರು

ನಿರ್ದೇಶಕರು

ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು ೫೭೦ ೦೦೬

ಎರಡು ಮಾತು

'ಮಾನವಿಕ ಕರ್ನಾಟಕ'ದ ೩೨ನೇ ಸಂಪುಟದ ಮೊದಲನೆಯ ಸಂಚಿಕೆ ಇದೀಗ ಓದುಗರ ಕೈ ಸೇರುತ್ತಿದೆ. ಮಾನವಿಕ ವಿಭಾಗದ ಕೆಲವಾರು ಕ್ಷೇತ್ರಗಳಿಗೆ ಸಂಬಂಧಪಟ್ಟ ೧೧ ಲೇಖನಗಳು ಈ ಹೊತ್ತಗೆಯಲ್ಲಿ ಅಡಕವಾಗಿವೆ. ಸಂಶೋಧನಾತ್ಮಕ ದೃಷ್ಟಿಯಿಂದ ಲೇಖನಗಳು ಜಿಜ್ಞಾಸು ಓದುಗರ ಕುತೂಹಲವನ್ನು ತಣಿಸುವಲ್ಲಿ ಸಾಕಷ್ಟು ನೆರವಾಗುತ್ತವೆ.

ವಿಶ್ವವಿದ್ಯಾನಿಲಯದಲ್ಲಿ ಮಾತ್ರವಲ್ಲದೆ ಹೊರಗಡೆಯ ಬಗೆಬಗೆಯ ಕ್ಷೇತ್ರಗಳಲ್ಲಿ ಕಾರ್ಯ ನಿರತರಾಗಿರುವ ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ 'ಮಾನವಿಕ ಕರ್ನಾಟಕ' ಒಂದು ಮಹತ್ವದ ವೇದಿಕೆಯನ್ನು ಕಲ್ಪಿಸುವಲ್ಲಿ ಸಮರ್ಥವಾಗಿದೆ. ಈ ಸದವಕಾಶವನ್ನು ಸಮರ್ಥವಾಗಿ ಓದುಗ ಬಂಧುಗಳು ಬಳಸಿಕೊಳ್ಳುತ್ತಾರೆಂದು ನಿರೀಕ್ಷಿಸಲಾಗಿದೆ.

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರಾದ ಪ್ರೊ. ಎಸ್. ಎನ್. ಹೆಗ್ಡೆಯವರು ಹಾಗೂ ಕುಲಸಚಿವರಾದ ಶ್ರೀ ಎನ್.ಡಿ. ತಿವಾರಿಯವರು ಈ ಪತ್ರಿಕೆಗಳನ್ನು ಹೊರತರುವಲ್ಲಿ ವಿಶೇಷ ಆಸ್ಥೆ ವಹಿಸಿದ್ದಾರೆ. ಅವರಿಗೂ, ಈ ಹೊತ್ತಗೆಯನ್ನು ಸಂಪಾದಿಸಿಕೊಟ್ಟಿರುವ ಪ್ರೊ. ಅಂಬಳಿಕೆ ಹಿರಿಯಣ್ಣ ಮತ್ತು ಡಾ. ಆರ್. ರಾಮಕೃಷ್ಣ ಅವರಿಗೂ, ಲೇಖನಗಳನ್ನು ಬರೆದುಕೊಟ್ಟು, ಸಂಶೋಧನ ಕ್ಷೇತ್ರದಲ್ಲಿ ತಮ್ಮನ್ನು ವಿಶೇಷವಾಗಿ ತೊಡಗಿಸಿಕೊಂಡಿರುವ ಲೇಖಕಬಂಧುಗಳಿಗೂ, ಈ ಹೊತ್ತಗೆಯ ಡಿ. ಟಿ. ಪಿ. ಕೆಲಸವನ್ನು ನಿರ್ವಹಿಸಿಕೊಟ್ಟಿರುವ 'ಸಿಂಚನ ಗ್ರಾಫಿಕ್ಸ್' ನ ಶ್ರೀ ಎಲ್.ರವಿ ಅವರಿಗೂ, ಅಚ್ಚಿಸಿಕೊಟ್ಟಿರುವ ವಿಶ್ವವಿದ್ಯಾನಿಲಯ ಮುದ್ರಣಾಲಯದ ನಿರ್ದೇಶಕರಿಗೂ, ಸಿಬ್ಬಂದಿ ವರ್ಗದವರಿಗೂ, ಎಂದಿನಂತೆ ಈ ಕೆಲಸ ಕಾರ್ಯಗಳಲ್ಲಿ ಸಹಕರಿಸುತ್ತಿರುವ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಬಾ. ವೇ. ಶ್ರೀಧರ ಮತ್ತು ಇತರ ಸಹೋದ್ಯೋಗಿಗಳಿಗೂ ನನ್ನ ಹಾರ್ದಿಕ ವಂದನೆಗಳು.

ಪ್ರೊ. ಲಕ್ಷ್ಮೀನಾರಾಯಣ ಅರೋರಾ
ಪ್ರಧಾನ ಸಂಪಾದಕರು

ಸಂಪಾದಕೀಯ

ಪ್ರಕೃತ ಸಂಚಿಕೆ ರಾಜಕಾರಣ, ಮಹಿಳೆ, ವಾಣಿಜ್ಯ ತೆರಿಗೆ, ತತ್ವಜ್ಞಾನ, ಮಾನವವಿಜ್ಞಾನ, ಭಾಷಾವಿಜ್ಞಾನ, ಜಾನಪದವಿಜ್ಞಾನ, ಜೀವನಚರಿತ್ರೆ — ಇವೇ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ವೈವಿಧ್ಯಪೂರ್ಣವೆನಿಸಿದ ಒಟ್ಟು ಹನ್ನೊಂದು ಬರಹಗಳ ಒಂದು ಸಂಚಯ. ಈ ಬರಹಗಳನ್ನು ಓದುಗರ ಕೈಗಿಡಲು ಸಂತೋಷವಾಗುತ್ತಿದೆ.

ಈ ಸಂಚಿಕೆಯ ಮೊದಲ ಬರಹ ಡಾ. ಅಂಬೇಡ್ಕರ್ ಹಾಗೂ ಡಾ. ನೆಲ್ಸನ್ ಮಂಡೇಲಾ ಅವರನ್ನು ಕುರಿತ ಒಂದು ತೌಲನಿಕ ಅಧ್ಯಯನವಾಗಿದ್ದು ಶ್ರೀ ಗಂಗಾರಾಂ ಚಂಡಾಳ ಇದರ ಲೇಖಕರು. ವಿಶ್ವವಿಖ್ಯಾತರಾದ ಈ ಇಬ್ಬರೂ ವ್ಯಕ್ತಿಗಳು ತಂತಮ್ಮ ನಾಡು, ಜನಾಂಗದ ಬಗೆಗೆ ಪೂರ್ಣ ಭರವಸೆ ಇಟ್ಟುಕೊಂಡು ಹೇಗೆ ಆಡಳಿತ ನಡೆಸಿದರು, ಸಂದರ್ಭಾನುಸಾರವಾಗಿ ಜನಾಂಗಗಳ ಹಿತ ಬಯಸಿ ಅವರು ನಡೆಸಿದ ಸಂಧಾನಗಳು, ಒಪ್ಪಂದಗಳು ಹೇಗೆ ಆ ಇಬ್ಬರನ್ನೂ ಆಯಾ ಜನಾಂಗಗಳ ಪ್ರತಿನಿಧಿಗಳನ್ನಾಗಿಸಿದವು ಎಂಬುದನ್ನು ಸಾಧಾರವಾಗಿ ಪ್ರತಿಪಾದಿಸಲಾಗಿದೆ. ರಾಜಕೀಯ ಮುತ್ಸದ್ದಿಗಳಾಗಿ, ಶಾಂತಿಧೂತರಾಗಿ, ರಾಜನೀತಿ ಚಿಂತಕರಾಗಿ ಈ ಈರ್ವರ ಸಾಧನೆ ಮತ್ತು ಕೊಡುಗೆಗಳನ್ನು ಇಲ್ಲಿ ವಿವರಿಸಲಾಗಿದೆ.

ಎಚ್. ಎಂ. ಹೇಮಲತ ಅವರ 'ಸಮಾಜದ ವಿವಿಧ ಸಾಂಸ್ಥಿಕ ಘಟಕಗಳಲ್ಲಿ ಪುರುಷ ಪ್ರಧಾನತೆ' - ಬರಹ ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸಮೂಹ ಮಾಧ್ಯಮ ಹಾಗೂ ಸಾಂಸ್ಥಿಕ ಘಟಕಗಳಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ವ್ಯಕ್ತವಾಗುವ ಪುರುಷ ಪ್ರಧಾನ ಅಂಶಗಳನ್ನು ಸ್ತ್ರೀವಾದದ ನೆಲೆಯಿಂದ ಗುರುತಿಸುವ ಪ್ರಯತ್ನ ಮಾಡುತ್ತದೆ. ಲಿಂಗಾಧಾರಿತ ರೂಢಿಬದ್ಧತೆಗಳನ್ನು ಶಾಶ್ವತಗೊಳಿಸಲು ಸಮೂಹ ಮಾಧ್ಯಮ ವಹಿಸುವ ಪಾತ್ರ ಕುರಿತು ಇವರು ನಡೆಸಿರುವ ಚರ್ಚೆ ಕುತೂಹಲಕರವಾಗಿದ್ದು ಅಭ್ಯಾಸಯೋಗ್ಯವಾಗಿದೆ.

ಎಂ. ಪಿ. ಮಹದೇವಯ್ಯನವರು 'ಪ್ರಾಚೀನ ಕರ್ನಾಟಕದ ಕೆಲವು ವಿಶಿಷ್ಟ ತೆರಿಗೆಗಳು' ಎಂಬ ಬರಹದಲ್ಲಿ ಪ್ರಾಚೀನ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಕೆಲವು ವಾಣಿಜ್ಯ ತೆರಿಗೆ ವ್ಯವಸ್ಥೆಯಿಂದ ರಾಜ್ಯದ ಆದಾಯಕ್ಕೆ ಮಾತ್ರವಲ್ಲದೆ ಸ್ಥಳೀಯ ಸಂಸ್ಥೆಗಳು, ದೇವಾಲಯಗಳು, ಕೆರೆಕಟ್ಟೆಗಳು ಮುಂತಾದ ಸಮಾಜೋಧಾರ್ಮಿಕ ಕಾರ್ಯಗಳಿಗೂ ಉತ್ತೇಜನ ಸಿಗುತ್ತಿದ್ದುದನ್ನು ಪ್ರಸ್ತಾಪಿಸಿದ್ದಾರೆ. ಅಲ್ಲದೆ ಅದಕ್ಕಿದ್ದ ಸಾಮಾಜಿಕ ಹಾಗೂ ಧಾರ್ಮಿಕ ಪ್ರಸ್ತುತತೆಯನ್ನು ಕುರಿತು ವಿಚಾರ ಮಾಡಿದ್ದಾರೆ.

ಎಂ. ಪಿ. ರಮೇಶ್ ಬರೆದಿರುವ ಡಾ. ಎಸ್. ರಾಧಾಕೃಷ್ಣನ್ ಕುರಿತ ಬರಹ ತತ್ವಶಾಸ್ತ್ರಜ್ಞರಾಗಿ, ಶಿಕ್ಷಣವೇತ್ತರಾಗಿ, ವಿದ್ವಾಂಸರಾಗಿ, ಭಾರತದ ರಾಯಭಾರಿಯಾಗಿ, ರಾಷ್ಟ್ರಪತಿಗಳಾಗಿ ರಾಧಾಕೃಷ್ಣನ್ ಅವರು ರಾಷ್ಟ್ರಕ್ಕೆ ನೀಡಿದ ಕೊಡುಗೆ ಕುರಿತು ಸ್ಥೂಲವಾಗಿ ವಿವೇಚಿಸುತ್ತದೆ.

ಸಾಮಾಜಿಕವಾಗಿ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಂದಿಲ್ಲೊಂದು ಬಗೆಯ ಸಹಜ ಕೌಶಲವಿದ್ದು ಅವನು ಒಂದು ಕ್ಷೇತ್ರದಲ್ಲಿ ನಾಯಕನಾಗಿಯೂ ಇನ್ನೊಂದು ಕ್ಷೇತ್ರದಲ್ಲಿ ಅನುಚರನಾಗಿಯೂ ಇರುತ್ತಾನೆ ಎಂಬ ಸಂಗತಿಯನ್ನು ಸ್ಪಷ್ಟಪಡಿಸಿರುವ ಟಿ. ಎಲ್. ವೆಂಕಣ್ಣನವರ 'ನಾಯಕ-ನಾಯಕಾರಾಧನೆ' ಎಂಬ ಬರಹ ನಾಯಕಾರಾಧನೆ ಪರಿಕಲ್ಪನೆಯ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಯತ್ನ ಮಾಡುತ್ತದೆ. ಸಮಾಜದಲ್ಲಿ ಆಗಾಗ ಕಾಣಿಸಿಕೊಳ್ಳುವ ಸಾಮಾಜಿಕ, ಆರ್ಥಿಕ ಬದಲಾವಣೆಗಳ ಪರಿಣಾಮವಾಗಿ ಹಾಗೂ ಜೀವನ ಸ್ಥಿತಿಯಲ್ಲಿನ ಸ್ಥಿತ್ಯಂತರಗಳ ಪರಿಣಾಮವಾಗಿ ನಾಯಕತ್ವ ಹಾಗೂ ನಾಯಕಾರಾಧನೆಯ ಪರಿಕಲ್ಪನೆಗಳು ಬದಲಾಗುತ್ತವೆ. ಆದರೂ ಒಬ್ಬ ನಾಯಕನಲ್ಲಿರಬೇಕಾದ ಕೆಲವು ಲಕ್ಷಣಗಳು ಎಲ್ಲ ಕಾಲದಲ್ಲಿಯೂ ಸಮಾನವಾಗಿದ್ದು ಅವುಗಳನ್ನು ಎಂಟು ಬಗೆಗಳಾಗಿ ಗುರುತಿಸಬಹುದು ಎಂದು ಅಭಿಪ್ರಾಯಪಡಲಾಗಿದೆ. ಇದು ಪರಿಶೀಲನಾರ್ಹ ವಿಚಾರವಾಗಿದೆ.

ಲಂಬಾಣಿ ಕರಕುಶಲಕಲೆಗಳಲ್ಲಿ ಕಸೂತಿ ಕಲೆಗೆ ಮಹತ್ವದ ಸ್ಥಾನವಿದೆ. ಮಹಾದೇವಿಬಾಯಿ ಅವರು 'ಲಂಬಾಣಿಗರ ಕಸೂತಿ ಕಲೆ' ಎಂಬ ಬರಹದಲ್ಲಿ ಬದಲಾದ ಪರಿಸ್ಥಿತಿಯಲ್ಲಿ ಲಂಬಾಣಿಗರ ಈ ಕಲೆ ಕಣ್ಮರೆಯಾಗುತ್ತಿರುವುದನ್ನು ಪ್ರಸ್ತಾಪಿಸಿ ಅದನ್ನು ಈ ಕಾಲದ ಬದುಕಿಗೆ ಹೊಂದಿಸಿಕೊಳ್ಳುವ ಅಗತ್ಯವನ್ನು ಪ್ರತಿಪಾದಿಸಿದ್ದಾರೆ. ಲಂಬಾಣಿಗರು ಈಚಿನ ದಿನಗಳಲ್ಲಿ ತಮ್ಮ ಅತಿ ಪ್ರಾಮುಖ್ಯತೆಯನ್ನು ಕೈಬಿಟ್ಟು ತಮ್ಮ ಭೌತಿಕ ನೆಲೆಯನ್ನು ಕಂಡುಕೊಳ್ಳುತ್ತಿರುವುದರ ಪರಿಣಾಮ ಅದು ಎಂದು ಹೇಳಿ ಯಾವುದೇ ಒಂದು ಸಮುದಾಯದ ಉಡುಪು ಸ್ಥಳೀಯ ನೆಲೆಯಲ್ಲಿ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡರೂ ಭೌತಿಕ ನೆಲೆಯಲ್ಲಿ ತಮ್ಮ ಉಡುಪಿನ ವೈಶಿಷ್ಟ್ಯವನ್ನು ಕಾಯ್ದುಕೊಳ್ಳಲು ಸಾಧ್ಯವಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಲಂಬಾಣಿ ಕಸೂತಿಯ ವಿಶಿಷ್ಟ ವಿನ್ಯಾಸಗಳನ್ನು ಇಲ್ಲಿ ಪರಿಚಯ ಮಾಡಿಕೊಡಲಾಗಿದೆ.

ಶಿವರಾಮಯ್ಯನವರ 'ದೀವದ ಬೇಂಟೆಯೊ ದೀಪದ ಬೇಂಟೆಯೊ? ' ಬರಹ ಸಂಶೋಧನಾತ್ಮಕವಾಗಿದ್ದು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಬೇಟೆಗೆ ಸಂಬಂಧಿಸಿದ ಸಂಕೇತಗಳು, ಸಾಂಕೇತಿಕ ಕ್ರಿಯೆಗಳು ಹಾಗೂ ವಸ್ತುಸೂಚಕ ಪ್ರತಿಮೆಗಳು ಅನೇಕ ಸಂದರ್ಭಗಳಲ್ಲಿ ಬಂದಿರುವುದನ್ನು ಪ್ರಸ್ತಾಪಿಸುತ್ತದೆ. 'ದೀಪದ ಬೇಟೆ' ಎಂಬುದು ಪ್ರತಿಭಾವಂತ ಬೇಟೆಗಾರ ತನ್ನೆಲ್ಲ ಚತುರತೆಯಿಂದ ದೀಪವನ್ನು ಬಳಸಿ ಮೃಗವನ್ನು ಮರುಳುಗೊಳಿಸಿ ಆಡುವ ಬೇಟೆ ಎಂದು ನಿರ್ವಚಿಸಿ ಪಂಪನು ವರ್ಣಿಸಿರುವುದು ದೀವದ ಬೇಟೆಯೇ ಹೊರತು ಮುಳಿಯ ತಿಮ್ಮಪ್ಪಯ್ಯನವರು ದೂರಾನ್ವಯ ಮಾಡಿ ಹೇಳಿರುವಂತೆ ದೀಪದ ಬೇಟೆಯಲ್ಲ ಎಂದು ದೃಢವಾಗಿ ಹೇಳಿದ್ದಾರೆ.

ಎಲ್. ಮಂಜುಳಾಕ್ಷಿ ಅವರ 'ಕನ್ನಡ ಭಾಷೆಯಲ್ಲಿ ಸಂಬೋಧನಾ ರೀತಿ' ಎಂಬ ಬರಹ ಹಿಂದಿನ ಮೈಸೂರು ಜಿಲ್ಲೆಯಲ್ಲಿ ಪ್ರಚಲಿತವಿದ್ದ ಸಂಬೋಧನಾ ರೀತಿ ಮತ್ತು ಪದಗಳನ್ನು ಅವರ ಆಡುಭಾಷೆಯ ಆಧಾರದ ಮೇಲೆ ಗುರುತಿಸುವ ಗಂಭೀರ ಪ್ರಯತ್ನ ಮಾಡುತ್ತದೆ. ಕನ್ನಡದಲ್ಲಿ ಸಂಬೋಧನಾ ರೀತಿಗಳು ಮತ್ತು ಸರ್ವನಾಮ ಬಳಕೆ ಅಧ್ಯಯನಕ್ಕೆ ಕನ್ನಡ

ಭಾಷೆಯನ್ನಾಡುವ ಸಮಾಜದ ರಚನೆ ಮತ್ತು ಕ್ರಿಯಾತ್ಮಕ ಸಂಬಂಧಗಳನ್ನು ತಿಳಿಯುವುದು ಅಗತ್ಯ ಎಂದು ಇಲ್ಲಿ ಪ್ರತಿಪಾದಿಸಲಾಗಿದೆ. ಒಟ್ಟಿನಲ್ಲಿ ಈ ನಿಟ್ಟಿನ ಗಂಭೀರ ಅಧ್ಯಯನಕ್ಕೆ ಅಗತ್ಯವಾದ ಸಾಮಗ್ರಿಯನ್ನು ಒದಗಿಸುವ ಒಂದು ಉಪಯುಕ್ತ ಬರಹ ಇದು.

ಆರ್. ಉಷಾರಾಣಿ ಅವರ 'ಚಂಗಚಹಳ್ಳಿಯ ಮಾರಿಹಬ್ಬ' ಲೇಖನ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಚಂಗಚಹಳ್ಳಿಯಲ್ಲಿ ವರ್ಷಕ್ಕೊಮ್ಮೆ ನಡೆಯುವ ಮಾರಿಹಬ್ಬದ ವೈಶಿಷ್ಟ್ಯಗಳನ್ನು ಅಗತ್ಯ ವಿವರಗಳೊಡನೆ ಬಲು ಸ್ಥೂಲವಾಗಿ ಪರಿಚಯಿಸುತ್ತದೆ.

'ಎಚ್. ಕೆ. ವೀರಣ್ಣಗೌಡರ ಜೀವನ ಮತ್ತು ಸಾಧನೆ' ಲೇಖನ ಎಸ್. ಶಿವರಾಮು ಅವರದು. ಸ್ವಾತಂತ್ರ್ಯ ಹೋರಾಟಗಾರರಾಗಿ, ನಿಸ್ಪೃಹ ರಾಜಕಾರಣಿಯಾಗಿ, ಶ್ರೇಷ್ಠ ಪತ್ರಿಕೋದ್ಯಮಿಯಾಗಿ, ಬರಹಗಾರರಾಗಿ - ಹಲವಾರು ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಅಸಾಧಾರಣ ಕೊಡುಗೆ ನೀಡಿರುವ ವೀರಣ್ಣಗೌಡರ ಜೀವನ ಮತ್ತು ಸಾಧನೆ ಕುರಿತ ಒಂದು ಉಪಯುಕ್ತ ಬರಹ. ಜೀವನ ಚರಿತ್ರೆಗಳಲ್ಲಿ ಆಸಕ್ತಿ ಇರುವ ಅಭ್ಯಾಸಿಗಳಿಗೆ ಅಗತ್ಯ ಮಾಹಿತಿಗಳನ್ನು ಒದಗಿಸುವ ಬರಹ ಕೂಡ ಹೌದು.

ವಿಶ್ವಧರ್ಮ ಎಂಬುದು ನಮ್ಮ ಸಹಜ ಬದುಕು. ನಮ್ಮಲ್ಲಿ ಸೂಸುತ್ತಿರುವ ಮಾನವೀಯತೆಯೇ ಅದರ ಆದರ್ಶ ರೂಪ ಎಂಬ ಉನ್ನತ ಮೌಲ್ಯವನ್ನು ಪ್ರತಿಪಾದಿಸುವ ಕೆ. ವೈ. ಬಾಲರಾಜ್ ಅವರ 'ವಿಶ್ವಧರ್ಮದ ಆದರ್ಶರೂಪ' ಆಸಕ್ತಿದಾಯಕವಾದ ಒಂದು ಬರಹ. ಇಲ್ಲಿ ಮನುಷ್ಯರನ್ನು ಒಂದುಗೂಡಿಸುವ ಪರಸ್ಪರ ಅರ್ಥಮಾಡಿಕೊಳ್ಳುವ ಮನುಷ್ಯತ್ವವನ್ನೇ ವಿಶ್ವಧರ್ಮ ಎಂದು ಕರೆದು ಕ್ರಿಯಾಶೀಲ ನಿಸ್ವಾರ್ಥಸೇವೆ, ಪ್ರೀತಿಯೊಡಗೂಡಿದ ಭಕ್ತಿ, ಆರೋಗ್ಯಪೂರ್ಣ ಯೋಗಶಕ್ತಿ, ಜೀವನೋತ್ಸಾಹ ತುಂಬಿ ಮುನ್ನಡೆಸುವ ದಿವ್ಯತೇಜ — ಈ ನಾಲ್ಕರ ಸಮ್ಮಿಶ್ರವೇ ವಿಶ್ವಧರ್ಮದ ಆದರ್ಶ ಕಟ್ಟಡಕ್ಕೆ ಬೇಕಾಗಿರುವ ಸಾಮಗ್ರಿ ಎಂದು ಪ್ರತಿಪಾದಿಸಲಾಗಿದೆ.

ಒಟ್ಟಿನಲ್ಲಿ ಈ ಎಲ್ಲ ಬರಹಗಳು ಕೆಲವು ಪರಿಮಿತಿಗಳ ನಡುವೆಯೂ ಆಕರ್ಷಕ ಬರಹಗಳಾಗಿದ್ದು ಉತ್ತಮ ಒಳನೋಟಗಳಿಂದ ವಿಜೃಂಭಿಸಿವೆ. ವಿದ್ಯಾರ್ಥಿಗಳಿಗೆ ಅಧ್ಯಾಪಕರಿಗೆ ಮತ್ತು ಸಂಶೋಧಕರಿಗೆ ಇವು ಉಪಯುಕ್ತ ಎನಿಸುವುದರಲ್ಲಿ ಸಂದೇಹವಿಲ್ಲ.

ಪ್ರೊ. ಅಂಬಳಿಕೆ ಹಿರಿಯಣ್ಣ

ಡಾ. ಆರ್. ರಾಮಕೃಷ್ಣ

ಸಂಪಾದಕರು

ಪರಿವಿಡಿ

ಈ ಸಂಚಿಕೆಯ ಬರಹಗಳು

ಡಾ. ಅಂಬೇಡ್ಕರ್ ಮತ್ತು ಡಾ. ನೆಲ್ಸನ್ ಮಂಡೇಲಾ: ಒಂದು ತೌಲನಿಕ ಅಧ್ಯಯನ

—ಗಂಗಾರಾಂ ಚಂಡಾಳ

ಬಾಲ್ಯ

೧೮೯೧-೪-೧೪ ರಂದು ಹುಟ್ಟಿದ ಡಾ. ಅಂಬೇಡ್ಕರ್‌ಗೂ ೧೯೧೮-೭-೧೮ ರಲ್ಲಿ ಹುಟ್ಟಿದ ನೆಲ್ಸನ್‌ಗೂ ಒಂದು ಬಹು ಮುಖ್ಯ ಸಾಮ್ಯತೆ ಎಂದರೆ ಜೀವನದುದ್ದಕ್ಕೂ ಅವರಿಬ್ಬರೂ ನಡೆಸಿದ ಹೋರಾಟ. ಇವರಿಬ್ಬರೂ ಜನ್ಮ ತಾಳಿದ ಸಂದರ್ಭದಲ್ಲಿದ್ದ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಸ್ಥಿತಿಗಳು ಸರಿ ಸುಮಾರು ಒಂದೇ ಆಗಿದ್ದವು. ಇವರಿಬ್ಬರ ಮನೆತನಗಳು ಏಕ ಕಾಲದಲ್ಲಿ ಬ್ರಿಟಿಷರ ಅನುಕಂಪ ಪಡೆದಿದ್ದರೆ ಕ್ರಮವಾಗಿ ಬಿಳಿ ಸಮಾಜ (ಸ್ಥಳೀಯ ರಾಜತ್ವದ ರಾಜರು) ಮತ್ತು ಹಿಂದೂ ಸಮಾಜ ಇಬ್ಬರನ್ನೂ ಘಾಸಿಗೊಳಿಸಿದ್ದವು. ಬ್ರಿಟಿಷರ ಸುಧಾರಣಾವಾದಿ ನಿಲುವಿನಿಂದ ಇವರಿಬ್ಬರೂ ಬೆಂಬಲ ಪಡೆದಿದ್ದರು.

ನೆಲ್ಸನ್ ಮಂಡೇಲಾ ಅವರು ವೆಜೊ ಎಂಬ ಹಳ್ಳಿಯಲ್ಲಿ ಹುಟ್ಟಿದರು. ಅದು ಬ್ರಿಟಿಷ್ ಭಷೆ ನದಿಯ ದಡದ ಮೇಲಿದೆ. ತಂದೆ ಗಾಡ್ಲ ಹೆನ್ರಿ ಫಾಕ್ ನಿಷ್ವಾ ಬ್ರಿಟಿಷ್ ಸೈನ್ಯದಲ್ಲಿ ಸಾಮಾನ್ಯ ಸೈನಿಕನಾಗಿದ್ದನು. ಸ್ಥಳೀಯ ಬುಡಕಟ್ಟು ರಾಜವಂಶಕ್ಕೆ ಸೇರಿದವನಾಗಿದ್ದನು. ಬ್ರಿಟಿಷ್ ಸರ್ಕಾರ ಇವರ ಸೇವೆಗೆ ಮೆಚ್ಚಿ ಇನಾಂ ಜಮೀನು ನೀಡಿತ್ತು.

ಥೆಂಬು ಬುಡಕಟ್ಟಿನವರಾಗಿದ್ದ ಇವರ ವಂಶಸ್ಥರು ಬಿಳಿಯ ರಾಜತ್ವದ ಇಪ್ಪತ್ತು ತಲೆಮಾರುಗಳನ್ನು ಸವೆಸಿದ್ದರು. ಸ್ಥಳೀಯ ದಂಡನಾಯಕನಾಗಿದ್ದ ತಂದೆ ಹೆಸರು ಗಾಡ್ಲಿ ಹೆನ್ರಿ ಫಾಕನಿಷ್ವಾ. ತಂದೆಗೆ ನಾಲ್ವರು ಪತ್ನಿಯರಿದ್ದರು. ಅವರಲ್ಲೂ ಎಡಪಂಥ ಮತ್ತು ಬಲಪಂಥ ಎಂಬ ಭೇದಭಾವ ಇತ್ತು. ಬಲಪಂಥದ ಮೊದಲ ಪತ್ನಿಗೆ ಹುಟ್ಟಿದವನೇ ನೆಲ್ಸನ್ ಮಂಡೇಲಾ: ಜೇಷ್ಠ ಪುತ್ರನಾಗಿ, ನಾಲ್ಕು ಗಂಡು ಮಕ್ಕಳು ಮತ್ತು ಮೂರು ಹೆಣ್ಣು ಮಕ್ಕಳಿದ್ದರು. ತಂದೆ ಪತ್ನಿಯರನ್ನು ಬೇರೆ ಬೇರೆ ಕಡೆ ನೆಲೆಯೂರಿಸಿ ಅಲೆಮಾರಿಯಾಗಿ ಅಲೆಯುತ್ತಿದ್ದನು. ಹಾಗಾಗಿ ತಂದೆಯ ರಕ್ಷಣೆ ಮತ್ತು ಪ್ರೀತಿ ಹೆಚ್ಚು ಮಕ್ಕಳಿಗೆ ಸಿಗಲಿಲ್ಲ.

ಸ್ಥಳೀಯ ವಾದ ವಿವಾದಗಳನ್ನು ಬಗೆಹರಿಸುತ್ತಿದ್ದ ತಂದೆ ಯಾವುದೊ ವಿವಾದದಲ್ಲಿ ತಪ್ಪು

ಮಾಡಿ ಸಿಕ್ಕಿ ಹಾಕಿಕೊಂಡಿದ್ದನು. ಅದರಿಂದ ಮುಖ್ಯಸ್ಥನ ಹುದ್ದೆಯನ್ನು ಕಳೆದುಕೊಳ್ಳಬೇಕಾಯಿತು. ಅದರಿಂದ ತನ್ನ ತಾಯಿಯೊಂದಿಗೆ ಕುನು ಎಂಬ ಹಳ್ಳಿಗೆ ಹೊರಟನು. ಹಳ್ಳಿಗಾಡಿನ ವಾತಾವರಣದಲ್ಲಿ ಬೆಳೆದನು. ಆಟ, ಕಿತ್ತಾಟದೊಂದಿಗೆ ಬಾಲ್ಯವನ್ನು ಕಳೆದನು. ನೆಂಟರಿಷ್ಟರ ಮಕ್ಕಳೊಂದಿಗೆ ಮಣ್ಣಿನಲ್ಲಿ ಬೊಂಬೆ ಮಾಡಿ ಆಡುತ್ತಿದ್ದನು.

ಹಸುಗಳ ಒಡನಾಟದಲ್ಲಿ ಬೆಳೆದು, ಹಾಲು, ಮೊಸರು, ಮಜ್ಜಿಗೆ, ಜೇನು, ಪಕ್ಷಿಗಳೇ ಆಹಾರವಾಗಿದ್ದವು. ಆಗಾಗ ತಂದೆ ಬರುತ್ತಿದ್ದರು. ದೊಡ್ಡದಾದ ಬಟ್ಟೆಗಳನ್ನು ಸಣ್ಣದಾಗಿ ಕತ್ತರಿಸಿ ಕೊಡುತ್ತಿದ್ದರು. ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದರು. ಚಾಪೆ ಮೇಲೆ ಮಲಗುತ್ತಿದ್ದರು. ತಲೆದಿಂಬು ಗೊತ್ತಿರಲಿಲ್ಲ. ಆತನ ಒಂಬತ್ತನೇ ವರ್ಷಕ್ಕೆ ತಂದೆ ತೀರಿಕೊಂಡರು. ತಾಯಿಯ ಪ್ರೀತಿ ಆಪ್ತತೆ ತೀವ್ರವಾಗಿ ಕಾಡಿದವು. ತಂದೆ ತೀರಿಕೊಂಡ ನಂತರ ಕುನು ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ಬಂದರು.

ಕ್ರಿಸ್ತಿಯನ್ ಶಾಲೆಗೆ ತಾಯಿ ಸೇರಿಸಿದರು. ಇಂಗ್ಲಿಷ್ ಚಿಂತನೆಯನ್ನು ಬೆಳೆಸಿಕೊಂಡರು. ಆಧುನಿಕವಾಗಿ ಮನೆ, ವ್ಯವಸಾಯ ಮಾಡುವುದನ್ನು ಕಲಿತಿದ್ದರು. ಶ್ರೀಮತಿ ಡಿಂಗಾನೆ ಎಂಬ ಉಪಾಧ್ಯಾಯಿನಿ ರಾಜನಾದ ನೆಲ್ಸನ್ ಗುಣಗಳು ಹುಡುಗನಲ್ಲಿ ಇವೆ ಎಂದು ಭಾವಿಸಿ ನೆಲ್ಸನ್ ಮಂಡೇಲಾ ಎಂದು ಹೆಸರು ಬದಲಾಯಿಸಿದರು.

ಭೀಮ ಎಂದು ತಂದೆ ತಾಯಿಗಳು ಇಟ್ಟ ಹೆಸರು. ಶಾಲೆಯಲ್ಲಿ ಭೀಮರಾವ್ ಹೊರಗಡೆ ಗೋಣಿ ತಾಟಿನ ಮೇಲೆ ಕುಳಿತು ಕಲಿಯತೊಡಗಿದನು. ರತ್ನಪುರಿ ಜಿಲ್ಲೆಯ ಅಂಬವಾಡೆ ಎಂಬ ಹಳ್ಳಿಯವನಾದ್ದರಿಂದ ಆತನ ಗುರುಗಳು ಭೀಮರಾವ್ ಅಂಬೇಡ್ಕರ್ ಎಂದು ಹೆಸರನ್ನು ವಿಸ್ತರಿಸಿದರು. ತಂದೆಯ ಹೆಸರು ಸೇರಿಕೊಂಡು ಭೀಮರಾವ್ ರಾಂಜಿ ಸಕ್ಪಾಲ್ ಅಂಬೇಡ್ಕರ್ ಆದರು. ತಂದೆಗೆ ಇಂಗ್ಲಿಷ್ ತಿಳಿದಿತ್ತು. ಬ್ರಿಟಿಷರ ಸೈನ್ಯದಲ್ಲಿ ಕೆಲಸಕ್ಕಿದ್ದನು. ಮಹರ್ ಸೈನ್ಯ ತುಕಡಿಯನ್ನು ರದ್ದುಪಡಿಸಿದಾಗ ಪ್ರತಿಭಟಿಸಿ ರದ್ದತಿಯನ್ನು ವಜಾ ಮಾಡಿಸಿದರು. ತಂದೆಯಿಂದ ಹೆಚ್ಚು ಪ್ರಭಾವಿತರಾಗಿದ್ದರು. ಚಿಕ್ಕವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ಸೋದರತ್ತೆಯ ಅಕ್ಕರೆಯಲ್ಲಿ ವಿದ್ಯಾಭ್ಯಾಸ ಮಾಡಿದರು. ವಿದ್ಯಾಭ್ಯಾಸ ನಿಲ್ಲಿಸಿ ಬಟ್ಟೆ ಗಿರಣಿಯಲ್ಲಿ ಕೆಲಸಕ್ಕೆ ಸೇರುವ ಪ್ರಸಂಗವೂ ಬಂದಿತ್ತು. ಆದರೆ ವಿದ್ಯಾಭ್ಯಾಸ ಮಾಡಿಯೇ ತೀರಬೇಕೆಂಬ ಹಠ ಹೊಂದಿದ್ದರಿಂದ ತುಂಬಾ ಕಠಿಣ ಪರಿಸ್ಥಿತಿಯಲ್ಲೂ ತಂದೆಯವರು ವಿದ್ಯಾಭ್ಯಾಸ ಕೊಡಿಸಿದರು.

ವಿದ್ಯಾಭ್ಯಾಸ

ಅಸ್ಪೃಶ್ಯರಿಗೆ ಪಾಠ ಮಾಡಲು ನೇರವಾಗಿಯೇ ನಿರಾಕರಿಸುತ್ತಿದ್ದು, ಅಸ್ಪೃಶ್ಯರ ಪಾಟಿ ಪುಸ್ತಕಗಳನ್ನು ಮುಟ್ಟಿದರೆ, ದನಿ ಕೇಳಿದರೆ ಮೈಲಿಗೆ ಆಗುವುದೆಂದು ಶಿಕ್ಷಣಲೋಕ ನಂಬಿದ್ದ ಕಾಲ. ಸಹಾನುಭೂತಿಯಿಂದ ಕಾಣುತ್ತಿದ್ದ ಶಿಕ್ಷಕರು ಅಲ್ಲಲ್ಲಿ ಇದ್ದರು. ಮೆಟ್ರಿಕ್ಯುಲೇಷನ್ ಪಾಸಾದ ಸಂದರ್ಭದಲ್ಲಿ ಅಭಿನಂದನ ಸಭೆ ನಡೆದಾಗ ಗೌತಮ ಬುದ್ಧ ಪುಸ್ತಕ ಉಡುಗೊರೆಯಾಗಿ ಪಡೆದು ಮಹತ್ವಪೂರ್ಣವಾದ ಪ್ರಭಾವವನ್ನು ಪಡೆದರು. ಇಂಟರ್‌ಮಿಡಿಯಟ್ ನಂತರ ಓದು

ಮುಂದುವರಿಸಲು ಆರ್ಥಿಕ ತೊಂದರೆ ಅನುಭವಿಸಿದರು. ಬರೋಡೆಯ ಮಹಾರಾಜರ ಆರ್ಥಿಕ ಸಹಾಯ ಶ್ರೀ ಕೇಳುಸ್ಕರ್ ಎಂಬ ಶಿಕ್ಷಕರ ಮೂಲಕ ದೊರೆಯಿತು. ವಿದ್ಯಾರ್ಥಿ ವೇತನದಿಂದ ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಬಿ. ಎ. ಓದಲು ಅವಕಾಶ ಸಿಕ್ಕಿತು. ಆದರೆ ವಿದ್ಯಾಭ್ಯಾಸದ ನಂತರ ಹತ್ತು ವರ್ಷಗಳ ಸೇವೆ ಸಲ್ಲಿಸಲು ಕರಾರು ಬರೆದುಕೊಟ್ಟಿದ್ದರು.

ನೆಲ್ಸನ್ ಕ್ರಿಸ್ತಿಯನ್ ಸಮುದಾಯಗಳ ಬೆಂಬಲದಿಂದ ಸಾಮಾನ್ಯ ವಿದ್ಯಾಭ್ಯಾಸ ಪಡೆದರು. ಕಪ್ಪು ಜನರಿಗೆ ಶಿಕ್ಷಣ ಪಡೆಯುವ ಸಂಪೂರ್ಣ ಹಕ್ಕಿರಲಿಲ್ಲ. ಬಿಳಿಯ ಜನರಿಗೆ ಸೇವೆ ಸಲ್ಲಿಸುವುದು ಕರ್ತವ್ಯವಾಗಿತ್ತು. ಬ್ರಿಟಿಷರ ಶಿಕ್ಷಣದಿಂದ ಉದಾರವಾಗಿ ಗುಣಗಳನ್ನು ಪಡೆದರು. ಸಮಾನತೆ, ಸಹೋದರತೆ, ಸಮನ್ವಯ ಭಾವ, ಸಾಮಾಜಿಕ ಸಾಮರಸ್ಯ ಬೆಳೆಸಿಕೊಂಡರು. ಇವು ಇಬ್ಬರ ವ್ಯಕ್ತಿತ್ವಗಳ ಸಾಮಾನ್ಯ ಅಂಶಗಳಾಗಿ ನನಗೆ ಕಾಣಿಸಿವೆ. ಅಲ್ಪಸಂಖ್ಯಾತರೆಂಬ ಮನೋಭಾವದಿಂದ ಬಹು ಜನರೊಂದಿಗೆ ಹೊಂದಿಕೊಳ್ಳಲು ಹೆಣಗಾಡಿದರು. ಇಬ್ಬರಿಗೂ ಸಾಮಾನ್ಯ ಎನ್ನಬಹುದಾದ ಕಠಿಣ ಪರಿಸ್ಥಿತಿಗಳನ್ನು ಎದುರಿಸಿ ತಮ್ಮ ತಮ್ಮ ಜನಾಂಗದ ವಿಮೋಚನೆಗಾಗಿ ಏನಾದರೂ ಮಾಡಬೇಕೆಂಬ ತವಕ ವಿದ್ಯಾರ್ಥಿ ದೆಸೆಯಿಂದಲೇ ಮನಸ್ಸಿನಲ್ಲಿ ಅಂಕುರಿಸಿತು. ವಿದೇಶದಲ್ಲಿ ಎಂ. ಎ., ಪಿಎಚ್.ಡಿ., ಡಿ.ಎಸ್.ಸಿ. ಕಾನೂನು ಪದವಿ ಪಡೆದು ಸ್ವದೇಶದಲ್ಲಿ ಹೋಟೆಲಿನಲ್ಲೂ ಸಹ ಊಟ ವಸತಿಗೆ ಬಹಳ ಬವಣೆ ಪಡಬೇಕಾಯಿತು. ಮಹಾರಾಜರ ಮಿಲಿಟರಿ ಕಾರ್ಯದರ್ಶಿಯಾಗಿ ನೇಮಕಗೊಂಡರು. ವಿರೋಧವನ್ನು ಎದುರಿಸಿ ಅವಮಾನ ತಡೆಯಲಾರದೆ ರಾಜೀನಾಮೆ ಸಲ್ಲಿಸಿದರು. ಅಧ್ಯಯನವನ್ನು ಮುಂದುವರಿಸಿಕೊಂಡೆ ಅವಕಾಶ ಸಿಕ್ಕಾಗಲೆಲ್ಲ ಜನಾಂಗದ ವಿಮೋಚನೆಗೆ ಪೂರಕವಾಗಿ "ಮೂಕನಾಯಕ" ಎಂಬ ಪಾಕ್ಷಿಕ ಪತ್ರಿಕೆ, "ಬಹಿಷ್ಕೃತ ಭಾರತ" ಎಂಬ ವಾರಪತ್ರಿಕೆಯನ್ನು ತಂದರು.

ನೆಲ್ಸನ್ನರು ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕವಾಗಿ ಬೆಳೆದು ಬಿಳಿಯರ ಆಡಳಿತದ ಅಸಮಾನತೆಯ ಕಾನೂನುಗಳನ್ನು ಅರಿತುಕೊಂಡರು. ಕಠಿಣ ಕೆಲಸಗಳಿಗೆ ತಮ್ಮನ್ನು ಒಗ್ಗಿಸಿಕೊಂಡರು. ಆಧುನಿಕತೆಗೆ ತಮ್ಮ ಮನಸ್ಸನ್ನು ತೆರೆದುಕೊಂಡರು. ಕಾಲೇಜಿನಲ್ಲಿ ಕರಿಯರ ಸಮಸ್ಯೆಗಳ ಕುರಿತು ಚಿಂತಿಸಿ ಪರಿಹಾರ ಕಂಡು ಹಿಡಿಯಲು ಪ್ರಯತ್ನಿಸಿದರು. ಅಬ್ರಹಾಂ ಲಿಂಕನ್ ಕುರಿತ ನಾಟಕವಾಡಿದರು. ಅಬ್ರಹಾಂ ಲಿಂಕನ್ ಅಮೆರಿಕಾವನ್ನು ವಿಮೋಚನೆ ಮಾಡಿದಂತೆ ತನ್ನ ನಾಡಿನ ಜನರನ್ನು ವಿಮೋಚನೆಗೊಳಿಸಬೇಕೆಂದು ರೋಮಾಂಚನಗೊಂಡರು.

ಹೋರಾಟದ ಹೊಸ್ತಿಲಲ್ಲಿ

ಎಸ್.ಕೆ. ಬೋಳೆ, ಸಾವಕರ್‌ರೊಂದಿಗೆ ಬಹಿಷ್ಕೃತ ಸಮಾಜ ಹಿತಕಾರಿಣಿ ಸಭಾದ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡರು. ಸಾರ್ವಜನಿಕ ಸ್ಥಳಗಳಿಗೆ ಪ್ರವೇಶದ ಕಾನೂನು ಉಪಯೋಗಿಸಿಕೊಂಡು ದೇವಸ್ಥಾನ, ಬಾವಿ, ಹೋಟೆಲ್ ಪ್ರವೇಶದ ಮೂಲಕ ಅಧಿಕಾರವನ್ನು ಸ್ಥಾಪಿಸಲು ಪ್ರಯತ್ನಿಸಿ ಜಾಗೃತಿ ಉಂಟುಮಾಡಿದರು. ಜವಳಕರ್, ಜೇಡೆಯವರಂಥ ಪಂಜಾಬ್‌ರಾವ್ ದೇಶಮುಖ್, ಗಾಯಕವಾಡರ ಒಡನಾಟದಲ್ಲಿ ಸಮಾವೇಶ ನಡೆಸಿದರು.

ಸಮ್ಮೇಳನದ ಗೊತ್ತುವಳಿಗಳು — ಸಮಾನಾವಕಾಶಗಳನ್ನು ಕೇಳುವುದು, ಅಸಮಾನತೆಯ ತಾರತಮ್ಯದ ಧರ್ಮಗ್ರಂಥಗಳನ್ನು ಸುಡುವುದು, ಹಿಂದೂ ಸಮಾಜದಲ್ಲಿ ಒಂದೇ ಜಾತಿ ಇರಬೇಕು. ಅಂಬೇಡ್ಕರರು ಈ ಪ್ರಯತ್ನ ಮಾಡುವಾಗ ಭಾರತೀಯ ಕಾಂಗ್ರೆಸ್‌ನ ನಲವತ್ತು ಅಧಿವೇಶನಗಳ ನಂತರವೂ ಅಸ್ಪೃಶ್ಯರಿಗೆ ಸಾರ್ವಜನಿಕವಾಗಿ ಕುಡಿಯಲು ನೀರು ಸಿಕ್ಕುತ್ತಿರಲಿಲ್ಲ.

ನೆಲ್ಸನ್ ಮಂಡೇಲರು ಕಾನೂನು ವಿದ್ಯಾಭ್ಯಾಸ ಮುಗಿಸಿದರು. ಬೇರೆ ಕಂಪನಿಯಲ್ಲಿ ಅಲ್ಪಕಾಲೀನ ಕೆಲಸಕ್ಕೆ ಸೇರಿ ಆದಾಯ ಪಡೆಯುತ್ತಿದ್ದರು.

ಓದುವಾಗಲೇ ವಿವಾಹ ಮಾಡಿಕೊಂಡ ಅಂಬೇಡ್ಕರ್ ಒಂದು ಕಡೆ ಇದ್ದರೆ ನೆಲ್ಸನ್ ಕೆಲಸಕ್ಕೆ ಸೇರಿದ ನಂತರ ಎವೆ ಲಿನ್ ಮಸೆ ಎಂಬುವರನ್ನು ಸರಳ ನೋಂದಣಿ ವಿವಾಹವಾದರು. ಇಬ್ಬರ ಪತ್ನಿಯರೂ ಸರಳ ಹಳ್ಳಿಗಾಡಿನ ವ್ಯಕ್ತಿತ್ವ ಹೊಂದಿದ್ದು ಪತಿಗಳ ಕೆಲಸಗಳಲ್ಲಿ ಸಹಕಾರಿಯಾಗಿ ದುಡಿಯುತ್ತಿದ್ದರು. ನೆಲ್ಸನ್ ಸಾಂಪ್ರದಾಯಿಕವಾಗಿ ನೆಂಟರಿಷ್ಟರಿಗೆ ವಿವಾಹದ ಊಟ ಉಡುಗೊರೆ ನೀಡಲಿಲ್ಲ. ಅಂಬೇಡ್ಕರ್ ವಿವಾಹವು ಮೀನು ಮಾರುಕಟ್ಟೆಯಲ್ಲಿ ರಾತ್ರಿ ಹೊತ್ತು ಸಾಂಪ್ರದಾಯಿಕವಾಗಿ ನಡೆಯಿತು.

ಅಂಬೇಡ್ಕರ್ ಹಲವು ಸಮಿತಿಗಳಲ್ಲಿ ಸದಸ್ಯರಾಗಿ ದಲಿತರ ಅಭಿವೃದ್ಧಿ ಕುರಿತು ಸಲಹೆ ಮಾರ್ಗದರ್ಶನ ಮಾಡಿದರು. ರಾಷ್ಟ್ರಮಟ್ಟದ ರಾಜಕೀಯ ನಾಯಕರ ಮಧ್ಯದಲ್ಲಿ ಗುರುತಿಸಲ್ಪಟ್ಟರು. ಬಾಂಬೆ ಪ್ರೆಸಿಡೆನ್ಸಿಗೆ ಸದಸ್ಯರಾಗಿ ನಾಮಕರಣಗೊಂಡರು. ಭಾರತದ ರಾಜ್ಯಾಂಗ ಸ್ವರೂಪವನ್ನು ನಿರ್ಧರಿಸುವ ಸಮಿತಿಗೆ ಸೇರಿದರು.

ಎರಡನೆ ದುಂಡುಮೇಜಿನ ಪರಿಷತ್ತಿಗೆ ಅಂಬೇಡ್ಕರ್‌ರೊಂದಿಗೆ ಶಾಸ್ತ್ರಿ, ಸಪ್ರು, ಜಯಕರ್, ಸೆಟಲ್‌ವಾಡ, ಮಾಲವೀಯ, ಸರೋಜಿನಿನಾಯ್ಡು, ಗಾಂಧೀಜಿ, ಮಿರ್ಜಾ, ಜಿನ್ನಾ, ರಾಮಸ್ವಾಮಿ ಮೊದಲಿಯರ್ ಮುಂತಾದ ಗಣ್ಯರನ್ನು ಆಹ್ವಾನಿಸಲಾಯಿತು.

ಅಸ್ಪೃಶ್ಯರು ಭಾರತ ದೇಶದಲ್ಲಿ ಅಲ್ಪಸಂಖ್ಯಾತರು ಎಂಬ ವಾದವನ್ನು ಅಂಬೇಡ್ಕರ್ ಮಂಡಿಸಿ ಅವರಿಗೆ ವಿಶೇಷ ಸವಲತ್ತುಗಳನ್ನು ನೀಡುವಂತೆ ಕೋರಿದರು. ವಿಧಾನಮಂಡಲಗಳಲ್ಲಿ ಜನಸಂಖ್ಯೆಯ ಪ್ರಮಾಣದಲ್ಲಿ ಪ್ರಾತಿನಿಧ್ಯ, ಆರ್ಥಿಕ ಸಂಪನ್ಮೂಲಗಳು, ನಾಗರಿಕ ಸೌಲಭ್ಯಗಳನ್ನು ವಿಶೇಷವಾಗಿ ನೀಡಬೇಕು. ಮತದಾನದಲ್ಲಿ ಎರಡು ಮತಗಳನ್ನು ಕೊಡಬೇಕು. ಭೂಮಾಲಿಕರಿಗೆ ವಿಶೇಷ ಪ್ರಾತಿನಿಧ್ಯವಿರಬೇಕಿಲ್ಲ ಎಂದು ಪ್ರತಿಪಾದಿಸಿದರು. ಕಾಂಗ್ರೆಸ್ ಪಕ್ಷದ ಪ್ರತಿನಿಧಿಯಾಗಿ ದುಂಡುಮೇಜಿಗೆ ಬಂದವರು ಮುಸ್ಲಿಂ, ಸಿಖ್ಖರಿಗೆ ಕೆಲವು ವಿಶೇಷ ಸವಲತ್ತುಗಳನ್ನು ನೀಡಲು ಒಪ್ಪಿದರು. ಆದರೆ ಅಸ್ಪೃಶ್ಯರು ಹಿಂದೂ ಧರ್ಮದ ಗುಲಾಮರಾಗಿದ್ದರಿಂದ ಬೇರ್ಪಡಲು ಅವಕಾಶ ನೀಡಲಾರೆ ಎಂದು ಉಪವಾಸವನ್ನು ಯರವಾಡ ಜೈಲಿನಲ್ಲಿ ಕೈಗೊಂಡರು. ಮುಂದೆ ಬ್ರಿಟಿಷರು ಕೊಟ್ಟಿದ್ದ ಸವಲತ್ತುಗಳನ್ನು ರಾಜ್ಯಾಧಿಕಾರದಿಂದ ದೂರಮಾಡಲು ಪೂನಾ ಒಪ್ಪಂದಕ್ಕೆ ಅಂಬೇಡ್ಕರರನ್ನು ಒತ್ತಾಯದಿಂದ ಒಪ್ಪಿಸಲಾಯಿತು.

ನೆಲ್ಸನ್ ೧೯೧೨ರಲ್ಲಿ ಪ್ರಾರಂಭವಾದ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ಯೂತ್

ಲೀಗ್‌ನಲ್ಲಿ ಕೆಲಸ ಮಾಡಿದರು. ೧೯೪೧ರಲ್ಲಿ ಚರ್ಚಿಲ್ ಮತ್ತು ರೂಸೆವೆಲ್ಟ್ ಮಧ್ಯೆ ಒಂದು ಒಪ್ಪಂದಕ್ಕೆ ಬಂದರು. ಕರಿಯರ ಗೌರವದ ಕುರುಹಾಗಿ ಎ.ಎನ್.ಸಿ. ಕರಿಯರಲ್ಲಿ ಹೋರಾಟದ ಮನೋಭಾವವನ್ನು ಬಿಳಿಯರ ಬಗ್ಗೆ ಸಿಟ್ಟು ಅಸಹನೆಯನ್ನು ಬೆಳೆಸುತ್ತಿತ್ತು. ಒಪ್ಪಂದದ ಮುಖ್ಯಾಂಶಗಳು- ಕರಿಯರ ಭೂಮಿ ಖರೀದಿಸಲು ಅನುಭೋಗಿಸಲು ಅನುವು ಮಾಡಿಕೊಡಬೇಕು. ಕರಿಯರನ್ನು ಎರಡನೆ ದರ್ಜೆ ಪ್ರಜೆಗಳನ್ನಾಗಿಸಿರುವ ಕಾನೂನುಗಳನ್ನು ವಾಪಸ್ಸು ಪಡೆಯಬೇಕು. ಇವುಗಳನ್ನು ಆಫ್ರಿಕನ್ ಬೇಡಿಕೆಗಳೆಂದು ಕರೆದು ಎ.ಎನ್.ಸಿ. ಜಾರಿಗೆ ಒತ್ತಾಯಿಸಿತು. ಸರಕಾರ ಮಾಡಿಕೊಂಡ ಒಪ್ಪಂದಕ್ಕೆ ಲವಲೇಶವೂ ಕಾನೂನಿನ ಬೆಂಬಲ ಸಿಗಲಿಲ್ಲ.

೧೯೪೩ರಲ್ಲಿ ಎ.ಎನ್.ಸಿ.ಯ ರಾಷ್ಟ್ರೀಯ ಅಧ್ಯಕ್ಷರಾಗಿ ಡಾ. ಕ್ಸುಮಾ ಆಯ್ಕೆಯಾದರು. ಕರಿಯರಲ್ಲಿ ಸಿರಿವಂತ ಕುಟುಂಬದಿಂದ ಬಂದಿದ್ದ ಡಾ. ಕ್ಸುಮಾ ಸಾರ್ವಜನಿಕವಾಗಿ ಒಳ್ಳೆಯ ಸಂಬಂಧಗಳನ್ನಿಟ್ಟುಕೊಂಡಿದ್ದರು. ಕರಿಯರನ್ನು ಅತಿ ಶೀಘ್ರದಲ್ಲಿ ಸಂಘಟಿಸುವ ಸಾಮರ್ಥ್ಯ ಅವರಲ್ಲಿತ್ತು. ಕರಿಯರಿಗೆ ಮತದಾನದ ಹಕ್ಕನ್ನು ಕೊಡಿಸುವ ನಿಟ್ಟಿನಲ್ಲಿ ಅವರದು ಪ್ರಥಮ ಪ್ರಾಶಸ್ತ್ಯ. ಅವರು ಕರಿಯರನ್ನು ವಿಮೋಚನೆ ಮಾಡಲು ಶಾಂತಿಮಾರ್ಗ, ಹೃದಯ ಪರಿವರ್ತನೆ ಮಾರ್ಗದಿಂದ ಸಾಧಿಸಲು ಹೆಣಗಾಡಿದರು. ಎ.ಎನ್.ಸಿ.ಯ ಯೂತ್ ಲೀಗ್‌ನಲ್ಲಿದ್ದ ನೆಲ್ಸನ್ನರಿಗೆ ಕರಿಯರು, ಕಮ್ಯೂನಿಷ್ಟರು ಮತ್ತು ಭಾರತೀಯರನ್ನು ಒಗ್ಗೂಡಿಸಿ ಬಂದೂಕಿನ ಮೂಲಕವಾದರೂ ಸರಿ ಹೋರಾಟಕ್ಕಿಳಿಯಬೇಕು ಎಂಬ ನಿಲುವಿಗೆ ಅಂಟಿಕೊಂಡಿದ್ದರು. ಸ್ನೇಹಿತರ ಮೂಲಕ ಚರ್ಚೆಯಲ್ಲಿ ತೊಡಗಿ ಕಮ್ಯೂನಿಷ್ಟ ಸಿದ್ಧಾಂತವನ್ನು ಒಪ್ಪಿಕೊಳ್ಳುವಂತೆ ಮಾಡಲು ನೋಡಿದರು.

ದಕ್ಷಿಣ ಆಫ್ರಿಕಾದಲ್ಲಿ ಶ್ರೀ ಎಂ.ಕೆ. ಗಾಂಧಿ ನಾಯಕತ್ವದಲ್ಲಿ ಬಿಳಿಯ ಸರಕಾರದ ವಿರುದ್ಧ ಚಳವಳಿ ನಡೆಯಿತು. ಕ್ರಿಯಾಶೀಲವಾಗಿ ಭಾರತೀಯ ಜನರ ಚಳವಳಿಯನ್ನು ನೆಲ್ಸನ್ ಗುರ್ತಿಸಿದರು. ಭಾರತೀಯ ಬಣ್ಣದ ಅಸಮಾನತೆಯನ್ನು ವಿರೋಧಿಸಿ ಹೋರಾಡಿದರು. ಆ ಹೋರಾಟದಲ್ಲಿ ೨೦೦೦ ಜನರನ್ನು ಜೈಲಿಗೆ ಹಾಕಿದರು. ನಾಯಕರಿಗೆ ಚಿತ್ರಹಿಂಸೆ ನೀಡಿದರು. ಇದನ್ನು ವಿರೋಧಿಸಿ ಶ್ರೀ ಎಂ.ಕೆ. ಗಾಂಧಿ ಹೋರಾಡಿದರು.

೧೯೪೭ರ ಸುಮಾರಿಗೆ ಎ.ಎನ್.ಸಿ.ಯಲ್ಲಿ ಪೂರ್ಣಾವಧಿ ಕಾರ್ಯಕರ್ತರಿರಲಿಲ್ಲ. ಎ.ಎನ್.ಸಿ.ಯು ಬಿಳಿಯ ಕಮ್ಯೂನಿಷ್ಟರನ್ನು ನಂಬುತ್ತಿರಲಿಲ್ಲ. ಆಫ್ರಿಕನ್ನರಿಗಾಗಿ ಆಫ್ರಿಕಾ ಎಂಬ ವಾದ ಹೆಚ್ಚು ಹೆಚ್ಚಾಗಿ ಬೆಳೆಯಿತು. ಇದೇ ವೇಳೆಗೆ ಕಮ್ಯೂನಿಷ್ಟರನ್ನು ಸೇರಿಸಿಕೊಂಡು ಹಿಂಸಾಕಾಂಡಕ್ಕಿಳಿಯುವ ಕಾರ್ಯಕ್ರಮವನ್ನು ಬೆಂಬಲಿಸದ ಕಾರಣಕ್ಕೆ ಡಾ. ಮೊರೊಕೊ ಎಂಬುವರನ್ನು ಹೊಸದಾಗಿ ಎ.ಎನ್.ಸಿ. ಯ ಅಧ್ಯಕ್ಷರನ್ನಾಗಿಸಿದರು. ಎ.ಎನ್.ಸಿ.ಯ ಕಾರ್ಮಿಕ ಘಟಕಕ್ಕೆ ೭೦,೦೦೦ ಕರಿಯರನ್ನು ಒಗ್ಗೂಡಿಸಲಾಯಿತು. ದೇಶದ ೪ ಲಕ್ಷ ಕಾರ್ಮಿಕರಲ್ಲಿ ೭೦ ಸಾವಿರ ಕಾರ್ಮಿಕರ ಭತ್ಯೆ, ದುಡಿತ ಒಂದಕ್ಕೊಂದು ಸಂಬಂಧವೇ ಇರಲಿಲ್ಲ. ಅದರಿಂದ ಅವರನ್ನು ಸಂಘಟಿಸಿ ಹಕ್ಕುಗಳನ್ನು ಸ್ಥಾಪಿಸಲು ಪ್ರಯತ್ನಿಸಿದರು.

ಅಸ್ಪೃಶ್ಯರಿಗೆ ರಕ್ಷಣೆಯಿಲ್ಲದೆ ಸವರ್ಣೀಯ ಬಹುಸಂಖ್ಯಾತರಿಗೆ ರಾಜ್ಯಾಧಿಕಾರ ನೀಡುವುದನ್ನು ಅಂಬೇಡ್ಕರ್ ಶತಾಯ ಗತಾಯ ವಿರೋಧಿಸಿದರು. ಇದರಿಂದ ದೇಶದ್ರೋಹಿ, ಸ್ವರಾಜ್ಯ ವಿರೋಧಿ

ಎಂಬ ಬಿರುದುಗಳು ಉಚಿತವಾಗಿ ಸಿಕ್ಕಿದವು. ಅಸ್ಪೃಶ್ಯರ ಹಿತರಕ್ಷಕನೆಂಬಂತೆ ಮಾತಾಡಿದ ಶ್ರೀ ಎಂ.ಕೆ. ಗಾಂಧಿ ಹಿಂದೂ ಧರ್ಮದ ಉದ್ಧಾರಕ್ಕಾಗಿ, ಹಿಂದುಗಳಿಂದ ಅಸ್ಪೃಶ್ಯರ ಬೇರ್ಪಡೆಯನ್ನು ಪ್ರಾಣಾಂತಿಕವಾಗಿ ವಿರೋಧಿಸುವುದಾಗಿ, ಪ್ರತ್ಯೇಕ ಮತ ಕ್ಷೇತ್ರಗಳನ್ನು ರದ್ದುಗೊಳಿಸಲು ಆಮರಣ ಉಪವಾಸ ಕೈಗೊಂಡರು. ಈ ಸನ್ನಿವೇಶವನ್ನು ಸಮಚಿತ್ತದಿಂದ, ದೃಢನಿರ್ಧಾರದಿಂದ ಅಂಬೇಡ್ಕರ್ ಎದುರಿಸಿದರು. ಅಸ್ಪೃಶ್ಯತೆಯ ವಿಷಯದಲ್ಲಿ ಹಿಂದುಗಳಿಗೆ ಪರಿವರ್ತನೆಯ ಮೂಲಕ ತಾವಾಗಿಯೇ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಅವಕಾಶವಿರಬೇಕೆಂದು ಶ್ರೀ ಎಂ. ಕೆ. ಗಾಂಧಿ ಅಭಿಪ್ರಾಯವಾದರೆ ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಅಸ್ಪೃಶ್ಯರ ಪ್ರಗತಿಯಾದರೆ ದೇವಾಲಯ ಪ್ರವೇಶ, ಧಾರ್ಮಿಕ ಚಟುವಟಿಕೆಗಳಂಥ ಸಮಸ್ಯೆ ತಾವಾಗಿಯೇ ಬಗೆಹರಿಯುತ್ತವೆ ಎಂಬುದು ಅಂಬೇಡ್ಕರ್ ಧೋರಣೆಯಾಗಿತ್ತು. ಹಿಂದೂ ಧರ್ಮದ ಅವಿಭಾಜ್ಯ ವ್ಯವಸ್ಥೆಗೆ ವರ್ಣಾಶ್ರಮ ಎಂದು ಶ್ರೀ ಗಾಂಧಿ ಹೇಳಿದರೆ ವರ್ಣಾಶ್ರಮವನ್ನು ತೊಡೆದು ಹಾಕಬೇಕೆಂಬುದು ಅಂಬೇಡ್ಕರ್ ನಿಲುವಾಗಿತ್ತು. ಅದು ಸಾಧ್ಯವಾಗದಿದ್ದಲ್ಲಿ ಹಿಂದು ಧರ್ಮವನ್ನು ಅಸ್ಪೃಶ್ಯರು ತ್ಯಜಿಸಿ ಬೇರೊಂದು ಧರ್ಮವನ್ನು ಸ್ವೀಕರಿಸಲು ಹೇಳಲು ಮರೆಯಲಿಲ್ಲ. ಅಸ್ಪೃಶ್ಯ ನಿವಾರಣೆಗೆ ಹಿಂದೂ ಸಮಾಜದಿಂದ ಹೊರಬಂದು ಆದಿ ದ್ರಾವಿಡ ಧರ್ಮವನ್ನು ಪುನರುಜ್ಜೀವನಗೊಳಿಸಬೇಕೆಂದು ಒಂದು ಸಮ್ಮೇಳನದಲ್ಲಿ ಅಭಿಪ್ರಾಯಪಡಲಾಯಿತು. ಮತಾಂತರದಿಂದ ಎಲ್ಲಿಗೆ ಹೋದರೂ ಹಕ್ಕುಗಳಿಗಾಗಿ ಹೋರಾಟ ಕಟ್ಟಿಟ್ಟದ್ದೆ ಎಂದು ಅಂಬೇಡ್ಕರ್ ಎಚ್ಚರಿಸಿದರು. ಅಂಬೇಡ್ಕರ್‌ಗೆ ಆಪ್ತರಾದ ಶಿವರಾಜ್, ಮುಂಜಿ, ಎಂ. ಸಿ. ರಾಜಾ ಮುಂತಾದವರೊಡನೆ ಮತಾಂತರ ಕುರಿತು ಚರ್ಚಿಸುತ್ತಿದ್ದರು. ಶ್ರೀ ಎಂ. ಕೆ. ಗಾಂಧಿ ಮತ್ತು ಅಂಬೇಡ್ಕರ್ ರಾಜಕೀಯವಾಗಿ ಎರಡು ಧ್ರುವಗಳಾಗಿ ನಿಂತರು. ಪೂನಾ ಒಪ್ಪಂದದ ಪರಿಣಾಮಗಳನ್ನು ಸಂಕುಚಿತಗೊಳಿಸುತ್ತಾ ಬಂದರು. ಹಿಂದುಗಳ ಮನೋವೃತ್ತಿಯಲ್ಲಿ ಯಥಾಸ್ಥಿತಿ ಮುಂದುವರಿದಿತ್ತು. ಹಿಂದು ಧರ್ಮ ಬರಿ ಸೋಲುಗಳ ಕಥೆ ಎಂದು ಅಂಬೇಡ್ಕರ್ ಜರಿದರೆ ಪ್ರಪಂಚದ ಯಾವ ಧರ್ಮವೂ ದೋಷ ರಹಿತ ಎನಿಸಲಾರದು ಎಂದು ಶ್ರೀ ಗಾಂಧಿ ತಿಳಿಸುತ್ತಿದ್ದರು.

೧೯೩೬ರಲ್ಲಿ ಮೀಸಲು ಸ್ಥಾನಗಳ ಚುನಾವಣೆಗಾಗಿ ಸ್ವತಂತ್ರ ಕಾರ್ಮಿಕ ಪಕ್ಷ ಸ್ಥಾಪಿಸಿದರು. ವ್ಯಾಪಕ ಪ್ರಚಾರ ಮಾಡಿ ಪಕ್ಷವನ್ನು ಸಂಘಟಿಸಿದರು. ಅವರ ಅಧ್ಯಕ್ಷತೆಯ ಸ್ವತಂತ್ರ ಕಾರ್ಮಿಕ ಪಕ್ಷ ೧೭ರಲ್ಲಿ ೧೫ ಸ್ಥಾನಗಳನ್ನು ಬಾಂಬೆ ವಿಧಾನಸಭೆಯಲ್ಲಿ ಪಡೆದುಕೊಂಡರು.

ಬಹುಮತದ ಕಾಂಗ್ರೆಸ್ ಸರಕಾರದಿಂದ ಕೆಲಸಗಳನ್ನು ಮಾಡಿಸಿದರು. ಮಹರರ ವೇತನಪದ್ಧತಿ (ಬಿಟ್ಟಿ ಸೇವೆ) ರದ್ಧತಿ, ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ನಿಗದಿ, ನೀರಾವರಿ ದರ ಇಳಿಕೆ, ಗೇಣಿದಾರರು ನೀಡಬೇಕಿದ್ದ ಗೇಣಿ, ಕಂದಾಯ ರದ್ದು ಮುಂತಾದವು.

೧೯೪೨ ರಲ್ಲಿ ವೈಸರಾಯರು ತಮ್ಮ ಕಾರ್ಯಕಾರಿ ಮಂಡಲಿಯನ್ನು ವಿಸ್ತರಿಸಿ ಅಂಬೇಡ್ಕರರಿಗೆ ಕಾರ್ಮಿಕ ಇಲಾಖೆಯನ್ನು ಕೊಡಲಾಗಿತ್ತು. ಬ್ರಿಟಿಷ್ ಪ್ರಧಾನಿಗೆ ಪೂನಾ ಒಪ್ಪಂದ ಕುರಿತಂತೆ ಆದ ವೈಫಲ್ಯವನ್ನು ವಿವರಿಸಿದರು. ಕಾಂಗ್ರೆಸ್ ಕಾರ್ಯಕರ್ತರು ಅಂಬೇಡ್ಕರ್ ಮಗ ಯಶವಂತ ನಡೆಸುತ್ತಿದ್ದ ಮುದ್ರಣಾಲಯಕ್ಕೆ ಬೆಂಕಿ ಹಚ್ಚಿದರು. ಪೀಪಲ್ಸ್ ಎಜುಕೇಷನ್ ಸೊಸೈಟಿ ಮೂಲಕ

ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದರು. ಜಾತಿ ವಿನಾಶ, ಶೂದ್ರರು ಯಾರು, ಅಸ್ಪೃಶ್ಯರಿಗೆ ಕಾಂಗ್ರೆಸ್ ಏನು ಮಾಡಿದೆ, ಗಾಂಧಿ ಮತ್ತು ಗಾಂಧಿವಾದ, ಪಾಕಿಸ್ತಾನ ಮತ್ತು ಹಿಂದುಸ್ಥಾನ ರಾಜ್ಯಗಳು ಮತ್ತು ಅದರ ಅಲ್ಪ ಸಂಖ್ಯಾತರು ಮುಂತಾದ ಗ್ರಂಥಗಳನ್ನು ಬರೆದರು.

ರಾಜ್ಯಾಂಗ ರಚನಾ ಸಭೆಯಲ್ಲಿ ಅಂಬೇಡ್ಕರ್ ಅಸ್ಪೃಶ್ಯರಿಗೆ ಕಾದಿರಿಸಲಾದ ಮತಕ್ಷೇತ್ರಗಳಲ್ಲಿ ಅಸ್ಪೃಶ್ಯರಿಗೆ ವಿಶೇಷ ಮತದಾನದ ಅಧಿಕಾರವಿರಬೇಕು. ಇತರೆ ಸಾಮಾನ್ಯ ಕ್ಷೇತ್ರಗಳಲ್ಲಿ ಸಾಮಾನ್ಯ ಮತದಾನದ ಅಧಿಕಾರವಿರಬೇಕು. ಜನತಂತ್ರ ಜೀವನ ಕ್ರಮದಲ್ಲಿ ಒಬ್ಬರು, ಇನ್ನೊಬ್ಬರನ್ನು ಸಮಾನತೆಯ ಗೌರವ, ಭಾವ ಮತ್ತು ಒಬ್ಬರಿಂದೊಬ್ಬರನ್ನು ಬೇರ್ಪಡಿಸುವ ನಿರ್ಬಂಧಗಳಿಲ್ಲದ ಸಮಾಜ ವ್ಯವಸ್ಥೆ ಅದರ ಮುಖ್ಯ ಲಕ್ಷಣಗಳು. ವಸ್ತುನಿಷ್ಠವಾದ ದೃಷ್ಟಿ, ನಾಡಿನ ಪ್ರಗತಿಯನ್ನು ಕುರಿತ ಕಳಕಳಿ ಅವರಲ್ಲಿತ್ತು. ಸಮಾಜವಾದವನ್ನು ಅಂಗೀಕರಿಸುವುದಾದರೆ ಅದನ್ನು ರಾಷ್ಟ್ರದ ಸಂವಿಧಾನದಲ್ಲಿಯೇ ಅಳವಡಿಸಿ ಕಾರ್ಯಾಂಗ ಶಾಸಕಾಂಗಗಳ ಅಧಿಕಾರದಾಚೆ ಸಲ್ಲಿಸಬೇಕಾಗುತ್ತದೆ. ಅದರಿಂದ ಪಾರ್ಲಿಮೆಂಟರಿ ಜನತಂತ್ರವನ್ನು ಒಪ್ಪಿಕೊಳ್ಳಬೇಕೆಂದು ಸೂಚಿಸಿದರು. ಅದರ ಸ್ವರೂಪ, ಅಧಿಕಾರ, ವ್ಯಾಪ್ತಿ ಕುರಿತು ಹೇಳಿದಾಗ ಇತರ ಸದಸ್ಯರಾದ ಜಯಕರ್, ನೆಹರು, ಶಾಂಪ್ರಸಾದ್ ಮುಖರ್ಜಿಯವರು ಸಹಮತ ಸೂಚಿಸಿದರು. ಸಂವಿಧಾನ ಕರಡು ಸಮಿತಿಗೆ ಅಧ್ಯಕ್ಷರಾಗಿ ಇತರ ಏಳು ಜನ ಸದಸ್ಯರಿದ್ದರು. ಆರು ತಿಂಗಳ ಅಖಂಡ ಪರಿಶ್ರಮದಿಂದ ಬ್ರಾಹ್ಮಣರ ಪಾಲಿಗೆ ಮೀಸಲಾದ ಕೆಲಸವನ್ನು ಅಸ್ಪೃಶ್ಯನೊಬ್ಬ ಮಾಡಬೇಕಾಗಿ ಬರಬಹುದೆಂದು ಶ್ರೀ ಎಂ. ಕೆ. ಗಾಂಧಿ ಊಹಿಸಿರಲಿಕ್ಕಿಲ್ಲ. ರಾಜ್ಯಾಂಗ ಸಭೆಯ ಅಧ್ಯಕ್ಷರಿಗೆ ಸಂವಿಧಾನದ ಕರಡು ಪ್ರತಿ ಸಲ್ಲಿಸಿದರು. ನರದೌರ್ಬಲ್ಯದಿಂದ ತೀವ್ರ ಬಳಲಿಕೆಯುಂಟಾಗಿ ಆಸ್ಪತ್ರೆ ಸೇರಿದರು. ಅಲ್ಲಿ ಶಾರದಾ ಕಬೀರ್ ಎಂಬ ಬ್ರಾಹ್ಮಣ ಮಹಿಳೆಯನ್ನು ವಿವಾಹವಾದರು. ಮುಂದೆ ಅವರು ಸವಿತಾ ಅಂಬೇಡ್ಕರ್ ಆದರು.

ಸಂವಿಧಾನದ ವಿಧಿ, ಅಧಿನಿಯಮ ಮುಂತಾದುವನ್ನು ಅವರ ಭಾಷಣದ ಮೂಲಕ ಕೇಳಿದ ಸದಸ್ಯರಾದ ಕೆ. ಟಿ. ಶಾಹಾ, ಕೃಷ್ಣಮಾಚಾರಿ, ಕಾಜಿ ಸಯ್ಯದ್ ಕಮರುದ್ದಿನ್, ಮನುಸ್ವಾಮಿ ಪಿಳ್ಳೆ, ಎಂ. ಸಾದುಲ್ಲಾ ಹಲವು ತಿದ್ದುಪಡಿಗಳನ್ನು ಸೂಚಿಸಿ ಅಂಬೇಡ್ಕರರ ಕರ್ತೃತ್ವ ಶಕ್ತಿಯನ್ನು ಕೊಂಡಾಡಿದರು. ನಲವತ್ತೈದು ನಿಮಿಷಗಳು ಏಕಾಗ್ರಚಿತ್ತದಿಂದ ಅಂಬೇಡ್ಕರ್ ಭಾಷಣ ಕೇಳಿದ ಸಭೆ ಹರ್ಷೋದ್ಗಾರ ಮಾಡಿತು. ಅಂಬೇಡ್ಕರರ ವಾಸ್ತವ ರಾಜಕೀಯ ಪ್ರಜ್ಞೆಯನ್ನು ದೇಶಾಭಿಮಾನವನ್ನು ಕೊಂಡಾಡಿತು.

ಸ್ವಾತಂತ್ರ್ಯದ ನಂತರ ನೆಹರು ಮಂತ್ರಿ ಮಂಡಲದಲ್ಲಿ ಕಾನೂನು ಸಚಿವರಾಗಿದ್ದು ಸಮಗ್ರ ಹಿಂದೂ ಕಾನೂನು ಮಸೂದೆಯನ್ನು ಮಂಡಿಸಿದರು. ಅದನ್ನು ಲೋಕಸಭೆಯು ಚರ್ಚೆಗೆ ಎತ್ತಿಕೊಂಡು ಅನುಮತಿ ನಿರಾಕರಿಸಿತು. ಹಿಂದು ವಿವಾಹ ಮತ್ತು ವಿಚ್ಛೇದನಕ್ಕೆ ಸಂಬಂಧಿಸಿದಷ್ಟನ್ನು ಮಾತ್ರ ಒಂದು ಸ್ವತಂತ್ರ ಮಸೂದೆಯನ್ನಾಗಿ ಮಂಡಿಸಿದರು. ಅದನ್ನು ಕಾಯ್ದೆ ಮಾಡಲು ಲೋಕಸಭೆ ಒಪ್ಪಲಿಲ್ಲ. ಬೇಸರಪಟ್ಟು ಮಂತ್ರಿಮಂಡಲಕ್ಕೆ ರಾಜಿನಾಮೆ ನೀಡಿದರು. ನಂತರ ಮುಂಬಯಿ ವಿಧಾನಸಭೆಯಿಂದ ರಾಜ್ಯಸಭಾ ಸದಸ್ಯರಾಗಿ ಚುನಾಯಿತರಾದರು. ಅಂಬೇಡ್ಕರ್‌ಗೆ ನೀಡಿದ

'ಡಾಕ್ಟರ್ ಆಫ್ ಲಾ' ಗೌರವ ಪದವಿ ಪ್ರಧಾನ ಸಮಾರಂಭದಲ್ಲಿ ಅಮೇರಿಕಾದಲ್ಲಿ ಮಾನವೀಯ ಹಕ್ಕುಗಳ ಕರ್ತೃ ಎಂದು ಪ್ರಶಂಸಿಸಲಾಯಿತು.

"ಪ್ರತಿಯೊಬ್ಬನೂ ಒಂದು ಜೀವನ ದೃಷ್ಟಿಯನ್ನು ಬೆಳೆಸಿಕೊಂಡಿರುತ್ತಾನೆ. ಅದರ ಮೂಲಕವೆ ತನ್ನ ನಡತೆಯನ್ನು ಅಳತೆ ಮಾಡುತ್ತಾನೆ. ಭಗವದ್ಗೀತೆ ಬೋಧಿಸುವ, ದರ್ಶನವನ್ನು ನಾನು ಒಪ್ಪುವುದಿಲ್ಲ. ಸಾಂಖ್ಯ ಹೇಳುವ ತ್ರಿಗುಣ ತತ್ತ್ವವನ್ನು ಅದು ಆಧರಿಸಿದೆ. ಅದಕ್ಕೆ ಮೂಲವಾದ ಕಪಿಲ ಅಂಥದ್ದನ್ನು ಬೋಧಿಸಲಿಲ್ಲ. ನನ್ನ ಜೀವನದ ದರ್ಶನ ಸಮಾನತೆ, ಸ್ವಾತಂತ್ರ್ಯ ಮತ್ತು ಸೋದರ ಭಾವ ಎಂಬ ಮೂರು ಪದಗಳಲ್ಲಿ ಅಡಕವಾಗಿದೆ. ನನ್ನ ಜೀವನ ತತ್ವ ಧರ್ಮದಲ್ಲಿ ನೆಲೆ ನಿಂತಿದೆ. ರಾಜ್ಯಶಾಸ್ತ್ರದಲ್ಲಿ ಸಂವಿಧಾನ ವಿಧಿಸಿದ ಸಮಾನತೆಯ ವಿಧಿಯನ್ನು, ಆದರ್ಶವನ್ನು, ಧರ್ಮಶ್ರದ್ಧೆಯನ್ನಾಧರಿಸಿದ ನಮ್ಮ ಜೀವನ ಸಮಾಜ ಅಲ್ಲಗಳೆಯುತ್ತದೆ. ಈ ವಿರೋಧವನ್ನು, ತೊಡೆದು ಸಮನ್ವಯವನ್ನು ಸಾಧಿಸಬೇಕಾಗಿದೆ" ಎಂದು ೧೯೫೪-೧೦-೦೩ ರಲ್ಲಿ ಆಕಾಶವಾಣಿಯಲ್ಲಿ ಭಾಷಣ ಮಾಡಿದರು.

ಬೌದ್ಧಮತವನ್ನು ಸ್ವೀಕರಿಸಲು ೧೯೫೬-೧೦-೧೪ ರಂದು ಭಾರತದಲ್ಲಿಯ ಹಿರಿಯ ಬುದ್ಧಬಿಕ್ಕು ಚಂದ್ರಮಾಣಿಯವರ ನೇತೃತ್ವದಲ್ಲಿ ನಾಗಾರ್ಜುನನ ನಾಗಪುರದಲ್ಲಿ ಲಕ್ಷ ಲಕ್ಷ ಮಹರರು ಸೇರಿದಂತೆ ಅಂಬೇಡ್ಕರರು "ಹಿಂದೂ ಧರ್ಮವನ್ನು ಬಿಟ್ಟು ಹೊರಬರುತ್ತಿದ್ದೇನೆ" ಎಂದರು.

ಅನಾರೋಗ್ಯದಿಂದ ಬಳಲಿ ೧೯೫೬-೧೨-೦೬ರಂದು ಇಹಲೋಕ ತ್ಯಜಿಸಿದರು. ದೇಶಾದ್ಯಂತ ಸಂತಾಪ ಸೂಚಕ ಸಭೆಗಳು ನಡೆದವು.

APART - ದೂರವಿರು, APARTHEID - ಒತ್ತಾಯದಿಂದ ದೂರವಿಡುವ ಆಡಳಿತ ಬಿಳಿಯರದಾಗಿತ್ತು. ಅಂಬೇಡ್ಕರರ ಹೋರಾಟ ನೆಲ್ಸನ್ ಮಂಡೇಲಾ ಅವರಿಗೆ ತೀವ್ರವಾಗಿ ತಿಳಿದಿರಲಿಲ್ಲ ಎನ್ನಬಹುದು. ಡಾ. ಕ್ಸುಮಾ ಅವರಿಂದ ಒಂದು ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದ ನೆಲ್ಸನ್ ಅವರು ಎ.ಎನ್.ಸಿ. ಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಇಂಡಿಯನ್ ಕಾಂಗ್ರೆಸ್, ನ್ಯಾಷನಲ್ ಆಫ್ರಿಕನ್ ಕಮ್ಯುನಿಷ್ಟ್ ಪಾರ್ಟಿಯವರು ನಡೆಸುತ್ತಿದ್ದ ಮುಷ್ಕರಗಳನ್ನು ಬೆಂಬಲಿಸುತ್ತಿದ್ದರು. ಕರಿಯರಿಗೆ ಮುಷ್ಕರ ಹೂಡುವ ಹಕ್ಕು ಇರಲಿಲ್ಲ. ಹೆಚ್ಚಿನ ವೇತನಕ್ಕಾಗಿ ಮುಷ್ಕರ ಹೂಡಿದಾಗಲೆಲ್ಲ ಹಿಂಸೆಯನ್ನು ಎದುರಿಸಬೇಕಾಗುತ್ತಿತ್ತು. ಕಾನೂನು ವಿದ್ಯಾಭ್ಯಾಸವನ್ನು ನೆಲ್ಸನ್ ಮಾಡಿದ್ದರಿಂದ ಕಾರ್ಮಿಕರ ಪರವಾಗಿ ಕೇಸುಗಳನ್ನು ತೆಗೆದುಕೊಳ್ಳುತ್ತಿದ್ದರು. ಅದಕ್ಕೂ ಮುಖ್ಯವಾಗಿ ಬಿಳಿಯರ ಒಂದು ತೋಟದ ವ್ಯಾಜ್ಯಗಳನ್ನು ನೋಡಿಕೊಳ್ಳುವ ಕೆಲಸ ನಿರ್ವಹಿಸುತ್ತಿದ್ದರು. ಮೊರೊಕೊ, ಬೇಕೊ ಮುಂತಾದವರ ಸಹಾಯದಿಂದ ಕಮ್ಯುನಿಷ್ಟ್ ಸಿದ್ಧಾಂತವನ್ನು ಸಂಪೂರ್ಣವಾಗಿ ಎ.ಎನ್.ಸಿ. ಒಪ್ಪಿಕೊಳ್ಳಬೇಕಾಗಬಹುದೆಂದು ಬಿಳಿಯ ಸರಕಾರವನ್ನು ಎಚ್ಚರಿಸಿದರು. ಅವರ ಮೇಲೆ ದೇಶದ್ರೋಹದ ಆರೋಪವನ್ನು ಬಿಳಿಶಾಯಿ ಸರಕಾರ ಹೇರಿತು. ಅವರು ಕೆಲ ಕಾಲ ಭೂಗತರಾಗಿರಬೇಕಾಯಿತು. ಇದೇ ವೇಳೆಯಲ್ಲಿ ಮೊದಲನೆ ಪತ್ನಿ ದೂರ ಸರಿದಿದ್ದು ಇವರು ಕೆಲಸ ಮಾಡುವ ಕಂಪನಿಗೆ ಹೊಂದಿಕೊಂಡಂತೆ ಇದ್ದ ಎ.ಎನ್.ಸಿ.

ಯಲ್ಲಿ ಕೆಲಸ ಮಾಡುತ್ತಿದ್ದ ವಿನ್ನಿ ನೊವಜಾಮೊ ಎಂಬುವರನ್ನು ವಿವಾಹವಾದರು. ನೆಲ್ಸನ್ನರ ಭೂಗತ ರಾಜಕೀಯ ಜೀವನವನ್ನು ಅರಿತಿದ್ದ ವಿನ್ನಿ ಅವರನ್ನು ಒಪ್ಪಿದ್ದು ತುಂಬಾ ಸಂತೋಷವಾಗಿತ್ತು. ವಿನ್ನಿ ಅವರ ತಂದೆ, ಮಗಳಿಗೆ ಬುದ್ಧಿ ಹೇಳಿ ಒಪ್ಪಿಗೆ ಕೊಟ್ಟರು.

ಎ.ಎನ್.ಸಿ.ಯು ಮೆರವಣಿಗೆಗಳನ್ನು ನಡೆಸಲು ಸಾರ್ವಜನಿಕ ಸ್ಥಳಗಳನ್ನು ನಿರಾಕರಿಸಲಾಯಿತು. ಕೊನೆಗೆ ಎ.ಎನ್.ಸಿ. ಕಛೇರಿಯನ್ನು ಸಹ ಪಟ್ಟಣದಿಂದ ಗ್ರಾಮಾಂತರ ಪ್ರದೇಶವೊಂದಕ್ಕೆ ಸ್ಥಳಾಂತರಿಸಲಾಯಿತು. ಅಂಬೇಡ್ಕರ್ ಸಹ ಇಂಥದೇ ಸಮಸ್ಯೆಯನ್ನು ಮಹದ್ ಕೆರೆ ಪ್ರವೇಶದ ಸಂದರ್ಭದಲ್ಲಿ ಎದುರಿಸಬೇಕಾಯಿತು. ಕರಿಯರು ಅಸ್ತ್ರ ಹೋರಾಟವನ್ನು ಕೈಗೆತ್ತಿಕೊಳ್ಳಲು ನೆಲ್ಸನ್ ಕರೆ ನೀಡಿದರು. ಇದನ್ನು ಆಫ್ರಿಕನ್ ಕಮ್ಯೂನಿಷ್ಟರು ಬೆಂಬಲಿಸಿದರು. ಕರಿಯರು ತಮ್ಮ ಗುಲಾಮಗಿರಿಯನ್ನು ಹೋಗಲಾಡಿಸಿಕೊಳ್ಳಲು ಮಾನಸಿಕವಾಗಿ ಸಿದ್ಧರಾಗತೊಡಗಿದರು.

೧೯೫೦ರಲ್ಲಿ ಮೇ ಡೇ — ಮೇ ದಿನಾಚರಣೆಯ ಅಂಗವಾಗಿ ನಡೆದು ಮುಷ್ಕರದಲ್ಲಿ ಎ.ಎನ್.ಸಿ., ಭಾರತೀಯ ಕಾಂಗ್ರೆಸ್, ಆಫ್ರಿಕನ್ ಕಮ್ಯೂನಿಷ್ಟ್ ಪಕ್ಷಗಳು ಪಾಲ್ಗೊಂಡವು. ಬಿಳಿಯರ ಅಧೀನದಲ್ಲಿರುವ ಕಾರ್ಖಾನೆ, ಕಛೇರಿ, ಹೊಲಗದ್ದೆಗಳಲ್ಲಿ ಅವಿರತ ದುಡಿಯುತ್ತಾ ತಮ್ಮ ತಾಯ್ನಾಡನ್ನು ಕಳೆದುಕೊಂಡಿದ್ದ ಕರಿಯರು ಎ.ಎನ್.ಸಿ.ಯಲ್ಲಿ ಹೊಸ ಭರವಸೆಯನ್ನು ಕಂಡುಕೊಂಡರು. ೧೯೬೭ರಿಂದ ನಡೆದ ದೋಷಾರೋಪಣೆ ವಿಚಾರಣೆಯು ಸತತವಾಗಿ ಮುಂದುವರಿಯುತ್ತಾ ಬಂತು. ನೆಲ್ಸನ್ನರನ್ನು ಟ್ರೆಜನ್ ಟ್ರೈಯಲ್ ಮತ್ತು ರಾಬಿನ್ ಐಲ್ಯಾಂಡ್ ಎಂಬ ಸ್ಥಳಗಳಲ್ಲಿ ಆಜೀವ ಪರ್ಯಂತ ಜೈಲಲ್ಲಿಟ್ಟರು. ಕರಿಯರನ್ನು ಬಿಳಿಯರ ವಿರುದ್ಧ ಶಸ್ತ್ರಾಸ್ತ್ರ ಹೋರಾಟಕ್ಕಾಗಿ ಪ್ರಚೋದಿಸಿದ್ದಕ್ಕಾಗಿ ಜೈಲಲ್ಲಿ ಬಂಧನದಲ್ಲಿಟ್ಟರು. ಕರಿಜನರ ಭೇಟಿಗೂ ಅವಕಾಶ ನೀಡುತ್ತಿರಲಿಲ್ಲ. ಬಂಧನದಲ್ಲಿದ್ದುಕೊಂಡೇ ಕರಿಯರ ಗೌರವದ ಸಂಕೇತವಾಗುಳಿದರು. ಅವರ ಸಮೀಪವರ್ತಿಗಳನ್ನು ಹಲವು ನೆಪದಿಂದ ಬಿಡುಗಡೆಗೊಳಿಸಿದರೂ ಇವರನ್ನು ಸತತ ವಿಚಾರಣೆ, ಜೈಲು ಶಿಕ್ಷೆ ಕಡ್ಡಾಯಗೊಳಿಸಿದರು. ವಿನ್ನಿಮಂಡೇಲಾ ಬೆಂಗಾವಲಾಗಿ ನಿಂತು ಎ.ಎನ್.ಸಿ.ಯ ಹೋರಾಟವನ್ನು ಮುನ್ನಡೆಸಿದರು. ಅಂತಾರಾಷ್ಟ್ರೀಯವಾಗಿ ಈ ವಿಷಯವು ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಅದೇ ಅಂಬೇಡ್ಕರರ ಹೋರಾಟದಲ್ಲಿ ಆಂತರಿಕ ಶತ್ರುಗಳ ಕಾಟದಿಂದ ತುಂಬಾ ಪ್ರಚಾರವಿಲ್ಲದೆ ಬ್ರಿಟಿಷರ ಮೂಲಕ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ನೋಡಿದರು.

ಅಜ್ಞಾನದಲ್ಲಿದ್ದ ಜನತೆಗೆ ವಿಚಾರ ತಿಳಿಸಲು ಗ್ರಂಥಗಳ ಮೇಲೆ ಗ್ರಂಥಗಳನ್ನು ರಚಿಸಿದರು ಅಂಬೇಡ್ಕರ್. ಆಧುನಿಕ ಸಾಹಿತ್ಯ ಸಾಕಷ್ಟು ಪ್ರಚಾರದಲ್ಲಿದ್ದು ಸಾಕಷ್ಟು ವಿದ್ಯಾವಂತರಿದ್ದ ಕರಿಯರು ಬೇಗನೆ ಸ್ಪಂದಿಸುತ್ತಿದ್ದರು. 'ಬ್ಲಾಕ್ ಈಸ್ ಬ್ಯುಟಿಫುಲ್' ಎಂಬುದು ಸ್ವಾಭಿಮಾನದ ಸಂಗತಿಯಾದಂತೆ 'ದಲಿತ ಈಸ್ ಡಿಗ್ನಿಫೈಡ್' ಆಗಲಿಲ್ಲ. ಆತ್ಮವಿಶ್ವಾಸವಿಲ್ಲದ ಜನಾಂಗವನ್ನು ಅಂಬೇಡ್ಕರ್ ಮುನ್ನಡೆಸಿದರೆ ನೆಲ್ಸನ್ ಧೈರ್ಯಶಾಲಿ, ಆತ್ಮವಿಶ್ವಾಸ ಹೊಂದಿರುವ ಜನಾಂಗವನ್ನು ಅಭಿವೃದ್ಧಿ ವಿಮೋಚನೆ ಕಡೆಗೆ ಕರೆದುಕೊಂಡು ಹೋದರು.

ನೆಲ್ಸನ್ನರ ಹಣೆಯು ಉಬ್ಬಿದ್ದು, ಮೊಂಡು ಮೂಗು, ಉದ್ದವಾದ ಗಡ್ಡ, ಗುಂಗುರು ಕೂದಲು, ಚಿಕ್ಕಕಣ್ಣು, ಎತ್ತರದ ಮೈಕಟ್ಟು ಹೊಂದಿದ್ದರು. ಅಂಬೇಡ್ಕರರ ಮುಖ ದುಂಡು ಎನ್ನಬಹುದು. ನಡು ಎತ್ತರದ ನಿಲುವು, ಮೈಕಟ್ಟು ದಪ್ಪನಾದುದು, ಮುಖದಲ್ಲಿ ಶಾಂತತೆ ಕಂಡರೂ ಕೋಪಿಸಿ ಕೊಂಡಾಗ ಕಣ್ಣು ಕಿಡಿಕಾರುತ್ತಿತ್ತು.

ನೆಲ್ಸನ್ ಜೈಲಲ್ಲಿರಬೇಕಾದರೆ ಇಡೀ ಕರಿಯ ಯುವ ಜನಾಂಗ - "ಮಂಡೇಲಾ ಗೀವ್ ಅಸ್ ಗನ್ಸ್'.

'ವಿಕ್ಟರಿ ಥ್ರೂ ಬ್ಯಾಟಲ್, ನಾಟ್ ಟಾಕ್' ಎಂದು ಕೂಗಿ ಹುರಿದುಂಬಿಸುತ್ತಿತ್ತು. ಪತ್ನಿ ಮತ್ತು ಮಗಳು ಈ ಜನರಿಗೆ ಮಾರ್ಗದರ್ಶನ ಮಾಡಿದರು.

ಜೈಲು ಬಂಧನ ನೆಲ್ಸನ್ನರನ್ನು ಆಫ್ರಿಕಾದ ಚಿರಸ್ಥಾಯಿ ವ್ಯಕ್ತಿಯನ್ನಾಗಿಸಿತು. ಜೈಲಿನ ಚಿತ್ರಹಿಂಸೆಗಳನ್ನು ಜನರಿಗಾಗಿ ಸಹಿಸಿದರು. ಅಂಬೇಡ್ಕರ್ ಜೈಲು ಹೊರಗಡೆ ಇದ್ದರೂ ಅವರ ಬಗ್ಗೆ ಜನರ ವಿಶ್ವಾಸ ಹೆಚ್ಚುತ್ತಿತ್ತು.

೧೯೯೨ರ ಸಮ್ಮೇಳನದಲ್ಲಿ ಸರಕಾರದ ಪರವಾಗಿ ಎಫ್.ಡಬ್ಲ್ಯೂ. ಕ್ಲರ್ಕ್ ಮತ್ತು ಕರಿಯರ ಪರವಾಗಿ ಎ.ಎನ್.ಸಿ. ನಾಯಕರು ನೆಲ್ಸನ್ನರು ಭಾಗವಹಿಸಿದರು. ಹಲವು ಸುತ್ತಿನ ಮಾತುಕತೆಗಳು ನಡೆದು ಕರಿಯರಿಗೆ ಮತದಾನದ ಹಕ್ಕನ್ನು ನೀಡಲು ಒಪ್ಪಲಾಯಿತು. ಸಾರ್ವತ್ರಿಕ ಚುನಾವಣೆಗಳನ್ನು ನಡೆಸುವುದು, ಅದರಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಭಾಗವಹಿಸಲು ಅವಕಾಶ ನೀಡುವುದು, ವೈರಿಯೊಂದಿಗೆ ನಡೆದ ಮಾತುಕತೆ ಫಲ ನೀಡಿತು. ಅದರಂತೆ ಅವರ ಜನಸಂಖ್ಯೆಗೆ ಅನುಗುಣವಾಗಿ ಆಫ್ರಿಕನ್ ಪಾರ್ಲಿಮೆಂಟಿನಲ್ಲಿ ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಆರಿಸಿ ಬಂದರು. ಕರಿಯರಿಗೆ ರಕ್ಷಣೆ, ಬದುಕಲು ಸ್ವಾತಂತ್ರ್ಯ ಲಭಿಸಿದವು. ಬಣ್ಣ ಆಧಾರಿತ ಅಸಮಾನತೆಯ ಆಡಳಿತವು ಕೊನೆಗೊಂಡು ನೆಲ್ಸನ್ ಮಂಡೇಲಾ ಅಧ್ಯಕ್ಷರಾದರು. ಅಮೆರಿಕನ್ ಮಾದರಿ ಪಾರ್ಲಿಮೆಂಟಿನ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದರು. ಎ.ಎನ್.ಸಿ.ಯಿಂದ ಕರಿಯರ ಪ್ರತಿನಿಧಿಯಾಗಿ ಥಾಬೊ ಬೇಕಿ ಅವರನ್ನು ಮೊದಲನೆ ಉಪಾಧ್ಯಕ್ಷರನ್ನಾಗಿಯೂ ಬಿಳಿಯರಿಂದ ಎರಡನೆ ಉಪಾಧ್ಯಕ್ಷರಾಗಿ ಎಫ್. ಡಬ್ಲ್ಯೂ. ಕ್ಲರ್ಕ್ ಅವರನ್ನು ನೆಲ್ಸನ್ ನೇಮಿಸಿಕೊಂಡರು.

ಆಫ್ರಿಕಾ ದೇಶವು ಬಿಳಿಯರ ಕಪಿಮುಷ್ಠಿಯಿಂದ ಕರಿಯರ ನಾಯಕತ್ವಕ್ಕೆ ಪಾದಾರ್ಪಣೆ ಮಾಡಿತ್ತು. ಅವರ ದೇಶವನ್ನು, ಸಂಪನ್ಮೂಲಗಳನ್ನು ಅವರೇ ಆಳಿಸಿಕೊಳ್ಳುವ ಅವಕಾಶ ನೆಲ್ಸನ್ ಹೋರಾಟದಿಂದ ಸಾಧ್ಯವಾಯಿತು. ರಾಬಿನ್ ಐಲ್ಯಾಂಡ ಜೈಲಿನಲ್ಲಿ ಜೊತೆಗಾರರಾಗಿದ್ದರು — ಗೊವ್ಯಾನ್ ಬೇಕಿ ಮಹರಾಜ್ ಅಹ್ಮದ್ ಕಥ್ರಾಡೆ, ಬ್ರಿಯಾನ್ ಬಂಟಿಂಗ್ ಮುಂತಾದವರು ಸರಕಾರದಲ್ಲಿ ಮಂತ್ರಿಗಳಾದರು. ನಲವತ್ತೆಂಟನೆ ವಯಸ್ಸಿನಿಂದ ಎಪ್ಪತ್ತಾರು ವಯಸ್ಸಿನವರೆಗೆ ಜೈಲಿನಲ್ಲಿದ್ದು ಜೀವನದ ಅಮೂಲ್ಯ ವಯಸ್ಸನ್ನು ಕಳೆದುಕೊಂಡರೂ ಒಂದಿನಿತೂ ದುಃಖ ಪಡದೆ ನಾಡನ್ನು ವಿಮೋಚನೆಗೊಳಿಸಿದ ಸಂತೋಷ ಅವರದ್ದಾಗಿದೆ. ಐದು ವರ್ಷಗಳ ಮಂಡೇಲಾ

ಸರಕಾರ ಇದೇ ವರ್ಷದಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ಎದುರಿಸಲಿದೆ. ನಾಡಿಗೆ ಸ್ವಾತಂತ್ರ್ಯ ತಂದುಕೊಟ್ಟರೂ ಕರಿಯ ಜನಾಂಗದ ಸಮಸ್ಯೆಗಳಾದ ಶಿಕ್ಷಣ, ನಿರುದ್ಯೋಗ, ವಸತಿ ಮುಂತಾದವನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದರು. ಮುಂದಿನ ಚುನಾವಣೆಯಲ್ಲಿ ನೆಲ್ಸನ್ ಭಾಗವಹಿಸುತ್ತಿಲ್ಲ. ಸರಕಾರ ನಡೆಸಲು ಎ.ಎನ್.ಸಿ. ಅಧ್ಯಕ್ಷ ಥಾಬೊ ಬೇಕಿ ಅವರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಪ್ರಜಾಪ್ರಭುತ್ವ ಮತ್ತು ನಾಡಿನ ಶಾಂತಿಗಾಗಿ ನಾನು ಕಟಿಬದ್ಧನಾಗಿದ್ದೇನೆ' ಎಂದು ಕೊನೆಯ ನ್ಯಾಷನಲ್ ಅಸೆಂಬ್ಲಿಯ ಭಾಷಣದಲ್ಲಿ ನುಡಿದರು.

ಮುಂದುವರಿದು ಮಾತನಾಡುತ್ತಾ "ಎ.ಎನ್.ಸಿ.ಯು ನನ್ನನ್ನು ರೂಪಿಸಿದ್ದು, ರಾಜಕೀಯ, ನೈತಿಕ, ವಿಮೋಚನಾ ಹೋರಾಟವನ್ನು ಮುನ್ನಡೆಸಲು ಮಾರ್ಗದರ್ಶಕವಾಗಿತ್ತು. ಅಂತರರಾಷ್ಟ್ರೀಯವಾಗಿ ಆಫ್ರಿಕಾ ದೇಶವು ಸಾಮಾಜಿಕವಾಗಿ, ರಾಷ್ಟ್ರೀಯವಾಗಿ, ರಾಜಕೀಯವಾಗಿ ನನ್ನ ದೃಷ್ಟಿಕೋನ ಬೆಳೆಸಿತು. ಗ್ರಾಮಾಂತರ ಜನಸಮೂಹ, ಕಾರ್ಮಿಕರು, ಬುದ್ಧಿಜೀವಿವರ್ಗ, ವ್ಯಾಪಾರಿ ವರ್ಗ ಆಫ್ರಿಕಾದ ಪುನರ್ ಹುಟ್ಟನ್ನು ಸ್ವಾಗತಿಸುವಂತೆ ಮಾಡಿದ್ದೇನೆ.'

ಎ.ಎನ್.ಸಿ.ಯ ಕಾರ್ಯಕ್ರಮಗಳು ಮತ್ತು ಸರಕಾರದ ತೀರ್ಮಾನಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಹೊಂದಿರುವ ವಿನ್ನಿಮಂಡೇಲಾರಿಗೆ ಬೇರೆ ಬೇರೆ ವಾಸಿಸಲು ಅನುಮತಿ ನೀಡಿದರು. ಮಗ ಮಕಗಾಥೊ, ಮಗಳು ಜಿನಾನಿ, ಜಿಂದಜಿ, ಮಕಜಿವಿ ಅವರು ತಂದೆಯ ಬಗ್ಗೆ ಹೆಮ್ಮೆ ಪಡುತ್ತಾರೆ. ಇತ್ತೀಚೆಗೆ ಮತ್ತೊಬ್ಬರನ್ನು ವಿವಾಹವಾದರೆಂದು ಸುದ್ದಿ, ಸಂಸಾರಕ್ಕಿಂತ ಎ.ಎನ್.ಸಿ.ಯಂತಹ ರಾಜಕೀಯ ಪಕ್ಷವೇ ಮುಖ್ಯ ಎಂದು ಮಂಡೇಲಾ ಭಾವಿಸಿದಂತಿದೆ.

ನೆಲ್ಸನ್ನರನ್ನು ಜೈಲಿನಿಂದ ಬಿಡುಗಡೆ ಮಾಡಿ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಒದಗಿಸಿದ ಬಿಳಿಯ ಸರ್ಕಾರ ಮತ್ತು ಅಂತಾರಾಷ್ಟ್ರೀಯ ಸಮುದಾಯ ಎಂತಹ ಆತಂಕವನ್ನು ಎದುರಿಸಿತ್ತು? ಕರಿಯರಿಗೆ ಉದಾರವಾಗಿ ಸೌಲಭ್ಯಗಳನ್ನು ನೀಡಿದರೆ ರಕ್ತಪಾತವಾಗುತ್ತದೆ ಎಂದು ಭಯಪಟ್ಟಿದ್ದರು. ಅಲ್ಪಸಂಖ್ಯಾತರಾದ ಬಿಳಿಯರು, ಕರಿಯರ ಕೈ ಕೆಳಗೆ, ಕನಿಷ್ಟರಾಗಿ ಬದುಕಬೇಕಾಗುತ್ತದೆ ಎಂದು ತಿಳಿದಿದ್ದರು. ಆದರೆ, ಚುನಾವಣೆಯಲ್ಲಿ ಭಾಗವಹಿಸಿದ ಆಫ್ರಿಕನ್ ಕರಿಯರು, ಬಿಳಿಯರು, ಇಂಡೋ ಭಾರತೀಯರು, ಮುಸ್ಲಿಮರು ಮುಂತಾದವರು ಅವರ ಜನಾಂಗಕ್ಕೆ ಒತ್ತಾಸೆಗಳಿಗೆ ಪೂರಕವಾಗಿ ಸರ್ಕಾರದಲ್ಲಿ ಪಾಲು ಪಡೆದರು. ಆಫ್ರಿಕನ್ನರ ರಾಷ್ಟ್ರೀಯ ಪ್ರತಿನಿಧಿಯಾಗಿ ನೆಲ್ಸನ್ ಗುರುತಿಸಲ್ಪಟ್ಟರು. ಡಬ್ಲ್ಯೂ ಕ್ಲರ್ಕ್ ಅವರಿಗೂ ಸಂಪುಟದಲ್ಲಿ ಸೂಕ್ತ ಸ್ಥಾನಮಾನ ನೀಡಿ ಸ್ನೇಹಪರತೆಯನ್ನು ತೋರಿದರು. ಎರಡು ಜನಾಂಗಗಳ ಮಧ್ಯ ರಕ್ತಪಾತವಾಗುವ ಯಾವುದೇ ಗಂಭೀರ ಪರಿಸ್ಥಿತಿಗಳು ತಲೆ ಎತ್ತಲಿಲ್ಲ, ಯಾಕೆ? ಆಗಿನ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳು ಹೇಗೆ ಇದ್ದವು? ಭಾರತದಲ್ಲಿ ಬ್ರಿಟಿಷರು ಅಧಿಕಾರ ನೀಡಲು ಪ್ರಾರಂಭಿಸಿದ್ದು, ಕೊಟ್ಟಿದ್ದು ೧೯೩೫ರ ಅಧಿಕಾರ ಕಾಯ್ದೆ ಮೂಲಕ. ಹೀಗೆ ಅಧಿಕಾರ ನೀಡುವಾಗ ಬರಿ ಕಾಂಗ್ರೆಸ್ ಪಕ್ಷದ ಕೈಗೆ ಅಧಿಕಾರ ನೀಡಬಾರದೆಂದು ಮುಸ್ಲಿಂ, ದಲಿತ, ಕ್ರಿಸ್ತಿಯನ್, ಎಡಪಕ್ಷಗಳ ನಾಯಕರು ಸಲಹೆ ನೀಡಿದರು. ಅಧಿಕಾರದ ಮೂಲಕ ಜನಾಂಗಗಳ ಉದ್ಧಾರ ಅಭಿವೃದ್ಧಿ ಅದರ ಮುಖಾಂತರ ದೇಶದ ಅಭಿವೃದ್ಧಿ ಸಾಧ್ಯ ಎಂಬುದರ ಚಿಂತನೆ ಇತ್ತು. ದಲಿತರಿಗೆ

ಅಧಿಕಾರ ನೀಡುವುದೆಂದರೆ ಏನರ್ಥ ಎಂದು ಆಶ್ಚರ್ಯಚಕಿತರಾಗಿ ದೇಶವೇ ನಿಬ್ಬೆರಗಾಗಿ ನೋಡಿತು. ಅದಕ್ಕೆ ಬಾಯಾದವರು ಶ್ರೀಮಾನ್ ಎಂ. ಕೆ. ಗಾಂಧಿ. ಅವರು ದಲಿತರನ್ನು ಹಿಂದು ಧರ್ಮದ ಭಾಗವಾಗಿ ಮಾತ್ರ ನೋಡಿದರು. ಅವರು ಬೇರ್ಪಡೆಯಾದರೆ ಹಿಂದು ಧರ್ಮದ ದೇಹವನ್ನು ಕತ್ತರಿಸಿದಂತೆ ಅವರು ಅಂಬೇಡ್ಕರ್ ಮೂಲಕ ಒಂದು ವಿಶೇಷ ಓಟಿನ ಹಕ್ಕನ್ನು ಎಷ್ಟು ಉಗ್ರವಾದಿಯಾಗಿ ವಿರೋಧಿಸಿದರೆಂದರೆ, ತಮ್ಮ ಪ್ರಾಣವನ್ನೇ ಪಣಕ್ಕಿಟ್ಟರು. ದಲಿತರು ಸ್ವತಂತ್ರವಾಗಿ, ಸಾಮಾಜಿಕ, ಆರ್ಥಿಕ, ರಾಜಕೀಯ ನಡೆಸುವುದನ್ನು ನಿಗ್ರಹಿಸಬೇಕೆಂಬ ಮನೋಭಾವ ಇದ್ದಂತೆ ಕಾಣುತ್ತದೆ. ಅವರು ಸವರ್ಣೀಯರ ಹಂಗಿನಲ್ಲಿ ಇರುವಂತೆ ಸಾಮಾಜಿಕ ರಾಜಕೀಯ ವ್ಯವಸ್ಥೆಗೆ ತಮ್ಮ ಒಪ್ಪಿಗೆ ನೀಡುತ್ತಾರೆ. ಗಾಂಧಿಯಲ್ಲಿ ಪ್ರಗತಿಗಾಮಿ ಆಲೋಚನೆಗಳಿದ್ದರೂ (ಪ್ರಯೋಗಾತ್ಮಕವಾಗಿ) ದಲಿತರ ವಿಷಯ ಬಂದಾಗ ತುಳಿಯುವ ಮನೋಭಾವ (ಅದು ಒಟ್ಟು ಸಮಾಜದ್ದು) ತಮ್ಮಲ್ಲೂ ಪ್ರದರ್ಶಿಸಿಬಿಟ್ಟರು. ಹೀಗೆ ಆರ್ಥಿಕವಾಗಿ ದೀನ ಸ್ಥಿತಿಯಲ್ಲಿದ್ದು ವಿದ್ಯೆ ಮತ್ತು ಉದ್ಯೋಗದಲ್ಲಿ ಮುಂದುವರಿಯಲು ಸಾಮಾಜಿಕವಾಗಿ ಹಂತ ಹಂತವಾಗಿ ಮೇಲೇರಲು ಒಪ್ಪಿಕೊಂಡ ಗಾಂಧಿ ಕ್ರಾಂತಿಕಾರಿ ಬದಲಾವಣೆ ವಿರುದ್ಧವಾಗಿ ನಿಲ್ಲುತ್ತಾರೆ. ರಾಜಕೀಯವಾಗಿ ಸಾಮಾಜಿಕವಾಗಿ ಅಸ್ಪೃಶ್ಯತೆಯನ್ನು ಅನುಭವಿಸುತ್ತಿದ್ದು ದಲಿತರಿಗೆ ಎಂಜಲು (ಮಾದರಿ) ಪಡೆಯುವ ಹಕ್ಕನ್ನು ಇಟ್ಟುಕೊಳ್ಳುವಂತೆ ತಾವೇ ಬೇರೆಯವರಿಗೆ (ದಲಿತರಿಗೆ) ಅಧಿಕಾರ ನೀಡಬಹುದಾಗಿರುವ ಸನ್ನಿವೇಶ ಬೇಡ ಎಂದರು ಗಾಂಧಿ. ಇದು ನಡೆಯಲು ಕಾರಣ ಗಾಂಧಿ ಪ್ರಕಾರ ಪ್ರತಿ ಗ್ರಾಮದಲ್ಲೂ ಅನ್ಯೋನ್ಯವಾಗಿ ಅಣ್ಣ – ತಮ್ಮಂದಿರಂತೆ ಬದುಕುತ್ತಿರುವ ಹಿಂದು ಧರ್ಮದ ಸಮಾಜವನ್ನು ಒಡೆದಂತೆ ಆಗುತ್ತದೆ.

ಡಾ. ಅಂಬೇಡ್ಕರರು ಅಸ್ಪೃಶ್ಯರನ್ನು ಹಿಂದು ಧರ್ಮದ ಭಾಗವಲ್ಲವೆಂದು ತಾತ್ವಿಕವಾಗಿ ಒಪ್ಪಿದ್ದರು. ಅವರ ಕಷ್ಟಗಳಿಗೆ ಅವಮಾನಗಳಿಗೆ ಒಂದು ರಾಜಕೀಯ ಪರಿಹಾರವನ್ನು ಕೊಡಿಸಲು ಬ್ರಿಟಿಷ್ ಪ್ರಧಾನಮಂತ್ರಿಗಳಲ್ಲಿ ಒತ್ತಾಯ ತಂದಿದ್ದರು. ಜನಾಂಗಿಕ ಅಲ್ಪಸಂಖ್ಯಾತರಾದ ಅಸ್ಪೃಶ್ಯರಿಗೆ ಹಿಂದುಧರ್ಮದಲ್ಲಿ ರಕ್ಷಣೆ ಇಲ್ಲದಿರುವುದು, ದಾಸ್ಯರಾಗಿ ಊರ ಹೊರಗೆ ವಾಸಿಸುತ್ತಿರುವುದು. ಸ್ವಾತಂತ್ರ್ಯ ರಹಿತವಾಗಿ ಬದುಕುತ್ತಿರುವುದು, ಸಾಮಾಜಿಕವಾಗಿ ಗೌರವ ರಹಿತ ಜೀವನ, ಆರ್ಥಿಕವಾಗಿ ಗುಲಾಮರಂತೆ, ಜೀತಗಾರರಾಗಿ ಅವಮಾನವೀಯ ಸ್ಥಿತಿಯಲ್ಲಿರುವುದರಿಂದ ಅವರಿಗೆ ಹೆಚ್ಚಿನ ಹಕ್ಕುಗಳನ್ನು, ರಕ್ಷಣೆಯನ್ನು ರಾಜಕೀಯವಾಗಿ ಒದಗಿಸಿಕೊಡಬೇಕು ಎಂಬ ಒತ್ತಾಸೆ ಅಂಬೇಡ್ಕರ್‌ರವರದಾಗಿತ್ತು. ಅದನ್ನು ಗಮನಿಸಿದ ಬ್ರಿಟಿಷ್ ಪ್ರಧಾನಮಂತ್ರಿಗಳು ಪ್ರತ್ಯೇಕ ಮತ ಕ್ಷೇತ್ರಗಳನ್ನು ಏರ್ಪಡಿಸಿ ಅಸ್ಪೃಶ್ಯರು ಅವರ ನಾಯಕರನ್ನು ಆರಿಸಿಕೊಳ್ಳುವಂತೆಯೂ ಹಾಗೆಯೇ ಇನ್ನೊಂದು ಮತದಿಂದ ಸಾಮಾನ್ಯ ಅಭ್ಯರ್ಥಿಯನ್ನು ಆರಿಸುವ ಅವಕಾಶವನ್ನು ಒದಗಿಸಿದರು. ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ್ದ ಎಲ್ಲಾ ರಾಜಕೀಯ ಧುರೀಣರು, ಕೋಮುವಾರು ನಾಯಕರು ಅಸ್ಪೃಶ್ಯರಿಗೆ ಒದಗಿಸಿದ ವಿಶೇಷ ಸೌಲಭ್ಯವನ್ನು ಸ್ವಾಗತಿಸಿದರು. ಕಾಂಗ್ರೆಸ್ ಪಕ್ಷದ ಪ್ರತಿನಿಧಿಯಾಗಿ ಭಾಗವಹಿಸಿದ ಎಂ. ಕೆ. ಗಾಂಧಿ ಹಿಂದೂ ಧರ್ಮದ ಭಾಗವಾಗಿರುವವರಿಗೆ ಹೆಚ್ಚಿನ ಸ್ಥಾನಗಳನ್ನು ನೀಡಲು ಸಮ್ಮತಿಸಿದರು. ಆದರೆ

ಶತಾಯಗತಾಯ ವಿಶೇಷ ಹಕ್ಕುಗಳನ್ನು ನೀಡಲು ನಿರಾಕರಿಸಿದರು. ಗುಲಾಮನಿಗೆ ಮಾಲೀಕನಾದವನು ಯಾವುದೇ ಹಕ್ಕುಗಳನ್ನು ಉದಾರವಾಗಿ ನೀಡಲು ಇಚ್ಛಿಸುವುದಿಲ್ಲ.

ದಲಿತರ ಸೌಲಭ್ಯಗಳ, ಹಕ್ಕುಗಳ ಎದುರು ತಮ್ಮ ಜೀವವನ್ನೇ ಪಣವಾಗಿ ಇಟ್ಟು ಗಾಂಧಿ ಹರಿಜನರಾಗಿ ಉಳಿದುಬಿಡುತ್ತಾರೆ. ಹಿಂದುಧರ್ಮದ ವಿಭಾಗವಾಗುವುದನ್ನು ತಡೆಯುವುದು ತನ್ನ ಜೀವನದ ಪರಮ ಧ್ಯೇಯ ಎಂದು ತಿಳಿಯುತ್ತಾರೆ. ಅಸ್ಪೃಶ್ಯರ ಕೇರಿಗಳನ್ನು ಹರಿಜನವಾಡ, ಗಾಂಧಿನಗರಗಳೆಂದು ಬದಲಾಯಿಸಲಾಯಿತು. ಗಾಂಧಿಯವರ ನಿಧನ ನಂತರವೂ ಉಗ್ರ ಹಿಂದೂವಾದಿಗಳು ಎಂ.ಕೆ. ಗಾಂಧಿಯನ್ನು ಕ್ಷಮಿಸಲಿಲ್ಲ. ಕ್ಷಮಿಸದಿರಲು ಇದ್ದ ಇನ್ನೊಂದು ಬಹುಮುಖ್ಯ ಕಾರಣ ದುಂಡುಮೇಜಿನ ಪರಿಷತ್ತಿನಲ್ಲಿ ಮುಸ್ಲಿಮರಿಗೆ ವಿಶೇಷ ಹಕ್ಕುಗಳನ್ನು ನೀಡುವ ಪ್ರಸ್ತಾಪವನ್ನು ಗಾಂಧೀಜಿಯವರು ಒಪ್ಪಿ ಪಾಕಿಸ್ತಾನವನ್ನು ನೀಡಿದ್ದು.

ದಲಿತರಿಗೆ ವಿಶೇಷ ಹಕ್ಕುಗಳನ್ನು ನೀಡಿದರೆ, ಅವುಗಳಿಂದ ಆಂತರಿಕ ಮತೀಯ, ಜಾತಿ ಗಲಭೆಗಳು ನಡೆದು ಹಿಂದು ಸಮಾಜ ನಿರಂತರವಾಗಿ ಘರ್ಷಣೆಯಲ್ಲಿ ನಿರತವಾಗುತ್ತಿತ್ತೆ? ನೆಲ್ಸನ್ ಮಂಡೇಲಾರ ನೇತೃತ್ವದಲ್ಲಿ ಸರ್ಕಾರ ರಚಿಸಿದಾಗ ಉಗ್ರ ಬಿಳಿಯರು ಯಾವ ಘರ್ಷಣೆ ಮಾಡಲಿಲ್ಲ ಯಾಕೆ? ಎಂಬುದು ಚರ್ಚೆಯ ವಿಷಯ.

ಸಾಧನೆ

ನೀಗ್ರೋ ಸಂತತಿಯ ಕರಿಯರಿಗೆ ಸಂಪಾದಿಸಲು ಅವಕಾಶ ಉಪಯೋಗಿಸಲು ಅವಕಾಶ ಒಂದೇ ಧರ್ಮದಲ್ಲಿದ್ದರೂ ಇರಲಿಲ್ಲ. ಬಣ್ಣದ ತಾರತಮ್ಯದಿಂದ ಕೆಲವು ವೃತ್ತಿಗಳಿಗೆ ಪ್ರವೇಶ ನಿಷಿದ್ಧವಿತ್ತು. ದೇಶ ಕರಿಯರದಾದರೂ ಆಳುವವರು ಬಿಳಿಯರೆಂಬ ಭಾವನೆ ಬ್ರಿಟಿಷರದ್ದಾಗಿತ್ತು.

ಅಸ್ಪೃಶ್ಯರು ಕೂಡ ಸ್ಥಳೀಯರಿದ್ದು ಸ್ಥಳೀಯ ಧಾರ್ಮಿಕರೊಡನೆ ಹೋರಾಟ ನಡೆಸಬೇಕಾದ ಅನಿವಾರ್ಯ. ತಾರತಮ್ಯಗಳನ್ನು ದೈವೀಕರಿಸಿ ಆಜೀವ ಪರ್ಯಂತ ಅಜ್ಞಾನದಲ್ಲಿಟ್ಟು ಸೇವೆ ಮಾಡಿಸಿಕೊಳ್ಳುತ್ತಿದ್ದರು. ದೇವದಾಸಿಯರನ್ನು ಮಾಡಿ, ಸಂಪನ್ಮೂಲಗಳನ್ನು ತಾವು ಅನುಭವಿಸಿ ಎಂಜಲನ್ನು ಮಾತ್ರ ನೀಡುವ, ಬೇಡುವ ಸ್ಥಿತಿ ನಿರ್ಮಿಸಿದ್ದರು. ದಲಿತರು ಅಲ್ಪಸಂಖ್ಯಾತರಿದ್ದು ಅಸಂಘಟಿತರಾಗಿದ್ದರು. ಕರಿಯರು ಬಹುಸಂಖ್ಯಾತರಿದ್ದು ಸಂಘಟಿತರಾಗಿದ್ದರು. ಅದರಿಂದ ಜಯಶಾಲಿಯಾಗಿ ಅವರದೇ ಆದ ಸರಕಾರ ಹೊಂದಲು ಸಾಧ್ಯವಾಯಿತು. ನೆಲ್ಸನ್ ಕರಿಯರ ಪ್ರತಿನಿಧಿಯಾಗಿ ರಾಜ್ಯಾಧಿಕಾರ ದಲಿತರ ಕೈಗೆ ಬರಬೇಕು ಎಂದು ಆಶಿಸಿದರು.

ನೆಲ್ಸನ್ ಮಂಡೇಲಾರು ತನ್ನ ನಾಡು, ತನ್ನ ಜನಾಂಗದ ಬಗ್ಗೆ ಭರವಸೆ ಇಟ್ಟುಕೊಂಡು ಆಡಳಿತ ನಡೆಸುತ್ತಿದ್ದಾರೆ. ಅಂಬೇಡ್ಕರ್ ಭ್ರಮ ನಿರಸನ ಹೊಂದಿದ್ದವರು. ಕಾಂಗ್ರೆಸ್ ಸರಕಾರ ಪೂನಾ ಒಪ್ಪಂದದ ಬಗ್ಗೆ ನಿರ್ಲಕ್ಷ್ಯ ತಾಳಿದ್ದನ್ನು ಕಂಡು ಕುಪಿತಗೊಂಡಿದ್ದರು. ಸಂಧಾನಗಳು, ಒಪ್ಪಂದಗಳು ಇಬ್ಬರ ಜೀವನದಲ್ಲೂ ಅನಿವಾರ್ಯವೆಂಬಂತೆ ಬಂದಿದ್ದವು. ಇಬ್ಬರೂ ಜನಾಂಗದ, ಸಾರ್ವಜನಿಕ ಆಸ್ತಿಯಾಗಿ ಉಳಿದರು. ಅಂಬೇಡ್ಕರ್ ೬೫ ವರ್ಷ ಜೀವಿಸಿದರೆ ನೆಲ್ಸನ್ನರು ೮೧

ವರ್ಷವಾದರೂ ಜೀವಂತವಿದ್ದಾರೆ. ಜನಾಂಗಗಳು ಬೇರೆ ಬೇರೆಯಾದರೂ ಶತ್ರುಗಳು ಇಬ್ಬರಿಗೂ ಸಾಮಾನ್ಯವಾಗಿ ಒಬ್ಬರೇ ಆಗಿದ್ದರು. ಅವರೇ ಬ್ರಿಟಿಷರು ಒಂದರ್ಥದಲ್ಲಿ. ಇನ್ನೊಂದು ಅರ್ಥದಲ್ಲಿ ಸ್ವಧರ್ಮಿಗಳು—ಅಂದರೆ ಕ್ರಿಸ್ತಿಯನ್ ಬಿಳಿಯರಿಗೆ ಕ್ರಿಸ್ತಿಯನ್ ಕರಿಯರು ಹಾಗೆಯೇ ಹಿಂದು ಸವರ್ಣೀಯರಿಗೆ ಹಿಂದು ಅಸ್ಪೃಶ್ಯರು. ನೆಲ್ಸನ್ನರ ಕೈಗೆ ಆಡಳಿತದ ಕೀಲಿ ಸಿಕ್ಕಿತ್ತು. ಅಂಬೇಡ್ಕರ್‌ಗೆ ಅಂತಹ ಅವಕಾಶವೇ ಒದಗಿ ಬರಲಿಲ್ಲ. ಆಡಳಿತದ ಅಭಿವೃದ್ಧಿಯ ಆಯುಧ ಬೇರೆಯವರ ಕೈಗೆ ಕೊಡಿಸಿದ್ದು ಪೂನಾ ಒಪ್ಪಂದ. ಅದರಿಂದ ಅಂಬೇಡ್ಕರ್ ಕೊನೆಕೊನೆಗೆ ನಿರಾಶರಾದರು. ರಾಜ್ಯಾಧಿಕಾರವನ್ನು ಈಗಿರುವ ಮತದಾನದ ಹಕ್ಕಿನ ಮೂಲಕ ಸಾಧಿಸಬೇಕೆಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್.ಪಿ.ಐ.) ಕಟ್ಟಿದರು. ಎರಡು ವ್ಯಕ್ತಿಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇರೆ ಬೇರೆ ವೇಳೆಯಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಪ್ರಸಿದ್ಧರು. ಆದರೆ, ಇಬ್ಬರ ಗುರಿ ಒಂದೇ ಆಗಿತ್ತು. ಇಬ್ಬರೂ ರಾಜಕೀಯ ಮುತ್ಸದ್ದಿಗಳು, ಶಾಂತಿಪ್ರಿಯರು, ರಾಜನೀತಿ ಚಿಂತಕರು, ಇಬ್ಬರ ವೈವಾಹಿಕ ಪರಿಸ್ಥಿತಿ ಹೆಚ್ಚು ಕಡಿಮೆ ಒಂದೇ ಇದ್ದಿತು. ಪತ್ನಿಯರಿಗೆ ಸಮಾನತೆಯನ್ನು ನೀಡಿದ್ದ ನೆಲ್ಸನ್ನರು ಪರಿಸ್ಥಿತಿ ಒತ್ತಡದಿಂದ ಚಿಂತಕರಾದರೆ, ಅಂಬೇಡ್ಕರ್ ಹುಟ್ಟಿನಿಂದ ಸ್ವಯಂಚಿಂತಕರಾಗಿದ್ದರು. ಇಬ್ಬರನ್ನೂ ಸಮನಾಗಿ ಕಾಡಿದ ಒಂದು ವಿಷಯ ಅಂದರೆ ಅದು ಮತಾಂತರ. ನೆಲ್ಸನ್ ಹುಟ್ಟಿನಿಂದ ಕ್ರಿಸ್ತಿಯನ್ ಆಗಿದ್ದು ಬಿಳಿಯರು ವಿರೋಧಿಸಿದ ಮತಾಂತರವಾಗಬೇಕೆನ್ನುವ, ಮಾಡಿಸಬೇಕೆನ್ನುವ ಆಲೋಚನೆ ಬರಲಿಲ್ಲ. ಅದೇ ಅಂಬೇಡ್ಕರ್‌ಗೆ ತನಗೆ, ತನ್ನ ಜನಾಂಗದ ವಿಮೋಚನೆಗೆ ಮತಾಂತರವೊಂದೇ ಪರಿಹಾರ. ಧರ್ಮ ಯಾವುದಾದರೂ ಸರಿ ಹಿಂದು ಧರ್ಮ ಬಿಡಬೇಕು ಎಂದು ಪ್ರಚಾರ ನಡೆಸಿದರು. ಅಂಬೇಡ್ಕರ್ ಬೌದ್ಧಧರ್ಮಕ್ಕೆ ಮತಾಂತರವಾಗುವ ಬದಲು ಕ್ರಿಸ್ತಿಯನ್ ಅಥವಾ ಮುಸ್ಲಿಂ ಧರ್ಮಕ್ಕೆ ಮತಾಂತರವಾಗಿದ್ದರೆ ದಲಿತರ ಈಗಿನ ಪರಿಸ್ಥಿತಿ ಇದೇ ರೀತಿ ಇರುತ್ತಿದ್ದವು ಎಂದು ಊಹಿಸಲಾಗದು!

ಸಮಾಜದ ವಿವಿಧ ಸಾಂಸ್ಥಿಕ ಘಟಕಗಳಲ್ಲಿ ಪುರುಷಪ್ರಧಾನತೆ

—ಡಾ. ಎಚ್. ಎಂ. ಹೇಮಲತ

ಯಾವುದೇ ಸಮಾಜವು ವಿವಿಧ ಸಾಂಸ್ಥಿಕ ಘಟಕಗಳಿಂದ ಕೂಡಿರುತ್ತದೆ. ಉದಾಹರಣೆಗೆ ಕುಟುಂಬ, ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸಮೂಹ ಮಾಧ್ಯಮ, ಧಾರ್ಮಿಕ ಹಾಗೂ ಸರ್ಕಾರೀ ಸಂಸ್ಥೆಗಳು ಇವೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಪುರುಷಪ್ರಧಾನತೆಯ ಅಂಶ ಹಾಗೂ ತತ್ತ್ವಗಳನ್ನು ಪ್ರತಿಪಾದಿಸುತ್ತಿರುತ್ತವೆ. ಈ ಅಂಶಗಳು ಸಹಜವೇನೋ ಎನ್ನುವಷ್ಟರ ಮಟ್ಟಿಗೆ ಜನರಲ್ಲಿ ಹಾಗೂ ಇಡೀ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿವೆ. ಹೀಗೆ ವಿವಿಧ ಸಾಂಸ್ಥಿಕ ಘಟಕಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ವ್ಯಕ್ತವಾಗುವ ಪುರುಷ ಪ್ರಧಾನ ಅಂಶಗಳನ್ನು ಗುರುತಿಸುವುದೇ ಈ ಲೇಖನದ ಮುಖ್ಯ ಉದ್ದೇಶ.

ಕುಟುಂಬ

ಪುರುಷಪ್ರಧಾನತೆಯ ತತ್ತ್ವಗಳನ್ನು ಹುಟ್ಟುಹಾಕುವ ಹಾಗೂ ಎತ್ತಿಹಿಡಿಯುವ ಮೊತ್ತಮೊದಲ ಘಟಕವೆಂದರೆ ಕುಟುಂಬ. ಹೀಗಾಗಿ ಹೆಣ್ಣುಮಕ್ಕಳ ಹಾಗೂ ಮಹಿಳೆಯರ ಶೋಷಣೆಯ ಮೂಲ ಕುಟುಂಬವೆಂದು ಹೇಳಬಹುದು. ಹಾಗೆಂದು ಕುಟುಂಬ ವ್ಯವಸ್ಥೆಯನ್ನು ವಿರೋಧಿಸಬೇಕೆಂದೇನೂ ಇಲ್ಲ. ಇಲ್ಲಿ ಕಂಡುಬರುವ ಶೋಷಣಯುಕ್ತ ಪುರುಷ ಪ್ರಧಾನ ಅಭಿವ್ಯಕ್ತಿಗಳನ್ನು ಗುರುತಿಸಿ ಬದಲಾಯಿಸುವುದು ಅಗತ್ಯ. ಅವು ಹೇಗೆ ಅಭಿವ್ಯಕ್ತಗೊಳ್ಳುತ್ತವೆ ಎಂಬುದನ್ನು ನೋಡೋಣ.

- ಶೇಕಡ ೪೦ ರಷ್ಟು ಮನೆಯಜಮಾನಿಕೆ ಮಹಿಳೆಯ ಕೈಯಲ್ಲಿದ್ದರೂ ಪುರುಷನನ್ನೇ ಮನೆಯ ಯಜಮಾನನನ್ನಾಗಿ ಪರಿಗಣಿಸಲಾಗುತ್ತದೆ. ಪುರುಷನು ಜೈವಿಕವಾಗಿ ಬಲಾಢ್ಯ. ಹೆಚ್ಚು ಸಾಮರ್ಥ್ಯ ಹಾಗೂ ಅನುಭವವುಳ್ಳವನು ಎಂದು ಪರಿಗಣಿಸಲಾಗಿದೆ.
- ಗಂಡುಮಕ್ಕಳು ಮುಂದೆ ಸಂಪಾದಿಸುವವರು, ವಂಶ ಬೆಳೆಸುವವರು ಹಾಗೂ ಕುಟುಂಬವನ್ನು ಸಲಹುವವರೆಂದು ಸಮಾಜೀಕರಿಸಿ ಅವರಿಗೆ ಹೆಚ್ಚು ಬೆಲೆಕೊಡಲಾಗುತ್ತದೆ.
- ಹೆಣ್ಣುಮಕ್ಕಳನ್ನು, ಕುಟುಂಬಕ್ಕೆ ಹೊರೆ, ಕುಟುಂಬದ ತಾತ್ಕಾಲಿಕ ಸದಸ್ಯರು, ಮನೆ ಕೆಲಸ ಮಾಡುವವರು ಮತ್ತು ತಮ್ಮ ಮುಂದಿನ ಜೀವನವನ್ನು ಬೇರೆಯವರ ಮನೆಯಲ್ಲಿ ನಡೆಸಲು ಸಿದ್ಧರಾಗುವಂತೆ ಸಮಾಜೀಕರಿಸಲಾಗುತ್ತದೆ.

- ಸಂಗಾತಿ ಆಯ್ಕೆ ವಿವಾಹ ಚೌಕಟ್ಟಿನಲ್ಲಿ ಲೈಂಗಿಕ ಸಂಬಂಧ, ಕುಟುಂಬ ಯೋಜನೆಯ ವಿಧಾನಗಳು, ಎಷ್ಟು ಮಕ್ಕಳು ಬೇಕು ಮುಂತಾದ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಾಗ ಮಹಿಳೆಯರಿಗೆ ಅವಕಾಶ ಕಡಿಮೆ.
- ಮನೆಯೊಳಗೆ ಹೆಂಗಸರ ಮೇಲೆ ನಡೆಯುವ ಹಿಂಸೆ ಸ್ವಾಭಾವಿಕ ಮತ್ತು ಅದು ಕುಟುಂಬದ ಖಾಸಗಿ ವ್ಯವಹಾರ ಎಂದು ಪರಿಗಣಿಸಲಾಗಿದೆ. ಇದರಿಂದ ಪುರುಷರಿಗೆ ಮಹಿಳೆಯರನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡು ಅವರ ಮೇಲೆ ಅಧಿಕಾರ ಚಲಾಯಿಸಲು ಸಾಧ್ಯವಾಗಿದೆ.
- ಮಹಿಳೆಯರು ಉತ್ಪಾದನೆ, ಪುನರುತ್ಪಾದನೆ ಹಾಗೂ ಮನೆಕೆಲಸ ಹೀಗೆ ಮೂರು ರೀತಿಯ ಕೆಲಸಗಳಲ್ಲಿ ತೊಡಗಿದ್ದಾರೆ. ಆದರೆ ಅವರ ಪಾರಂಪರಿಕ ಪಾತ್ರ ನಿರೀಕ್ಷಣೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಮನೆಯಲ್ಲಿನ ಲಿಂಗಾಧಾರಿತ, ಶ್ರಮ ವಿಭಜನೆ ಗಂಡುಮಕ್ಕಳಿಗೆ ಹಾಗೂ ಪುರುಷರಿಗೆ ಹೆಚ್ಚು ಲಾಭದಾಯಕವಾಗಿದೆ.
- ಕುಟುಂಬವು ಲಿಂಗಾಧಾರಿತ ಸಮಾಜೀಕರಣದ ಮೂಲಕ ಪುರುಷಪ್ರಧಾನ ತತ್ತ್ವಗಳನ್ನು, ಶಾಶ್ವತಗೊಳಿಸಿಕೊಂಡು ಹೋಗುತ್ತಿದೆ. ಇದರಲ್ಲಿ ಮಹಿಳೆಯರು ಸಮಾಜೀಕರಿಸುವ ಮತ್ತು ಸಮಾಜೀಕರಣಗೊಳ್ಳುವ ಪಾತ್ರವನ್ನು ವಹಿಸುತ್ತಾರೆ.

ಶಿಕ್ಷಣ ಪದ್ಧತಿಗಳು ಹಾಗೂ ಸಂಸ್ಥೆಗಳು

ಕುಟುಂಬದೊಳಗೆ ಮಾತ್ರವಲ್ಲ ಕುಟುಂಬದ ಹೊರಗಿನ ವಿವಿಧ ಸಂಸ್ಥೆಗಳಲ್ಲೂ ಪುರುಷಪ್ರಧಾನ ತತ್ತ್ವಗಳು ಅಭಿವ್ಯಕ್ತಗೊಳ್ಳುವುದನ್ನು ಕಾಣುತ್ತೇವೆ—ಶಿಕ್ಷಣ ಕ್ಷೇತ್ರದಲ್ಲಿ ಗಂಡುಮಕ್ಕಳಿಗೆ ಹೋಲಿಸಿದರೆ ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಕಾಶಗಳು ಕಡಿಮೆ. ಹೆಣ್ಣುಮಗುವಿನ ಪಾತ್ರ ನಿರೀಕ್ಷಣೆಗಳು, ಶಿಕ್ಷಣದ ಪರಿವಿಡಿ, ಮಾದರಿ ಮತ್ತು ವಿಧಾನಗಳ ಮೇಲೆ ಪ್ರಭಾವ ಬೀರುತ್ತವೆ.

ಶೈಕ್ಷಣಿಕ ಪಠ್ಯಕ್ರಮ, ಶಾಲೆಯ ಸಮಯ, ಶಾಲೆಯ ದೂರ, ಹೆಣ್ಣು ಮಕ್ಕಳ ಬಗ್ಗೆ ತೋರುವ ನಡವಳಿಕೆ, ಬುದ್ಧಿಮಟ್ಟದ ಅಳೆಯುವಿಕೆ, ಶಿಕ್ಷಕರ ತರಬೇತಿ, ಹೆಣ್ಣು ಮಕ್ಕಳ ಶಾಲೆಗಳ ಕೊರತೆ, ಇವೆಲ್ಲವೂ ಹೆಣ್ಣು ಮಕ್ಕಳಲ್ಲಿ ತೋರುವ ಪಕ್ಷಪಾತ ಮನೋಭಾವಗಳ ಪ್ರತಿಬಿಂಬಗಳಾಗಿವೆ.

ಮಹಿಳೆಯರನ್ನು 'ಚಿಂತಕರು' ಎನ್ನುವುದಕ್ಕಿಂತ 'ಹೇಳಿದ್ದನ್ನು ಮಾಡುವವರು' 'ಕಾರ್ಯಗತಗೊಳಿಸುವವರು' ಎಂದು ಭಾವಿಸಿರುವುದರಿಂದ ಪುರುಷರು ಸೃಷ್ಟಿಸಿದ ಜ್ಞಾನವನ್ನು ಪುರುಷರ ಹಿತಾಸಕ್ತಿಗೆ ಅನುಗುಣವಾಗಿ ಬಳಸಲಷ್ಟೇ ಅರ್ಹರು ಎಂಬ ದೃಷ್ಟಿಯಿಂದ ಮಹಿಳೆಯರನ್ನು ನೋಡಲಾಗುತ್ತಿದೆ. ಆದುದರಿಂದ ಇವತ್ತಿನ ಸಂದರ್ಭದಲ್ಲಿ ಮಹಿಳೆಯರು 'ಜ್ಞಾನದ ಸೃಷ್ಟಿಕರ್ತರು' ಎಂಬ ಭಾವನೆಯನ್ನು ನಿರಾಕರಿಸಲಾಗುತ್ತಿದೆ. ಮಹಿಳೆಯರು ಸಮಾಜವನ್ನು ಸಂರಕ್ಷಿಸುವ ಜ್ಞಾನವನ್ನು ಸೃಷ್ಟಿಸುತ್ತಿದ್ದರೂ, ಆ ಜ್ಞಾನವನ್ನು ಪುರುಷರು ಅಪಹರಿಸಿ ತಮ್ಮದಾಗಿರಿಸಿಕೊಂಡಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ಪರಿಸರ ಸಂರಕ್ಷಣೆ ಹಾಗೂ ಗಿಡಮೂಲಿಕೆಗಳಿಂದ ಔಷಧಿ ತಯಾರಿಸುವ ಜ್ಞಾನವನ್ನು ಮಹಿಳೆಯರು ಹೊಂದಿದ್ದರೂ ಅದು

ಬೆಳಕಿಗೆ ಬರುತ್ತಿಲ್ಲ, ಬರುವುದಾದರೂ ಪುರುಷರ ಮೂಲಕವೇ ಹೊರಬರಬೇಕು. ಶೈಕ್ಷಣಿಕ ಕ್ಷೇತ್ರದಲ್ಲಿ ಮಹಿಳೆಯರಿಗೆ ಕಡಿಮೆ ಅವಕಾಶ ಹಾಗೂ ಮಾಹಿತಿಗಳನ್ನು ನೀಡುವುದು ಅವರ ಸ್ವೋಪಜ್ಞತೆಯನ್ನು ನಿಯಂತ್ರಿಸುವ ಪ್ರಮುಖ ವಿಧಾನಗಳಲ್ಲಿ ಒಂದು. ಅವರ ಹಿತೈಷಿಗಳು (ತಂದೆ, ಗಂಡ, ಅಣ್ಣ, ತಮ್ಮ) "ನೀನು ಓದಿದಾಕ್ಷಣ ಪುರುಷರಂತೆ ಆಗುವೆಯೆಂದು ತಿಳಿದಿರುವೆಯೇನು? ಸಮಾನತೆ, ಸ್ವಾತಂತ್ರ್ಯಗಳ ಬಗ್ಗೆ ನಾವು ಸಾಕಷ್ಟು ಕೇಳಿದ್ದೇವೆ, ಆದರೆ ಈ ಮನೆಕೆಲಸಗಳನ್ನು ಮಾಡುವವರು ಯಾರು?" ಎಂದು ಪ್ರಶ್ನಿಸುತ್ತಾ ಅವರ ಶಿಕ್ಷಣದ ಅವಕಾಶಗಳನ್ನು ನಿರಾಕರಿಸುವುದಕ್ಕೋಸ್ಕರವೇ ಇಂಥ ಮಾತುಗಳನ್ನು ಆಡುತ್ತಿರುತ್ತಾರೆ.

ಲಿಂಗಾಧಾರಿತ ರೂಢಿಬದ್ಧತೆಗಳನ್ನು ಶಾಶ್ವತಗೊಳಿಸುವಲ್ಲಿ ಸಮೂಹ ಮಾಧ್ಯಮಗಳ ಪಾತ್ರ

ಪುರುಷಪ್ರಧಾನ ಮೌಲ್ಯಗಳನ್ನು ಪ್ರಚುರಪಡಿಸುವಲ್ಲಿ ಸಮೂಹ ಮಾಧ್ಯಮಗಳು ಪ್ರಮುಖ ಸಾಧನಗಳಾಗಿವೆ. ಇವುಗಳ ಗುರಿ, ಕಾರ್ಯವೈಖರಿ, ಇವುಗಳಲ್ಲಿ ತೊಡಗಿರುವ ಜನ ಮುಂತಾದವುಗಳು ಲಿಂಗಾಧಾರಿತ ರೂಢಿಬದ್ಧತೆಗಳನ್ನು ಶಾಶ್ವತಗೊಳಿಸುತ್ತವೆ.

- ಇಂದಿನ ಸಮೂಹ ಮಾಧ್ಯಮವೂ ಕೆಲವೇ ಪುರುಷರ ಹಿಡಿತದಲ್ಲಿದೆ. ಇದನ್ನು ಮೇಲುವರ್ಗದ, ಮೇಲುಜಾತಿಯ ಆಳುವ ಧರ್ಮ ಮತ್ತು ಕೋಮುವಾದಗಳ ತಾದಾತ್ಮ್ಯಗಳನ್ನು ಚಿತ್ರಿಸಲು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ.
- ಮಹಿಳೆಯರನ್ನು ನಿರ್ದಿಷ್ಟ ಪಾತ್ರಗಳಲ್ಲಿ ಚಿತ್ರಿಸಲಾಗುತ್ತದೆ. ಎಲ್ಲರ ಬಗ್ಗೆ ಕಾಳಜಿಯಿರುವ ಹೆಂಡತಿಯಾಗಿ, ಪೋಷಿಸುವ ತಾಯಿಯಾಗಿ,ವಿಧೇಯ ಮಗಳಾಗಿ, ಕರ್ತವ್ಯನಿಷ್ಠ ಮತ್ತು ವಿಧೇಯ ಸೊಸೆಯಾಗಿ, ಲೈಂಗಿಕ ತೃಪ್ತಿ ನೀಡುವ ಸಂಗಾತಿಯಾಗಿ, ಮೋಹಕ ಕಾರ್ಯನಿರ್ವಾಹಕಳಾಗಿ, ಮರುಳು ಮಾಡುವ ಮಾಯಾಂಗನೆಯಾಗಿ ಮತ್ತು ದೈವಕ್ಕೆ ಹೆದರುವ ವ್ಯಕ್ತಿಯಾಗಿ ಚಿತ್ರೀಕರಿಸಲಾಗುತ್ತದೆ.
- ಮಹಿಳೆಯರು ಮತ್ತು ಅವರ ದೇಹದ ವಸ್ತುಕರಣ ತನ್ನ ಎಲ್ಲೆಯನ್ನು ಮೀರುತ್ತಿದೆ. ಅತ್ಯಾಚಾರ, ನಗ್ನತೆ, ದೈಹಿಕ ಪೀಡನೆ ಮುಂತಾದವುಗಳನ್ನು ಪುರುಷರ ವಿನೋದಕ್ಕೆ ಮತ್ತು ಅವರು ಬಳಸುವ ವಸ್ತುಗಳ ಮಾರಾಟಕ್ಕೆ ಉಪಯೋಗಿಸಲಾಗುತ್ತಿದೆ. ಉದಾ: ಶೇವಿಂಗ್ ಕ್ರೀಮ್, ಪುರುಷರ ಒಳಉಡುಪುಗಳು, ಬ್ಲೇಡ್ ಮುಂತಾದವು. ಲೈಂಗಿಕತೆಯ ಮಹತ್ವವನ್ನು ಮತ್ತು ಮಹಿಳೆಯರ ಮೇಲಿನ ಹಿಂಸಾಚಾರವನ್ನು ಪುರುಷರ ಬಯಕೆ ಕಾಮನೆಗಳನ್ನು ಉದ್ರೇಕಿಸುವುದಕ್ಕೆ ಮತ್ತು ಅವರ ಮನತಣಿಸುವುದಕ್ಕೆ ಬಳಸಿಕೊಳ್ಳಲಾಗುತ್ತಿದೆ. ಈ ರೀತಿಯ ಕಲ್ಪನೆಗಳ ಚಿತ್ರೀಕರಣ ಮಕ್ಕಳ ಮೇಲೆ ಆಳವಾದ ಕೆಟ್ಟ ಪರಿಣಾಮ ಬೀರುತ್ತವೆ. ಏಕೆಂದರೆ ಹೀಗೆ ಚಿತ್ರೀಕರಿಸಿದ ಕಲ್ಪನೆಗಳನ್ನೇ ಮಕ್ಕಳು ಎಲ್ಲಾ ಮಹಿಳೆಯರಲ್ಲೂ ಕಂಡುಕೊಳ್ಳುತ್ತವೆ.

- ಮಹಿಳೆಯರನ್ನು ಕೇವಲ ಗೃಹವಸ್ತುಗಳನ್ನು ಬಳಸುವ, ಧಾರ್ಮಿಕ ಕಾರ್ಯಗಳನ್ನು ಆಚರಣೆಗೆ ತರುವ ಹಾಗೂ ಪುರುಷರನ್ನು ಆಕರ್ಷಿಸಲು, ಸಂತೋಷಪಡಿಸಲು, ತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೋಸ್ಕರ ಸೌಂದರ್ಯವರ್ಧಕಗಳನ್ನು ಕೊಳ್ಳುವ ಗ್ರಾಹಕರನ್ನಾಗಿ ನೋಡಲಾಗುತ್ತದೆ ಮತ್ತು ಅದೇ ರೀತಿ ಚಿತ್ರಿಸಲಾಗುತ್ತದೆ.

ಧಾರ್ಮಿಕ ಸಂಸ್ಥೆಗಳು

ಧರ್ಮವು ಪುರುಷ ಪ್ರಧಾನ ಮೌಲ್ಯಗಳನ್ನು ಎತ್ತಿಹಿಡಿಯುವ ಸಂಸ್ಥೆಯಾಗಿದೆ. ಧಾರ್ಮಿಕ ನಂಬಿಕೆ, ಆಚರಣೆ, ತತ್ತ್ವಗಳಲ್ಲಿ ಇದು ಪ್ರತಿಬಿಂಬಿತವಾಗುತ್ತದೆ.

- ಧರ್ಮವು ಮುಖ್ಯವಾಗಿ ಪುರೋಹಿತ, ಪ್ರವಾದಿ ಮೌಲ್ವಿ ಮೊದಲಾದ ಪುರುಷರ ಹಿಡಿತದಲ್ಲಿರುತ್ತದೆ. ಎಲ್ಲಾ ಧರ್ಮಗಳು ಪುರುಷರ ಶಕ್ತಿಯು ಶ್ರೇಷ್ಠವಾದದ್ದು, ದೈವಿಕವಾದದ್ದು ಎಂದು ನಂಬಿವೆ. ಎಲ್ಲಾ ಪ್ರಮುಖ ಧರ್ಮಗಳನ್ನು ಹುಟ್ಟುಹಾಕಿದವರು, ಪ್ರತಿಪಾದಿಸುವವರು ಮತ್ತು ಅವುಗಳನ್ನು ರಕ್ಷಿಸಿಕೊಂಡು ಬರುತ್ತಿರುವವರು ಮೇಲುವರ್ಗದ ಮತ್ತು ಮೇಲುಜಾತಿಯ ಪುರುಷರು.
- ಮಹಿಳೆಯರ ಹಕ್ಕು , ಕರ್ತವ್ಯ, ನೀತಿನಿಯಮ, ನಡವಳಿಕೆ, ಸಮಾಜದ ಜನರೊಂದಿಗೆ ಅವರ ಸಂಬಂಧ ಎಲ್ಲವನ್ನೂ ಧರ್ಮ ನಿರ್ಧರಿಸುತ್ತದೆ. ಮಹಿಳೆಯರು ಕೀಳು, ಅಪವಿತ್ರರು, ಪಾಪವುಳ್ಳವರು. ತುಚ್ಛರು, ಭಾವನಾತ್ಮಕರು, ಅಡ್ಡದಾರಿ ಹಿಡಿಯುವವರು ಎಂದು ಧರ್ಮವೇ ಸ್ಪಷ್ಟವಾಗಿ ಹೇಳುತ್ತದೆ.
- ಧಾರ್ಮಿಕ ಗ್ರಂಥಗಳು ಮಹಿಳೆಯರ ಕೆಲವು ಕಲ್ಪನೆಗಳನ್ನು ಶ್ಲಾಘಿಸುವುದರ ಮೂಲಕ (ಉದಾ: ಸೀತೆ, ಸಾವಿತ್ರಿ, ಅರುಂಧತಿ, ಇತರ) ಮಹಿಳೆಯರ ರೂಢಿ ಬದ್ಧ ಪಾತ್ರಗಳನ್ನು ಶಾಶ್ವತಗೊಳಿಸುತ್ತಾ ಹೋಗುತ್ತಿವೆ. ಈ ಗ್ರಂಥಗಳು ಸಾಮಾಜಿಕ ಮೌಲ್ಯಗಳು, ಆದರ್ಶ ಪತ್ನಿತ್ವ ಮತ್ತು ಮಾತೃತ್ವ ಮುಂತಾದ ಆದರ್ಶಗಳ ಅನುಕರಣೆಯನ್ನು ವಿವರಿಸುತ್ತವೆ. ಇವುಗಳನ್ನು ಮೀರಿ ನಡೆದರೆ ಪಾಪವುಂಟಾಗುತ್ತದೆ. ದೈವನಿಂದನೆಗೆ ಮತ್ತು ಸಾಮಾಜಿಕ ಬಹಿಷ್ಕಾರಕ್ಕೆ ಗುರಿಯಾಗಬೇಕಾಗುತ್ತದೆ ಎಂದು ತಿಳಿಸುತ್ತವೆ.
- ಪುರುಷರ ಸ್ಥಾನವನ್ನು ಬಲಪಡಿಸುವಂತಹ ಧಾರ್ಮಿಕ ಮತ್ತು ಲಿಂಗಾಧಾರಿತ ತತ್ವಗಳನ್ನು ಪ್ರಚಾರ ಮಾಡುವುದಕ್ಕೆ ಮಹಿಳೆಯರನ್ನು ಬಳಸಿಕೊಳ್ಳಲಾಗುತ್ತದೆ. (ಉದಾ: ದುರ್ಗಾವಾಹಿನಿ, ಚಾಮುಂಡಿ) ಮಹಿಳೆಯರನ್ನು ಕೇವಲ ನೈತಿಕ ಮೌಲ್ಯಗಳನ್ನು ಮತ್ತು ಸಾಂಸ್ಕೃತಿಕ ಪದ್ಧತಿಗಳನ್ನು ರಕ್ಷಿಸಿಕೊಂಡು ಹೋಗುವವರು ಎಂಬ ದೃಷ್ಟಿಯಿಂದ ನೋಡಲಾಗುತ್ತದೆ.
- ಮಹಿಳೆಯರು ಜೀವನ ಪೂರ್ತಿ ಪುರುಷರ ಅಧೀನದಲ್ಲಿರಬೇಕೆಂದು ಧರ್ಮವು ಸ್ಪಷ್ಟವಾಗಿ ತಿಳಿಸುತ್ತದೆ (ಅದಕ್ಕೆ ವೈಚಾರಿಕ ವಿವರಣೆಯನ್ನು ನೀಡುತ್ತದೆ). ಅವರ ಜೀವನದಲ್ಲಿ ಬರುವ

ಪುರುಷರ ಮೂಲಕ ಅವರನ್ನು ಗುರುತಿಸುತ್ತದೆ. ಹೀಗೆ ಧರ್ಮವು ಮಹಿಳೆಯರಿಗೆ ಪ್ರತ್ಯೇಕ ವ್ಯಕ್ತಿತ್ವವನ್ನು ನಿರಾಕರಿಸುತ್ತದೆ.

- ವೈಯಕ್ತಿಕ ಕಾನೂನುಗಳು ತಮ್ಮ ಮೂಲತತ್ತ್ವಗಳನ್ನು ತಮ್ಮ ತಮ್ಮ ಧರ್ಮಗಳಿಂದ ಪಡೆದುಕೊಂಡಿವೆ. ಮಹಿಳೆಯರ ಮೂಲಭೂತ ಹಕ್ಕುಗಳನ್ನು ನಿರಾಕರಿಸಲು ಈ ಕಾನೂನುಗಳನ್ನು ಪರಿಣಾಮಕಾರಿಯನ್ನಾಗಿ ಬಳಸಿಕೊಳ್ಳಲಾಗಿದೆ. ಮಹಿಳೆಯರ ಆಸ್ತಿ, ಹಕ್ಕುಬಾಧ್ಯತೆ, ವಿಚ್ಛೇದನ, ಜೀವನಾಂಶ, ಮಕ್ಕಳ ಅಭಿರಕ್ಷೆ — ಮುಂತಾದುವುಗಳು ಪುರುಷರಿಗೆ ಹೆಚ್ಚು ಲಾಭದಾಯಕವಾಗಿರುವುದರಿಂದ ವೈಯಕ್ತಿಕ ಕಾನೂನುಗಳು ಪುರುಷರನ್ನು ಹೆಚ್ಚು ಬಲಪಡಿಸುತ್ತವೆ.
- ಮೂಲಭೂತವಾದವು ಮಹಿಳೆಯರ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ಏಕೆಂದರೆ ಇಲ್ಲಿ ಮಹಿಳೆಯರ ಸ್ವಾತಂತ್ರ್ಯ ಮತ್ತು ಗುರುತಿಸುವಿಕೆಯ ಮೇಲೆ ದಾಳಿ ನಡೆದು ಅವರು ಮನೆಯೊಳಗೆ ತಳ್ಳಲ್ಪಡುತ್ತಾರೆ ಮತ್ತು ಅವರ ಸಾಮಾಜಿಕ ಕಟ್ಟುಪಾಡುಗಳು ಬಿಗಿಗೊಳ್ಳುತ್ತವೆ. ಅವರ ಸಂಚಾಲನೆಯ ಮೇಲೆ ನಿಯಂತ್ರಣ ಹೇರಿ ಪುರುಷರು ಗುರುತಿಸುವಂತಹ ಸ್ಥಳಗಳಿಗೆ ಅವರನ್ನು ನಿರ್ಬಂಧಿಸಲಾಗುತ್ತದೆ.
- ಧರ್ಮ ಮತ್ತು ರಾಜಕೀಯದ ನಡುವೆ ಹತ್ತಿರದ ಸಂಬಂಧವಿರುವುದನ್ನು ನಾವು ಕಾಣುತ್ತೇವೆ. ಈ ಆಟದಲ್ಲಿ ಪುರುಷರು ತಮ್ಮ ನಡುವೆ ಹೊಂದಾಣಿಕೆ ಮಾಡಿಕೊಳ್ಳಲು ಹುಟ್ಟುಹಾಕುವ ಕೋಮು ಗಲಭೆ ಮತ್ತು ರಾಜಕೀಯ ಹಿಂಸಾಚಾರಗಳಿಗೆ ಮಹಿಳೆಯರನ್ನು ಬಲಿಪಶುಗಳನ್ನಾಗಿ ಮಾಡುತ್ತಾರೆ. ಎರಡು ಕೋಮುಗಳ ನಡುವೆ ಜಗಳ ಉಂಟಾದ ಸಮಯದಲ್ಲಿ ತಮ್ಮ ಕುಟುಂಬ ಮತ್ತು ಮಕ್ಕಳ ರಕ್ಷಣೆಗೋಸ್ಕರ ಮಹಿಳೆಯರು ಕೈಗೆ ಕಲ್ಲುಮಣ್ಣನ್ನು ತೆಗೆದುಕೊಳ್ಳಬೇಕಾಗುತ್ತದೆ.

ಆರ್ಥಿಕ ವ್ಯವಸ್ಥೆ ಮತ್ತು ಸಂಸ್ಥೆಗಳು

ಆರ್ಥಿಕ ಸಂಪನ್ಮೂಲಗಳೆಲ್ಲವೂ ಪುರುಷರ ಹಿಡಿತದಲ್ಲಿರುವುದರಿಂದ ಅದು ಮಹಿಳೆಯರನ್ನು ಪರಾವಲಂಬಿಗಳನ್ನಾಗಿ ಮಾಡಿದೆ. ಆರ್ಥಿಕ ವ್ಯವಸ್ಥೆಯಲ್ಲಿ ಮಹಿಳಾ ವಿರೋಧವಾಗಿ ಕಂಡುಬರುವ ಅಂಶಗಳೆಂದರೆ:

- ಮಹಿಳೆಯರು ಮಾಡುವ ಮನೆಕೆಲಸವು ಅಗೋಚರ ಮತ್ತು ವೇತನರಹಿತ ಕೆಲಸವಾಗಿದೆ. ಅವರು ಮಾಡುವ ಕೃಷಿ ಕೆಲಸ, ಪಶುಪಾಲನೆ, ಗೊಬ್ಬರ ತಯಾರಿಕೆ, ಉರುವಲು ಸಂಗ್ರಹಣೆ ಮುಂತಾದ ಉತ್ಪಾದನಾ ಕೆಲಸಗಳು ಕೂಡ ಜನರಿಂದಾಗಲಿ ಸರ್ಕಾರದಿಂದಾಗಲಿ ಗುರುತಿಸಲ್ಪಡುವುದಿಲ್ಲ. ಅವು ಮೌಲ್ಯವಿಲ್ಲದ ಕೆಲಸಗಳಾಗಿವೆ.
- ಕಾರ್ಮಿಕರಾಗಿ ಮತ್ತು ಕೆಲಸಗಾರರಾಗಿ ಮಹಿಳೆಯರು ಮಾಡುವ ಕೆಲಸವು ಪುರುಷರ ಕೆಲಸಕ್ಕಿಂತ ಕೆಳಮಟ್ಟದ್ದು ಎಂದು ಪರಿಗಣಿಸಲಾಗಿದೆ. ಯಾವುದೇ ಒಂದು ಚಟುವಟಿಕೆ

ತೆಗೆದುಕೊಂಡರೂ ಅದರಲ್ಲಿ ಮಹಿಳೆಯರ ಕೆಲಸ ಪುರುಷರ ಕೆಲಸಕ್ಕಿಂತ ಕಡಿಮೆ ಶ್ರಮವುಳ್ಳದ್ದಾಗಿರುತ್ತದೆ ಎಂದು ನಂಬಲಾಗಿದೆ. ಹೀಗಾಗಿ ಮಹಿಳೆಯರು ಪುರುಷರಿಗಿಂತ ಕಡಿಮೆ ಕೂಲಿ ಪಡೆಯುತ್ತಾರೆ.

- ಅಂತಾರಾಷ್ಟ್ರೀಯ ಸಂಸ್ಥೆಗಳ ಆಜ್ಞೆಯಂತೆ ರೂಪಿಸಿದ ಆರ್ಥಿಕ ನೀತಿಗಳು ಅಭಿವೃದ್ಧಿ ಹೊಂದದ ದೇಶಗಳ ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭಾವ ಬೀರಿ ಆ ದೇಶಗಳ ಮಹಿಳೆಯರ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ. ಮೊದಲನೆಯದಾಗಿ ಕೆಲಸಗಾರರ ಸಂಖ್ಯೆಯ ಮಿತಗೊಳಿಸುವಿಕೆ, ಮಹಿಳೆಯರ ಮೇಲೆ ಹೆಚ್ಚಿನ ಪರಿಣಾಮ ಬೀರಿ ಅಸಂಘಟಿತ ಕ್ಷೇತ್ರಕ್ಕೆ ತಳ್ಳಲ್ಪಡುತ್ತಾರೆ. ಈ ಕ್ಷೇತ್ರದಲ್ಲಿ ಅವರಿಗೆ ಕಡಿಮೆ ಕೂಲಿ ಸಿಗುತ್ತದೆ. ಸಾಮಾಜಿಕ ಸೇವಾ ಸೌಲಭ್ಯಗಳು ದೊರೆಯುವುದಿಲ್ಲ. ಅವರಿಗೆ ಇತರ ಯಾವುದೇ ಸಂಪನ್ಮೂಲಗಳನ್ನು ಉದಾಹರಣೆಗೆ ಭೂಮಿ, ನೀರು, ಕಾಡಿನ ಉತ್ಪನ್ನ ಮುಂತಾದವುಗಳನ್ನು ಪಡೆಯುವುದು ಸಾಧ್ಯವಾಗುವುದಿಲ್ಲ.

ವೈದ್ಯಕೀಯ ಪದ್ಧತಿ ಮತ್ತು ವ್ಯವಸ್ಥೆಗಳು

ಕುಟುಂಬದ ಒಳಗೆ ಮತ್ತು ಹೊರಗೆ ಮಹಿಳೆಯರ ಆರೋಗ್ಯಕ್ಕೆ ಎರಡನೇ ಆದ್ಯತೆ ನೀಡಲಾಗುತ್ತದೆ. ಆಹಾರಸೇವನೆ, ಔಷಧೋಪಚಾರ ಮುಂತಾದವುಗಳಲ್ಲಿ ಕಂಡುಬರುವ ಲಿಂಗತಾರತಮ್ಯ ಮಹಿಳೆಯರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ.

- ಮನೆಯೊಳಗೆ ಆಹಾರ ವಿತರಣೆ ಮತ್ತು ಆಹಾರ ಸೇವನೆಯಲ್ಲಿ ಗಂಡುಮಕ್ಕಳು ಮತ್ತು ಹೆಣ್ಣು ಮಕ್ಕಳು, ಪುರುಷರು ಮತ್ತು ಮಹಿಳೆಯರ ನಡುವೆ ವ್ಯತ್ಯಾಸವಿರುವುದೆಂದು ಸಂಶೋಧನೆಯಿಂದ ತಿಳಿದುಬಂದಿದೆ. ಅದೇ ರೀತಿ ಆರೋಗ್ಯ ರಕ್ಷಣೆ ಮತ್ತು ಔಷಧೋಪಚಾರದಲ್ಲೂ ಮಹಿಳೆಯರನ್ನು ನಿರ್ಲಕ್ಷಿಸಲಾಗುತ್ತದೆ. ಇದು ಅವರ ದೈಹಿಕ ಮತ್ತು ಭಾವನಾತ್ಮಕ ಬೆಳವಣಿಗೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಮಹಿಳೆಯರು ಹೆಚ್ಚಾಗಿ ರಕ್ತಹೀನತೆಯಿಂದ ಬಳಲುತ್ತಾರೆ. ಆದರೂ ಕಠಿಣವಾದ ಮತ್ತು ಶ್ರಮಸಾಧ್ಯವಾದ ಕೆಲಸ ಮಾಡುತ್ತಿರುತ್ತಾರೆ.

- ಮಗುವನ್ನು ಹೆರುವುದಕ್ಕೆ ಸಂಬಂಧಪಟ್ಟಂತೆ ಮಾತ್ರ(ಅದರಲ್ಲೂ ಗಂಡುಮಗು ಹೆರಬಹುದೆಂಬ ಆಸೆಯಿಂದ) ಮಹಿಳೆಯರ ಆರೋಗ್ಯಕ್ಕೆ ಸ್ವಲ್ಪ ಗಮನ ನೀಡಲಾಗುತ್ತದೆ. ಆದರೆ ಒಬ್ಬ ವ್ಯಕ್ತಿಯಾಗಿ ಅಥವಾ ಒಬ್ಬ ಮಹಿಳೆಯಾಗಿ ಅವಳ ಆರೋಗ್ಯಕ್ಕೆ ಯಾವುದೇ ಬೆಲೆಯಿಲ್ಲ. ಹೆರಿಗೆಯ ನಂತರ ಅವಳಿಗೆ ನೀಡುವ ಆರೈಕೆ ಅವಳು ಎಂತಹ ಮಗುವನ್ನು ಹೆತ್ತಿದ್ದಾಳೆ ಎಂಬುದನ್ನು ಅವಲಂಬಿಸಿರುತ್ತದೆ. ಟಿ.ವಿ.ಯಲ್ಲಿ ಬರುವ ಕುಟುಂಬ ಯೋಜನೆಯ ಜಾಹೀರಾತು ಇದಕ್ಕೆ ಸಾಕ್ಷಿಯಾಗಿದೆ. ಸಾಹಿತ್ಯ ಹಾಗೂ ಧಾರ್ಮಿಕ ಗ್ರಂಥಗಳಲ್ಲಿನ ಉದಾಹರಣೆಗಳು ಮಹಿಳೆಯರು ಗಂಡುಮಗುವಿನ ನಿರೀಕ್ಷೆಯಲ್ಲಿ ಎಷ್ಟು ಮಾನಸಿಕ ಹೊರೆಯನ್ನು ಅನುಭವಿಸುತ್ತಾರೆ ಮತ್ತು ಗಂಡುಮಗುವಾಗದಿದ್ದ ಪಕ್ಷದಲ್ಲಿ ಪಾಪಪ್ರಜ್ಞೆಯಿಂದ ಎಷ್ಟು ತೊಳಲಾಡುತ್ತಾರೆ ಎಂಬುದನ್ನು ತೋರಿಸಿಕೊಟ್ಟಿವೆ.

■ ವೈಜ್ಞಾನಿಕ ಪ್ರಯೋಗಕ್ಕೆ ಅದರಲ್ಲೂ ಕುಟುಂಬ ಯೋಜನೆಯ ತಂತ್ರಜ್ಞಾನಗಳಲ್ಲಿ ಮಹಿಳೆಯರ ದೇಹವನ್ನು ವಸ್ತುವಿನಂತೆ ಬಳಸಿಕೊಳ್ಳಲಾಗುತ್ತಿದೆ. ಒಂದು ಕಡೆ ಮಹಿಳೆಯರ ದೇಹದ ಮೇಲೆ ಪ್ರಯೋಗ ನಡೆಸಿ, ತೊಂದರೆಗೀಡು ಮಾಡಿ ಶೋಷಣೆಗೆ ಗುರಿಪಡಿಸಿದರೆ, ಮತ್ತೊಂದು ಕಡೆ ಪುರುಷರನ್ನು ಇದರಿಂದ ಸಂಪೂರ್ಣವಾಗಿ ಹೊರಗಿರಿಸಲಾಗಿದೆ. ಕುಟುಂಬ ಯೋಜನೆಯ ತಂತ್ರಜ್ಞಾನಗಳು ಮಹಿಳೆಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರುತ್ತವೆ. ಉದಾ. ನಾರ್‌ಪ್ಲಾಂಟ್ ಎಂಬ ಗರ್ಭನಿರೋಧಕದಿಂದ ಉಂಟಾಗುವ ಇತರ ತೊಂದರೆಗಳು ಇತ್ತೀಚೆಗೆ ಬೆಳಕಿಗೆ ಬರುತ್ತಿವೆ.

■ ವೈದ್ಯಕೀಯ ಸಂಶೋಧನೆ ಮಹಿಳೆಯರ ಆರೋಗ್ಯವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು ವಿಶ್ಲೇಷಿಸಿಲ್ಲ. ವೈದ್ಯಕೀಯ ಮತ್ತು ಆರೋಗ್ಯ ಪದ್ಧತಿಗಳನ್ನು ಪುರುಷ ಪ್ರಧಾನ ವ್ಯವಸ್ಥೆಗೆ ತಕ್ಕಂತೆ ರೂಪಿಸಲಾಗಿದೆ (ಉದಾ: ಪ್ರಸೂತಿ ಶಾಸ್ತ್ರ, ಮನೋವಿಜ್ಞಾನ ಮುಂತಾದವುಗಳು) ಮಹಿಳೆಯರ ಮಾನಸಿಕ ಆರೋಗ್ಯಕ್ಕೆ ಸಾಕಷ್ಟು ಪ್ರಾಮುಖ್ಯತೆ ನೀಡಿಲ್ಲ. ಋತುಚಕ್ರದ ಮತ್ತು ದೈಹಿಕ ಒತ್ತಡಗಳನ್ನೂ ಸೈಕೋ-ಸೊಮಾಟಿಕ್ ಮತ್ತು ನ್ಯೂರಾಟಿಕ್ ಎಂದು ಪರಿಗಣಿಸಲಾಗಿದೆ. ಮನೆಯಲ್ಲಿ ಮತ್ತು ಅವರು ಕೆಲಸ ಮಾಡುವ ಅಸಂಘಟಿತ ಕ್ಷೇತ್ರ ಎರಡರಲ್ಲೂ ಮಹಿಳೆಯರ ವೃತ್ತಿಗೆ ಸಂಬಂಧಪಟ್ಟ ಖಾಯಿಲೆಗಳನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ತಂತ್ರಜ್ಞಾನದ ಕ್ರಾಂತಿ ಮಹಿಳೆಯರ ದೈಹಿಕ ಶ್ರಮವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಗಣಕಯಂತ್ರಗಳು ಮತ್ತು ಪ್ರೆಸ್ಸಿಂಗ್ ಯಂತ್ರಗಳು ಈಗಾಗಲೇ ಸಾಕಷ್ಟು ಶ್ರಮಪಟ್ಟಿರುವ ಮಹಿಳೆಯರ ಆರೋಗ್ಯವನ್ನು ಮತ್ತಷ್ಟು ಹದಗೆಡಿಸುತ್ತದೆ. ಏಕೆಂದರೆ ಆಧುನಿಕ ಯಂತ್ರಗಳನ್ನು ಪುರುಷರ ಅದರಲ್ಲೂ ಪಾಶ್ಚಾತ್ಯ ಪುರುಷರ ದೇಹದಾರ್ಢ್ಯಕ್ಕೆ ತಕ್ಕಂತೆ ರೂಪಿಸಲಾಗಿರುತ್ತದೆ. ಉದಾ: ಔಷಧಿ ಮತ್ತು ಇತರ ಕಾರ್ಖಾನೆಗಳಲ್ಲಿ ಉಪಯೋಗಿಸುವ ಯಂತ್ರಗಳು ಮಹಿಳೆಯರ ಆರೋಗ್ಯದ ವಿಷಯಗಳಿಗೆ ಸಂಬಂಧಪಟ್ಟಂತೆ ವೈದ್ಯಕೀಯ ಕ್ಷೇತ್ರವು ಇನ್ನೂ ಸಾಕಷ್ಟು ಎಚ್ಚೆತ್ತುಕೊಳ್ಳಬೇಕಾಗಿದೆ.

■ ಇತ್ತೀಚೆಗೆ ಸ್ತ್ರೀಯರು ಅನುಸರಿಸುತ್ತಿದ್ದ ಪಾರಂಪರಿಕ ವೈದ್ಯಕೀಯ ಮತ್ತು ಆರೋಗ್ಯ ರಕ್ಷಣೆ ಪದ್ಧತಿಗಳು ತಮ್ಮ ಮೌಲ್ಯ ಕಳೆದುಕೊಳ್ಳುತ್ತಿವೆ. ಆದರೆ ಔಷಧಿ ಕಾರ್ಖಾನೆಗಳು ಸ್ತ್ರೀಯರು ತಯಾರಿಸುತ್ತಿದ್ದ ಪಾರಂಪರಿಕ ಮನೆ ಔಷಧಗಳನ್ನು ಯಶಸ್ವಿಯಾಗಿ ಮಾರುಕಟ್ಟೆಗೆ ತರುತ್ತಿವೆ.

ಕಾನೂನು ವ್ಯವಸ್ಥೆ

ಸಂಪ್ರದಾಯ ಮತ್ತು ನಂಬಿಕೆಗಳ ಆಧಾರದ ಮೇಲೆ ರೂಪಿತವಾಗಿರುವ ನಮ್ಮ ಕಾನೂನು ವ್ಯವಸ್ಥೆ ಆರ್ಥಿಕವಾಗಿ ಪ್ರಬಲರಾದವರಿಗೆ ಅದರಲ್ಲೂ ಪುರುಷರಿಗೆ ಅನುಕೂಲಕರವಾಗಿದೆ.

■ ಕುಟುಂಬಕ್ಕೆ ಸಂಬಂಧಪಟ್ಟ ವಿವಾಹ, ವಿಚ್ಛೇದನ, ಮಕ್ಕಳ ಅಭಿರಕ್ಷೆ, ಹಕ್ಕುಬಾಧ್ಯತೆ ಮುಂತಾದ ಕಾನೂನುಗಳು ಬೇರೆ ಬೇರೆ ಧರ್ಮಗಳ ನೀತಿನಿಯಮಗಳಿಗೆ ಅನುರೂಪವಾಗಿದ್ದು ಪುರುಷರಿಗೆ ಪ್ರಾಧಾನ್ಯತೆ ನೀಡಿ ಮಹಿಳೆಯರನ್ನು ಅಶಕ್ತರನ್ನಾಗಿ ಮಾಡಿವೆ. ಕೆಲವು ವೈಯಕ್ತಿಕ

ಕಾನೂನುಗಳು ಇತರ ಕಾನೂನುಗಳಿಗಿಂತ ಪ್ರಗತಿಪರವಾಗಿದ್ದರೂ ಇಲ್ಲಿಯೂ ಅಸಮಾನ ಲಿಂಗಾಧಾರಿತ ಸಮತೋಲನವೇ ಒಂದು ಸಾಮಾನ್ಯ ಅಳತೆಗೋಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ವೈಯಕ್ತಿಕ ಕಾನೂನುಗಳಲ್ಲಿ ಪುರುಷ ಪ್ರಧಾನ ಲಕ್ಷಣಗಳನ್ನು ಬಲಪಡಿಸಲು ಕೆಲವು ಬೇಡಿಕೆಗಳನ್ನು ಮಂಡಿಸಲಾಗಿತ್ತು. ಸಿಖ್ ಜನಾಂಗದ ಕೆಲವು ಜನರು ಪ್ರತ್ಯೇಕ ಸಿಖ್ ವೈಯಕ್ತಿಕ ಕಾನೂನು ಬೇಕೆಂದು ಕೇಳಿದ್ದಾರೆ. ಅದರಲ್ಲಿ ಹೆಣ್ಣು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಹಕ್ಕನ್ನು ನಿರಾಕರಿಸಲಾಗಿದೆ. ವಿಧವೆಯು ತನ್ನ ಗಂಡನಿಂದ ಬಂದ ಆಸ್ತಿ ಅವಳ ಗಂಡನ ಕುಟುಂಬಕ್ಕೆ ಉಳಿಸಬೇಕೆಂಬ ದೃಷ್ಟಿಯಿಂದ ಅವಳು ಗಂಡನ ತಮ್ಮನನ್ನು ಮದುವೆಯಾಗುವ ಪದ್ಧತಿಗೆ ಕಾನೂನಿನ ಆಜ್ಞೆ ನೀಡಬೇಕೆಂದು ಕೋರಿದ್ದಾರೆ.

- ಊಳಿಗಮಾನ್ಯ ಮತ್ತು ವಸಾಹತುಶಾಹಿ ನಮ್ಮ ಇಡೀ ನ್ಯಾಯಶಾಸ್ತ್ರದ ಎರಡು ಆಧಾರ ಸ್ತಂಭಗಳಾಗಿವೆ. ಆದುದರಿಂದ ನಮ್ಮ ನ್ಯಾಯಶಾಸ್ತ್ರವು ಅಸಮಾನತೆ ಮತ್ತು ಲಿಂಗಾಧಾರಿತ ಪಕ್ಷಪಾತ ತತ್ತ್ವಗಳನ್ನಿಟ್ಟುಕೊಂಡು ಕಾರ್ಯನಿರ್ವಹಿಸುತ್ತಿದೆ.
- ನಮ್ಮ ಕಾನೂನಿನ ವ್ಯವಸ್ಥೆ, ರಚನೆ ಮತ್ತು ಪದ್ಧತಿಗಳು ಸ್ತ್ರೀಯರಿಗೆ ನ್ಯಾಯ ಸಿಗುವುದು ಕಷ್ಟವಾಗುವಂತೆ ಮಾಡಿವೆ. ಜಾಮೀನು ಪಡೆಯಲು ಆಸ್ತಿ ಮತ್ತು ಇತರ ಕಾನೂನು ದಾಖಲೆಗಳು ಅಗತ್ಯ. ಇವು ಇಲ್ಲದ ಮಹಿಳೆಯರಿಗೆ ಮೂಲ ಕಾನೂನು ಹಕ್ಕುಗಳನ್ನೇ ನಿರಾಕರಿಸಿದಂತಾಗಿದೆ.

ಆಡಳಿತ ವ್ಯವಸ್ಥೆ

ಪ್ರಜಾಪ್ರಭುತ್ವ ಸರ್ಕಾರವು ಎಲ್ಲಾ ಜನರನ್ನು ಸಮಾನತೆಯಿಂದ ಕಾಣಬೇಕು. ಪ್ರಜೆಗಳನ್ನು ಅದರಲ್ಲೂ ದುರ್ಬಲರನ್ನು ರಕ್ಷಿಸಬೇಕು. ಆದರೆ ಸರ್ಕಾರ ಪುರುಷ ಪ್ರಧಾನತೆಯ ತತ್ವಗಳನ್ನು ಪ್ರತಿನಿಧಿಸುವುದನ್ನು ಅನೇಕ ಸಲ ಶಾಸನಗಳು ಮಹಿಳೆಯರಿಗೆ ವಿರುದ್ಧವಾಗಿ ಕೆಲಸ ಮಾಡುವುದನ್ನು ಮತ್ತು ನ್ಯಾಯಾಂಗವು ಪುರುಷರನ್ನು ರಕ್ಷಿಸಿ ಮಹಿಳೆಯರನ್ನು ವಿರೋಧಿಸುವುದನ್ನು ಕಾಣುತ್ತೇವೆ. ಕಾಯಿದೆ ಕಾನೂನುಗಳನ್ನು ಜಾರಿಗೆ ತರುವಲ್ಲಿ ಅನುಸರಿಸುವ ಕಾರ್ಯವಿಧಾನಗಳು ಪುರುಷರ ಪರವಾಗಿದ್ದು ಅವರ ಹಿತಾಸಕ್ತಿಗೆ ಲಾಭದಾಯಕವಾಗಿರುವುದು ಕಂಡುಬರುತ್ತದೆ.

ಸರ್ಕಾರವು ಲಿಂಗಾಧಾರಿತ ತತ್ತ್ವದ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುತ್ತದೆ. ಮಹಿಳೆಯರನ್ನು ಮೊದಲು ಮನೆ ನೋಡಿಕೊಳ್ಳುವವರನ್ನಾಗಿ ನಂತರ ಕಾರ್ಮಿಕರನ್ನಾಗಿ ಗುರುತಿಸುತ್ತದೆ. ಸರ್ಕಾರದ ನೀತಿಗಳು, ಶಿಕ್ಷಣ ಆರೋಗ್ಯ ಮತ್ತು ಮಕ್ಕಳ ಪಾಲನೆಗೆ ಸಂಬಂಧಪಟ್ಟ ಕಾರ್ಯಕ್ರಮಗಳಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದು.

- ರಕ್ಷಣೆ ನೀಡಬೇಕಾದ ಸೈನ್ಯ ಅಥವಾ ಪೊಲೀಸ್ ಇಲಾಖೆಗಳು ಮಹಿಳೆಯರನ್ನು ಯಾರಿಗೂ ತಿಳಿಯದಂತೆ ಅಥವಾ ಎಲ್ಲರಿಗೂ ತಿಳಿಯುವಂತೆಯೇ ಹಿಂಸೆಗೆ ಗುರಿಪಡಿಸುತ್ತಿವೆ.
- ಮಹಿಳೆಯರ ದೇಹದ ಮೇಲೆ ಆಕ್ರಮಣ ಮಾಡುವಂತಹ ಕುಟುಂಬ ಯೋಜನೆಯ

ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸರ್ಕಾರ ಅವರ ಸಂತಾನ ಶಕ್ತಿಯನ್ನು ನಿಯಂತ್ರಿಸುತ್ತಾ ಮಹಿಳೆಯರು ತನ್ನ ಪ್ರಯೋಗಗಳಿಗಾಗಿಯೇ ಇರುವ ಕುರಿಗಳು ಎಂಬಂತೆ ನೋಡುತ್ತದೆ.

ರಾಜಕೀಯ ವ್ಯವಸ್ಥೆ

ಸಂಪೂರ್ಣವಾಗಿ ಪುರುಷರ ಅಧೀನದಲ್ಲಿರುವ ಮತ್ತು ಪುರುಷ ಪ್ರಧಾನ ನಂಬಿಕೆಗಳನ್ನು ತತ್ತ್ವಗಳನ್ನು ಪ್ರತಿಪಾದಿಸುವ ಮತ್ತೊಂದು ಕ್ಷೇತ್ರವೆಂದರೆ ರಾಜಕೀಯ. ರಾಜಕೀಯ ಪ್ರಕ್ರಿಯೆಗಳು ಹೆಚ್ಚು ಪ್ರಬಲರಾದ ಮತ್ತು ಪ್ರಭಾವವುಳ್ಳ ಪುರುಷರ ಕೈಯಲ್ಲಿರುತ್ತವೆ. ರಾಜಕೀಯ ಪ್ರವೇಶಿಸಿದ ಅನೇಕ ಮಹಿಳೆಯರಿಗೆ ಇಂತಹ ಪುರುಷರೊಂದಿಗೆ ವರ್ಗ ಅಥವಾ ಜಾತಿ ಸಂಬಂಧಗಳು ಇರುತ್ತವೆ. ಅವರ ಬೆಂಬಲದಿಂದ ರಾಜಕೀಯ ಪ್ರವೇಶಿಸಿದ್ದರೆ ಸಹಜವಾಗಿ ಅವರ ಎಲ್ಲಾ ಪುರುಷಪ್ರಧಾನ ತತ್ತ್ವಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದರಿಂದಾಗಿ ಪುರುಷರ ಕಾರ್ಯಸಾಧನೆಯ ಯುಕ್ತಿಗೆ ಮಹಿಳೆಯರು ಸುಲಭದಲ್ಲಿ ಗುರಿಯಾಗುತ್ತಾರೆ. ಅಂದರೆ ತಮ್ಮ ಕಾರ್ಯಸಾಧನೆಗೆ ಮಹಿಳೆಯರನ್ನು ಸುಲಭವಾಗಿ ಬಳಸಿಕೊಳ್ಳುತ್ತಾರೆ. ತಮ್ಮ ಸ್ವಸಾಮರ್ಥ್ಯ ಪ್ರತಿಭೆಯಿಂದ ಮೇಲೆ ಬಂದ ಮಹಿಳೆಯರು ತೀವ್ರ ಹೋರಾಟ ನಡೆಸಬೇಕಾಗುತ್ತದೆ. ಮಹಿಳೆಯರ ರಾಜಕೀಯ ಚಿಂತನೆಗಳನ್ನು ನಿರ್ಲಕ್ಷಿಸಿ ಅವರ ಸ್ತ್ರೀತ್ವವನ್ನು ರಾಜಕೀಯ ವಿಷಯಗಳಿಗೆ ಸಂಬಂಧಿಸಿದಂತೆ ತಟಸ್ಥವಾಗಿರಿಸಲು ಬಳಸಿಕೊಳ್ಳಲಾಗುತ್ತದೆ. ಮಹಿಳಾ ಮುಂದಾಳುಗಳಿಗೆ ಪುರುಷರಿಂದ ಯಾವುದೇ ಬೆಂಬಲ ಸಿಗುವುದಿಲ್ಲ.

ಪ್ರಾಚೀನ ಕರ್ನಾಟಕದ ಕೆಲವು ವಿಶಿಷ್ಟ ತೆರಿಗೆಗಳು

—ಡಾ. ಎಂ. ಪಿ. ಮಹದೇವಯ್ಯ

ಪ್ರಾಚೀನ ಕರ್ನಾಟಕದಲ್ಲಿ ವೃತ್ತಿಗಳ ಮೇಲೆ ತೆರಿಗೆಯನ್ನು ಹಾಕುವ ಪದ್ಧತಿ ಬಹಳ ವಿಶಿಷ್ಟವಾಗಿದ್ದಿತು. ಬಹುಶಃ ಪೌರೋಹಿತ್ಯ ಮುಂತಾದ ಬ್ರಾಹ್ಮಣರ ವೃತ್ತಿಗಳನ್ನು ಬಿಟ್ಟು ಇತರ ಎಲ್ಲ ವೃತ್ತಿಗಳಿಗೂ ತೆರಿಗೆ ಒಳಪಟ್ಟಿದ್ದಿತು ಎಂದು ಹೇಳಬಹುದು. ಇದರಿಂದಾಗಿ ರಾಜ್ಯಕ್ಕೆ ಉತ್ತಮ ಆದಾಯವು ದೊರಕುತ್ತಿದ್ದಿತು ಎಂದು ಭಾವಿಸಬಹುದು. ಇದಕ್ಕೆ ನಿರ್ದಿಷ್ಟವಾದ ದರವಿರಲಿಲ್ಲ. ವೃತ್ತಿಯಿಂದ ವೃತ್ತಿಗೆ ಇದರ ದರ ಬದಲಾವಣೆ ಹೊಂದುತ್ತಿದ್ದಿತು. ಜೊತೆಗೆ ಇದನ್ನು ನಗದು ರೂಪದಲ್ಲಿ ವಸೂಲು ಮಾಡಲಾಗುತ್ತಿದ್ದಿತು.

ವಾಣಿಜ್ಯ ತೆರಿಗೆಗಳು ರಾಜ್ಯದ ಆದಾಯಕ್ಕೆ ಸಾಕಷ್ಟು ಹಣವನ್ನು ತರುತ್ತಿದ್ದವು. ಇವು ದವಸ ಹಾಗೂ ನಗದು- ಎರಡೂ ರೂಪಗಳಲ್ಲಿ ಸಂಗ್ರಹವಾಗುತ್ತಿದ್ದವು. ವಾಣಿಜ್ಯವನ್ನೇ ತಮ್ಮ ಮುಖ್ಯ ಗುರಿಯಾಗಿಟ್ಟುಕೊಂಡಿದ್ದ ನಾಲ್ಕಾರು ಶ್ರೇಣಿಗಳು ಈ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಆದುದರಿಂದ ಕೆಲವು ಸಾರಿ ಈ ತೆರಿಗೆಗಳನ್ನು ರಾಜನು ವಿಧಿಸಿದರೆ, ಅನೇಕ ಸಾರಿ ಈ ಶ್ರೇಣಿಗಳು ಈ ಕಾರ್ಯವನ್ನು ಮಾಡುತ್ತಿದ್ದವು. ಆದುದರಿಂದ ವಾಣಿಜ್ಯ ತೆರಿಗೆಗಳನ್ನು ಕೇಂದ್ರ ತೆರಿಗೆ ಹಾಗೂ ಸ್ಥಳೀಯ ತೆರಿಗೆ ಎಂದು ವಿಭಾಗಿಸಬಹುದು. ಈ ತೆರಿಗೆಗಳ ಸಂಖ್ಯೆಯೂ ಸಾಕಷ್ಟಿವೆ ಎನ್ನುವುದನ್ನು ಗಮನಿಸಬೇಕು. ಅದೇ ರೀತಿ ಇವುಗಳ ವೈವಿಧ್ಯತೆಯೂ ಕುತೂಹಲಕರವಾದುದು.

ವಾಣಿಜ್ಯ ತೆರಿಗೆಗಳನ್ನು ಸಾಮಾನ್ಯವಾಗಿ ಸುಂಕ ಎಂದು ಕರೆಯುತ್ತಿದ್ದರು. ಇದು ಸಂಸ್ಕೃತದ ಶುಲ್ಕ ಎನ್ನುವ ಪದದಿಂದ ಬಂದಿದೆ. ಶುಲ್ಕ ಎನ್ನುವ ಪದ ಅಂಜನೇರಿ ಶಾಸನದಲ್ಲಿ ತೆರಿಗೆ ಎನ್ನುವ ಅರ್ಥದಲ್ಲಿ ಕಾಣಬರುತ್ತದೆ. ಸಾಮಾನ್ಯವಾಗಿ ಇದು ರಾಜ್ಯದಿಂದ ಹೊರಗಡೆ ಹೋಗುವ ಇಲ್ಲವೇ ರಾಜ್ಯದೊಳಗೆ ಬರುವ ಸಾಮಗ್ರಿಗಳ ಮೇಲೆ ಕೊಳ್ಳುವವರು ಹಾಗೂ ಮಾರುವವರು ಕೊಡಬೇಕಾದ ತೆರಿಗೆ. ಇದು ಭೂಮಾರ್ಗ ಹಾಗೂ ಸಮುದ್ರ ಮಾರ್ಗದ ಮೇಲೆ ತರಲಾದ ವಸ್ತುಗಳಿಗೂ ಅನ್ವಯಿಸುತ್ತದೆ. ಪ್ರಾಚೀನ ಸ್ಮೃತಿಕಾರರ ಪ್ರಕಾರ ಮಾರುವ ಸಾಮಗ್ರಿಗಳ ಬೆಲೆಯ ಇಪ್ಪತ್ತನೆಯ ಒಂದು ಭಾಗ. ವಿಷ್ಣು ಧರ್ಮೋತ್ತರದ ಪ್ರಕಾರ ಆಂತರಿಕವಾಗಿ ತಯಾರಾದ ವಸ್ತುಗಳಿಗೆ ಹತ್ತನೆಯ ಒಂದು ಭಾಗ. ಆದರೆ ಹೊರಗಡೆಯಿಂದ ಬಂದ ವಸ್ತುಗಳಿಗೆ ಇಪ್ಪತ್ತನೇ

ಒಂದು ಭಾಗ. ಕೌಟಿಲ್ಯನು ಶುಲ್ಕಾಧ್ಯಕ್ಷ ಎನ್ನುವ ಅಧಿಕಾರಿಯನ್ನು ಉಲ್ಲೇಖಿಸುತ್ತಾನೆ. ಯಾಜ್ಞವಲ್ಕ್ಯನ ಪ್ರಕಾರ ಶುಲ್ಕದ ದರ ಪದಾರ್ಥಗಳ ಬೆಲೆಯ ಇಪ್ಪತ್ತನೆಯ ಒಂದು ಭಾಗ.

ಈ ಸುಂಕವನ್ನು ಲೂಯಿರೈಸ್ ಮೂರು ರೀತಿಯಾಗಿ ವಿಂಗಡಿಸಿದ್ದಾರೆ. ಮೊದಲನೆಯದು ಸ್ಥಳಾದಾಯ: ಅಂದರೆ ಹೊರಗಡೆಯಿಂದ ತರಿಸಿ ರಾಜ್ಯದ ಒಳಗಡೆ ಮಾರುವ ಪದಾರ್ಥಗಳು. ಎರಡನೆಯದು ಮಾರ್ಗಾದಾಯ: ಅಂದರೆ ಪದಾರ್ಥಗಳು ಒಂದು ಕಡೆಯಿಂದ ಇನ್ನೊಂದು ಕಡೆ ಹೋಗುವಾಗ ತೆರುವ ಸುಂಕ, ಮೂರನೆಯದು ಮಾಮೂಲಾದಾಯ: ಅಂದರೆ ಹೊರ ದೇಶದಿಂದ ಆಮದು ಮಾಡಿಕೊಳ್ಳುವ ಹಾಗೂ ಹೊರದೇಶಕ್ಕೆ ರಫ್ತು ಮಾಡುವ ಪದಾರ್ಥಗಳ ಮೇಲಿನ ಸುಂಕ.

ಮಾರ್ಗಾದಾಯಕ್ಕೆ ಕೆಲವು ಉದಾಹರಣೆಗಳು:

ಸಾರಿಗೆ ಸುಂಕ: (ಗಾಡಿ ಮೊದಲಾದವುಗಳ ಮೇಲಿನ ಸುಂಕ)

ಚರ ಸುಂಕ: (ಸಾಗಿಸುವಾಗ ತೆರುವ ಸುಂಕ)

ಮಾರ್ಗಣಕ: (ಮಾರ್ಗದಲ್ಲಿ ಕೊಡುವ ಸುಂಕ)

ಬಟ್ಟೆಯ ಸುಂಕ: (ರಸ್ತೆಯ ಸುಂಕ)

ಮೇಲ್ವಟ್ಟೆಯ ಸುಂಕ: (ರಾಜಮಾರ್ಗದ ಸುಂಕ)

ಕೀಸ್ವಟ್ಟೆಯ ಸುಂಕ: (ಗ್ರಾಮ ಮಾರ್ಗದ ಸುಂಕ)

ಈ ಮೇಲಿನ ಸುಂಕಗಳ ಹೆಸರೇ ತಿಳಿಸಿರುವಂತೆ ಅವು ಮಾರ್ಗದ ಮಧ್ಯದಲ್ಲಿ ವಸೂಲು ಮಾಡುವ ಸುಂಕಗಳು ಎಂದು ಗೊತ್ತಾಗುತ್ತದೆ.

ಬಾದಾಮಿ ಚಾಲುಕ್ಯರ ಹಾಗೂ ರಾಷ್ಟ್ರಕೂಟರ ಶಾಸನಗಳಲ್ಲಿ ಭೂತೋತ್ಪಾತ್ತ ಪ್ರತ್ಯಾಯ ಎಂಬ ತೆರಿಗೆಯ ಪ್ರಸ್ತಾಪ ಕಾಣಬರುತ್ತದೆ. ಇದರ ವಿಷಯದಲ್ಲಿ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಆದರೆ ಅಳತೇಕರ್ ಅವರು ಅದು ಮಾರ್ಗಮಧ್ಯದ ಸುಂಕ ಎಂದು ತೀರ್ಮಾನಿಸಿದ್ದಾರೆ.

ವಡ್ಡರಾವುಳ ಎಂಬ ತೆರಿಗೆ ಪದೇ ಪದೇ ಕಾಣಿಸಿಕೊಳ್ಳುತ್ತದೆ. ಇಮ್ಮಡಿ ವಿಕ್ರಮಾದಿತ್ಯನ ಐಹೊಳೆ ಶಾಸನದಲ್ಲಿ ಇದನ್ನು ಮೊದಲು ಕಾಣುತ್ತೇವೆ. ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿ ವಡ್ಡರಾವುಳ ಅಡಿಕೆಯ ಜೊತೆ ಕಾಣಿಸಿಕೊಳ್ಳುತ್ತದೆ. ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ವಡ್ಡರಾವುಳವನ್ನು ನೋಡಿಕೊಳ್ಳುತ್ತಿದ್ದ ಮಹದೇಶ ದಂಡನಾಯಕನು ಒಂದು ಲಕ್ಷ ಅಡಿಕೆಯ ಮೇಲಿನ ತೆರಿಗೆಯನ್ನು ಕೊಟ್ಟನೆಂದು ಶಾಸನ ತಿಳಿಸುತ್ತದೆ. ಇದೇ ಕಾಲದ ಮತ್ತೊಂದು ಶಾಸನದಲ್ಲಿ ಮಾದಿರಾಜನು ವಡ್ಡರಾವುಳವನ್ನು ನೋಡಿಕೊಳ್ಳುತ್ತಿದ್ದಾಗ ಮೂರು ಲಕ್ಷ ಅಡಿಕೆಯ ಮೇಲಿನ ತೆರಿಗೆಯನ್ನು ದಾನಕೊಟ್ಟನೆಂದು ಹೇಳಿದೆ. ಈ ಮೇಲಿನ ಎರಡು ಉಲ್ಲೇಖಗಳನ್ನು ನೋಡಿದರೆ ಇದು ಅಡಿಕೆಯ ವ್ಯಾಪಾರಕ್ಕೆ ಸಂಬಂಧಪಟ್ಟ ತೆರಿಗೆ ಇರಬೇಕೆಂದು ತೋರಿಸುತ್ತದೆ. ಇತರ

ವಿದ್ವಾಂಸರು ಇದರ ಬಗ್ಗೆ ಖಚಿತವಾದ ಅಭಿಪ್ರಾಯವನ್ನು ಹೇಳಿಲ್ಲ. ಕೆ. ವಿ. ರಮೇಶ್ ಅವರು ಇದನ್ನು ವಿಮರ್ಶಿಸಿ ವಡ್ಡರಾವುಳ ಎನ್ನುವುದು ವೃದ್ಧರಾಜಕುಲ ಎನ್ನುವುದರ ಕನ್ನಡ ರೂಪವೆಂದು ಹೇಳಿ, ಇದು ರಾಜಕುಲದವರಿಗೆ ಕೊಡಬೇಕಾಗಿದ್ದ ತೆರಿಗೆಯೇ ಹೊರತು, ವಾಣಿಜ್ಯ ತೆರಿಗೆಯಲ್ಲ ಎಂದಿದ್ದಾರೆ.[3] ಆದರೆ ಇದರ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕು.

ಪನ್ನಾಯ ಎಂಬ ತೆರಿಗೆಯ ಬಗ್ಗೆ ಭಿನ್ನಾಭಿಪ್ರಾಯವಿದೆ. ಕ್ರಿ. ಶ. ೧೧೦೨ ರ ಅರಸಿ ಬೀದಿ ಶಾಸನದಲ್ಲಿ ಅಚ್ಚು ಪನ್ನಾಯವನ್ನು ನೋಡಿಕೊಳ್ಳುತ್ತಿದ್ದ ಮಾಧವಭಟ್ಟನು, ಅಲ್ಲಿನ ಸತ್ರಕ್ಕೆ ವೀಳೆದೆಲೆ ಮತ್ತು ಅಡಿಕೆಗಳ ಮೇಲಿನ ತೆರಿಗೆಯನ್ನು ದಾನಕೊಟ್ಟನೆಂದು ಹೇಳಿದೆ. ಇನ್ನೊಂದು ಶಾಸನದಲ್ಲಿ ಕೂಡ ಪನ್ನಾಯದ ಸಂಬಂಧದಲ್ಲಿ ವೀಳೆದೆಲೆಯ ಪ್ರಸ್ತಾಪವಿದೆ. ಇದರಿಂದ ಪನ್ನಾಯ ವೀಳೆದೆಲೆ ಅಡಿಕೆ ಮೇಲಿನ ಸುಂಕ ಎಂದು ಹೇಳಬೇಕಾಗುತ್ತದೆ. ಅಂದರೆ ಪನ್ನಾಯ ಎನ್ನುವುದು ಪರ್ಣಾಯ ಎಂಬ ಸಂಸ್ಕೃತದ ರೂಪವಿರಬೇಕು. ಪನ್ನಾಯವನ್ನು ಸಾಮಾನ್ಯವಾಗಿ ಉತ್ಪನ್ನದ ರೂಪದಲ್ಲಿ ಕೊಡುತ್ತಿದ್ದರು. ಎಲೆಗಳು ಬಲುಬೇಗ ಹಾಳಾಗುವ ವಸ್ತುವಾದುದರಿಂದ ಅದನ್ನು ನಗದು ರೂಪದಲ್ಲಿಯೂ ಕೊಡಬೇಕಾದ ಸಂದರ್ಭಗಳಿದ್ದವು. ನಗದು ರೂಪದಲ್ಲಿ ಪನ್ನಾಯವನ್ನು ಕೊಟ್ಟರೆ ಅದನ್ನು ಅಚ್ಚು ಪನ್ನಾಯವೆನ್ನುತ್ತಿದ್ದರು. ಏಕೆಂದರೆ ಅಚ್ಚು ಎನ್ನುವುದು ಒಂದು ನಾಣ್ಯ.

ವ್ಯಾಪಾರವನ್ನು ಮಾಡುವಾಗ ನದಿಗಳನ್ನು, ಹೊಳೆಗಳನ್ನು ದಾಟಿ ಪದಾರ್ಥಗಳನ್ನು ಕೊಂಡೊಯ್ಯಬೇಕಾದ ಪ್ರಸಂಗಗಳು ಸಾಕಷ್ಟು ಇರುತ್ತದೆ. ಸೇತುವೆಗಳು ಕಡಿಮೆ ಇದ್ದ ಪ್ರಾಚೀನ ಕಾಲದಲ್ಲಿ ನದಿ ಮತ್ತು ಹೊಳೆಗಳನ್ನು ದಾಟುವುದಕ್ಕೆ ತೆಪ್ಪ, ದೋಣಿಗಳನ್ನು ವಿಶೇಷವಾಗಿ ಬಳಸುತ್ತಿದ್ದರು. ಆದುದರಿಂದ ವ್ಯಾಪಾರದ ವಸ್ತುಗಳನ್ನು ಈ ಮಾರ್ಗದ ಮೂಲಕ ತೆಗೆದುಕೊಂಡು ಹೋಗಬೇಕಾದ ಸಂದರ್ಭಗಳಲ್ಲಿ ತೆರಿಗೆಯನ್ನು ತೆರಬೇಕಾಗಿದ್ದಿತು. ಇದನ್ನೇ ಶಾಸನಗಳಲ್ಲಿ ದೋಣಿಯ ಸುಂಕ, ತೆಪ್ಪ ಸುಂಕ ಎಂದು ಹೇಳಲಾಗಿದೆ. ಪ್ರಾಚೀನ ಕಾಲದಲ್ಲಿ ದೋಣಿಯ ಸಾಗಣೆ ರಾಜ್ಯದ ಸ್ವತ್ತಾಗಿತ್ತು. ಸಾಮಾನ್ಯವಾಗಿ ಇದಕ್ಕಾಗಿ ಒಬ್ಬ ನೌಕರನೇ ಇರುತ್ತಿದ್ದನು. ಇಲ್ಲವೇ ಈ ಹಕ್ಕನ್ನು ಗುತ್ತಿಗೆಗೆ ಕೊಡಲಾಗುತ್ತಿತ್ತು. ಅದು ಯಾವ ರೀತಿ ಮಾಡಿದ್ದರೂ, ಸರಕುಗಳನ್ನು ಸಾಗಿಸುವಾಗ ಅದಕ್ಕೆ ತೆರಿಗೆ ಕೊಡಬೇಕಾಗಿದ್ದಿತು. ಅದೇ ತೆಪ್ಪ ಸುಂಕ ಮತ್ತು ದೋಣಿಯ ಸುಂಕ. ರಾಷ್ಟ್ರಕೂಟರ ಕಾಲದಲ್ಲಿ ಈ ಸುಂಕ ವಿಶೇಷವಾಗಿ ಪ್ರಚಲಿತವಾಗಿತ್ತು. ಇವಿಷ್ಟೂ ಮುಖ್ಯವಾದ ಮಾರ್ಗಾದಾಯ ಸುಂಕಗಳು.

ಇನ್ನು ಸ್ಥಳಾದಾಯ ಸುಂಕಗಳನ್ನು ಗಮನಿಸಬಹುದು. ಇದನ್ನು ಇಂದಿನ 'ಆಕ್ಟ್ರಾಯ್'ಗೆ ಹೋಲಿಸಬಹುದು. ಇದನ್ನು ಮುಖ್ಯವಾಗಿ ಎರಡು ಭಾಗ ಮಾಡಬಹುದು. ಮೊದಲನೆಯದು ಹೆಜ್ಜುಂಕ ಅಥವಾ ಪೆರ್ಜುಂಕ: ಎರಡನೆಯದು ಕಿರುಕುಳ ಸುಂಕ. ಮೊದಲನೆಯದು ಸಗಟು ವ್ಯಾಪಾರದ ಮೇಲಿನ ಸುಂಕವಾದರೆ ಎರಡನೆಯದು ಚಿಲ್ಲರೆ ವ್ಯಾಪಾರದ ಮೇಲೆ ಹಾಕುವ ತೆರಿಗೆ. ಬೀಳ್ಕೊಡೆ ಎನ್ನುವುದು ಚಿಲ್ಲರೆ ವ್ಯಾಪಾರಿಗಳು ಕೊಡಬೇಕಾಗಿದ್ದ ಸುಂಕ. ಅಂದರೆ ಇದು ಮಾರುವವರೂ ಮತ್ತು ತೆಗೆದುಕೊಳ್ಳುವವರೂ ಕೊಡಬೇಕಾಗಿದ್ದ ತೆರಿಗೆ ಎಂದು ಕೆಲವರು

ಅರ್ಥೈಸುತ್ತಾರೆ. ಶಾಸನಗಳನ್ನು ಗಮನಿಸಿದರೆ ವೀಳೆದೆಲೆ ಮತ್ತು ಅಡಿಕೆಯ ಮೇಲೆ ಹಾಕುವ ಸುಂಕಗಳು ಪದೇ ಪದೇ ಕಾಣಿಸಿಕೊಳ್ಳುತ್ತದೆ. ಬಹುಶಃ ಇದು ಜನಾನುರಾಗಿಯಾಗಿದ್ದು ತಾಂಬೂಲ ವಿಶೇಷವಾಗಿ ಪ್ರಚಲಿತವಾಗಿದ್ದಿತು. ಇದನ್ನು ಅಡಿಕೆ ಪಣವೆಂದೂ ಕರೆಯಲಾಗಿದೆ. ಒಂದು ಶಾಸನದಲ್ಲಿ ಒಂದು ಗಾಡಿ ಅಡಿಕೆಗೆ ಐವತ್ತು ಅಡಿಕೆಗಳನ್ನು ತೆರಿಗೆಯಾಗಿ ಕೊಡಬೇಕಾಗಿದ್ದಿತು. ಒಂದು ತಲೆಹೊರೆ ಅಡಿಕೆಗೆ ಇಪ್ಪತ್ತೈದು ಅಡಿಕೆಗಳನ್ನು ತೆರಿಗೆಯಾಗಿ ಕೊಡಬೇಕಾಗಿದ್ದಿತು. ಇನ್ನೊಂದು ಶಾಸನದ ಪ್ರಕಾರ ಒಂದು ಬಂಡಿ ಅಡಿಕೆಗೆ ಇನ್ನೂರು ಅಡಿಕೆಗಳೂ ಒಂದು ಚೀಲ ಅಡಿಕೆಗೆ ಐವತ್ತು ಅಡಿಕೆಗಳನ್ನು ಕೊಡಬೇಕಾಗಿದ್ದಿತು. ಇದೇ ರೀತಿ ವೀಳೆದೆಲೆಯ ಮೇಲಿನ ತೆರಿಗೆಯನ್ನು ಗಮನಿಸಬಹುದು. ಪ್ರಾಣಿಯ ಮೇಲೆ ತೆಗೆದುಕೊಂಡು ಹೋಗುವ ಹೊರೆಗೆ ಒಂದು ವೀಸ(ಹಣ), ತಲೆಯ ಮೇಲಿನ ಹೊರಗೆ ಅರ್ಧವೀಸ, ಬೊಂಬಿನ ಹೊರೆಗೆ ನೂರು ವೀಳ್ಯೆದೆಲೆ; ತಲೆಯ ಮೇಲಿನ ಹೊರೆಗೆ 'ಐವತ್ತು' ವೀಳೆದೆಲೆ ಎಂದು ಹೇಳಲಾಗಿದೆ. ಇದರಿಂದ ವೀಳೆದೆಲೆಯಂತಹ ವಸ್ತುವಿಗೆ ನಗದು ಹಾಗೂ ಪದಾರ್ಥದ ಭಾಗದಲ್ಲಿ ತೆರಿಗೆ ಸಂದಾಯವಾಗುತ್ತಿತ್ತು ಎಂದು ಗೊತ್ತಾಗುತ್ತದೆ. ಇನ್ನೊಂದು ಶಾಸನದ ಪ್ರಕಾರ ಎತ್ತು, ಕತ್ತೆ, ಕೋಣಗಳ ಬೆನ್ನಿನ ಮೇಲೆ ಏನು ಪದಾರ್ಥಗಳನ್ನು ತಂದರೂ ಅವುಗಳಿಗೆ ಸುಂಕ ಕೊಡಬೇಕೆಂದು ತಿಳಿಸುತ್ತದೆ (ಎತ್ತು, ಕತ್ತೆ, ಕೋಣನೆಂಬಿವರಳಾದ ಭಂಡಮಹೇರಿದಡೆ ತೆರುವುದು ಸುಂಕಮಂ).

ಈಗಿನ ಕಾಲದ ಮಾರಾಟ ತೆರಿಗೆಯಂತಹ ಒಂದು ತೆರಿಗೆಯಿದ್ದುದಕ್ಕೆ ಒಂದು ಶಾಸನ ಮಾಹಿತಿ ಒದಗಿಸುತ್ತದೆ. ಈ ತೆರಿಗೆಯನ್ನು ಕೊಂಡಲ್ಲಿ ಮತ್ತು ಕೊಟ್ಟಲ್ಲಿ ವಸೂಲು ಮಾಡಲಾಗುತ್ತಿದ್ದಿತು.[೩] ಅಂದರೆ ಇದೂ ಕೂಡ ಬೀಳ್ಕೊಡೆಯಂತಹ ತೆರಿಗೆ: ಕೊಂಡವರು ಕೊಡಬೇಕಾಗಿತ್ತು. ಹಾಗೆಯೇ ತೆಗೆದುಕೊಂಡವರೂ ಕೊಡಬೇಕಾಗಿತ್ತು.

ಸಾಮಾನ್ಯವಾಗಿ ಶಾಸನಗಳಲ್ಲಿ ಕಂಡುಬರುವ ವಾಣಿಜ್ಯ ಸುಂಕಕ್ಕೆ ಒಳಪಟ್ಟಿರುವ ವಸ್ತುಗಳೆಂದರೆ ಎಣ್ಣೆ, ತುಪ್ಪ, ಬೆಲ್ಲ, ಸಕ್ಕರೆ, ಭತ್ತ, ಉಪ್ಪು, ಕರಿಮೆಣಸು, ಉದ್ದು, ಅವರೆ, ತೊಗರಿ, ಅಕ್ಕಿ, ಗಂಧ, ಹತ್ತಿಬಟ್ಟೆ, ರೇಷ್ಮೆಬಟ್ಟೆ, ಜೋಳ, ರಾಗಿ, ನವಣೆ, ಬರಗು, ಸಾವಿ, ಎಲೆಗಳು, ಗೋಧಿ, ಅರಿಸಿನ, ಎಳ್ಳು, ಸಾಸಿವೆ, ಜವಳಿ, ಕಂಬಳಿ, ರತ್ನಗಂಬಳಿ, ಪುನಗು, ಸೀರೆ, ಪಂಚೆ, ಆಭರಣಗಳು, ಮರ, ಆನೆ, ಕುದುರೆ, ಒಂಟೆ, ಕುರಿ, ಮೇಕೆ, ಎತ್ತು, ಗಾಡಿ ಇತ್ಯಾದಿ. ಈ ಪಟ್ಟಿಯನ್ನು ನೋಡಿದರೆ ಯಾವ ವಸ್ತುವೂ ತೆರಿಗೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲವೆಂದು ಖಚಿತವಾಗುತ್ತದೆ. ಇದನ್ನು ಮುಗಿಸುವುದಕ್ಕೆ ಮುಂಚೆ ತುಪ್ಪದ ವಿಷಯದಲ್ಲಿ ತೆರಿಗೆ ವಿನಾಯಿತಿಯನ್ನು ಕೊಡುತ್ತಿದ್ದುದನ್ನು ಗಮನಿಸಬೇಕು. ಅದು ವಿಶೇಷವಾಗಿ ಯಜ್ಞಯಾಗಾದಿಗಳಲ್ಲಿ ಹಾಗೂ ದೇವಾಲಯಗಳಲ್ಲಿ ವಿಶೇಷವಾಗಿ ಬೇಕಾದ ವಸ್ತುವಾದುದರಿಂದ, ಅದಕ್ಕೆ ವಿಶೇಷ ರಿಯಾಯಿತಿ ಇದ್ದಿತೆಂದು ಭಾವಿಸಬಹುದು. ರಾಷ್ಟ್ರಕೂಟ ಅಮೋಘವರ್ಷನ ಕ್ರಿ. ಶ. ೮೬೭ ಸೊರಟೂರು ಶಾಸನದಲ್ಲಿ ತುಪ್ಪದ ಮೇಲಿನ ತೆರಿಗೆಯನ್ನು ಮನ್ನಾ ಮಾಡಲಾಗಿದೆಯೆಂದು ಹೇಳಿದೆ. ಇದೇ ರಾಜನ ಸಿಸುವಿನಹಳ್ಳಿ ಶಾಸನದಲ್ಲಿ ಬೆಳ್ವೊಲದ ರಾಜ್ಯಪಾಲನಾದ ದೇವಯ್ಯನು ತುಪ್ಪದ ಮೇಲಿನ ಸುಂಕವನ್ನು ಮನ್ನಾ ಮಾಡಿದೆಯೆಂದು

ಮಹಾಜನಗಳಿಗೆ ತಿಳಿಸುತ್ತಾನೆ. ಗಂಗ ಇಮ್ಮಡಿ ರಾಚಮಲ್ಲನ ಶಾಸನದಲ್ಲಿ ತುಪ್ಪದ ಮೇಲಿನ ತೆರಿಗೆಯನ್ನು ಮನ್ನಾ ಮಾಡಿದೆಯೆಂದು ಉಕ್ತವಾಗಿದೆ.

ಇನ್ನು ಮಾಮೂಲಾದಾಯವನ್ನು ಗಮನಿಸಬಹುದು. ಇದನ್ನು ಆಮದು-ರಫ್ತುಗಳ ಮೇಲಿನ ಸುಂಕವೆಂದು ಭಾವಿಸಲಾಗಿದೆ. ಕೆಲವು ಶಾಸನಗಳಲ್ಲಿ ಒಳಸುಂಕ ಮತ್ತು ಹೊರಸುಂಕ ಎನ್ನುವ ತೆರಿಗೆಗಳು ಉಲ್ಲೇಖಿತವಾಗಿವೆ. ಅವೇ ಮಾಮೂಲಾದಾಯದಲ್ಲಿ ಮುಖ್ಯವಾದವು. ಒಳಸುಂಕವೆಂದರೆ ರಾಜ್ಯದ ಒಳಕ್ಕೆ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ತೆರಬೇಕಾದ ಸುಂಕ, ಹೊರಸುಂಕವೆಂದರೆ ರಾಜ್ಯದಿಂದ ಹೊರಕ್ಕೆ ಕಳುಹಿಸುತ್ತಿದ್ದ (ರಫ್ತು) ವಸ್ತುಗಳ ಮೇಲಿನ ಸುಂಕ. ಇದನ್ನೇ ಕೆಲವು ಶಾಸನಗಳು ಒಳವಾರು ಮತ್ತು ಹೊರವಾರು ಎಂದು ಕರೆಯುತ್ತವೆ. ಇಲ್ಲಿ ಒಳ ಮತ್ತು ಹೊರ ಎನ್ನುವ ಪದಗಳನ್ನು ವಿದೇಶೀಯ ಎಂದು ಅರ್ಥ ಮಾಡಲಾಗದು, ಅದೂ ಇರಬಹುದು. ಏಕೆಂದರೆ ನಮ್ಮ ಕುದುರೆಗಳನ್ನು ಹೊರದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದರು. ಅದಕ್ಕಿಂತ ಹೆಚ್ಚಾಗಿ ರಾಜ್ಯದ ಹೊರಗಡೆಯಿಂದ ಎಂದು ಭಾವಿಸಿದರೆ, ಕರ್ನಾಟಕವನ್ನು ಬಿಟ್ಟು ಸಮಕಾಲೀನ ರಾಜ್ಯಗಳಾದ ಪಲ್ಲವ, ಚೋಳ, ಪಾಂಡ್ಯ, ವೆಂಗಿ, ಕಾಕತೀಯ ಮುಂತಾದ ರಾಜ್ಯಗಳಿಗೂ ಎಂದು ಅರ್ಥ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಆಂತರಿಕ ವ್ಯಾಪಾರಗಳು ವಿಶೇಷವಾಗಿ ನಡೆಯುತ್ತಿದ್ದವು ಎನ್ನುವುದನ್ನು ಶಾಸನಗಳು ದೃಢೀಕರಿಸುತ್ತವೆ. ಕರ್ನಾಟಕದ ವ್ಯಾಪಾರಿಗಳು, ಗುರ್ಜರ, ಲಾಟ, ಕೇರಳ, ಮಲೆಯಾಳ, ಕಾಂಬೋಜ ಮುಂತಾದ ರಾಜ್ಯಗಳಿಗೆ ಹೋಗಿ ವ್ಯಾಪಾರ ಮಾಡುತ್ತಿದ್ದರೆಂದು ಅಯ್ಯಾವೊಳೆ ಐನೂರ್ವರೇ ಮೊದಲಾದವರ ಶಾಸನಗಳಿಂದ ತಿಳಿಯುತ್ತದೆ. ಅವರು ಪಾದಮಾರ್ಗ ಮತ್ತು ಜಲಮಾರ್ಗಗಳಿಂದ ವಿವಿಧ ಖಂಡಗಳನ್ನು ಸಂದರ್ಶಿಸುತ್ತಿದ್ದರು ಎಂದು ಅವರ ಪ್ರಶಸ್ತಿಯಲ್ಲಿ ಕಾಣಬರುತ್ತದೆ. ಅವರು ಭದ್ರಹಸ್ತಿ (ಆನೆ), ಜಾತಿಯ ಅಶ್ವ, ವಜ್ರ, ವೈಢೂರ್ಯಗಳು, ಸಾಂಬಾರ ಪದಾರ್ಥಗಳು, ಸುಗಂಧ ದ್ರವ್ಯಗಳು ಮತ್ತು ಔಷಧಿಗಳಲ್ಲಿ ವಿಶೇಷವಾಗಿ ವ್ಯಾಪಾರ ನಡೆಸುತ್ತಿದ್ದರು. ಆದುದರಿಂದ, ಸುಗಂಧ ದ್ರವ್ಯಗಳು ಮತ್ತು ಔಷಧಿಗಳಲ್ಲಿ ವಿಶೇಷವಾಗಿ ವ್ಯಾಪಾರ ನಡೆಸುತ್ತಿದ್ದರು. ಆದುದರಿಂದ ಆಮದು ರಫ್ತು ವಿಶೇಷವಾಗಿ ನಡೆಯುತ್ತಿತ್ತೆಂಬುದು ಖಚಿತವಾಗುತ್ತದೆ. ಆದುದರಿಂದ ಈ ವಿಭಾಗದ ವಸ್ತುಗಳಿಗೂ ತೆರಿಗೆಯನ್ನು ಹಾಕಿ, ರಾಜ್ಯದ ಆದಾಯವನ್ನು ತುಂಬಿಸುತ್ತಿದ್ದರೆಂದು ಖಚಿತವಾಗುತ್ತದೆ.

ಈ ವಿಷಯದಲ್ಲಿ ಮಾನಸೋಲ್ಲಾಸ ಮುಖ್ಯವಾದ ಕೆಲವು ಮಾಹಿತಿಗಳನ್ನು ಒದಗಿಸುತ್ತದೆ. ಅದರ ಪ್ರಕಾರ ವಿದೇಶದಿಂದ ಬರುವ ನಾವೆಗಳ ಮೇಲೆ ತೆರಿಗೆಯನ್ನು ಹಾಕಬೇಕು. ರಾಜನು ತನ್ನ ರಾಜ್ಯದ ಕರಾವಳಿಯಲ್ಲಿರುವ ಬಂದರುಗಳನ್ನು ಜಾಗರೂಕತೆಯಿಂದ ರಕ್ಷಿಸಬೇಕು. ತನ್ನ ರಾಜ್ಯದವರೇ ಆದ ವ್ಯಾಪಾರಿಗಳು ಹೊರ ದೇಶಗಳಿಂದ ತಂದ ಪದಾರ್ಥಗಳಿಗೆ, ಆ ಪದಾರ್ಥಗಳ ಬೆಲೆಯ ಹತ್ತನೇ ಒಂದು ಭಾಗವನ್ನು ವಸೂಲು ಮಾಡಬೇಕು. ಅಕಸ್ಮಾತ್ ವಿದೇಶೀಯ ನೌಕೆಗಳು, ಅನಾನುಕೂಲಕರವಾದ ಬಿರುಗಾಳಿಯಿಂದ ಈ ಬಂದರಿಗೆ ಬಂದರೆ ಅಂತಹ ನೌಕೆಯಲ್ಲಿರುವ ಎಲ್ಲಾ ಪದಾರ್ಥಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಬೇಕು ಅಥವಾ ಸ್ವಲ್ಪ

ಮಾತ್ರವನ್ನು ಅವರಿಗೆ ಹಿಂದಿರುಗಿಸಬೇಕು ಎಂದು ಹೇಳುತ್ತದೆ ಮಾನಸೋಲ್ಲಾಸ. ಇದನ್ನು ಆಗಿನ ಕಾಲದ ಶಾಸನಗಳು ದೃಢೀಕರಿಸುತ್ತವೆ. ಕಲ್ಯಾಣ ಚಾಲುಕ್ಯರ ಸಾಮಂತರಾದ ಗೋವೆಯ ಕದಂಬರಿಗೆ ಉತ್ತಮ ಕರಾವಳಿ ಇದ್ದುದರಿಂದ, ಅವರು ಈ ವಿಷಯದಲ್ಲಿ ಸಾಕಷ್ಟು ಏರ್ಪಾಡುಗಳನ್ನು ಮಾಡಿಕೊಂಡಿದ್ದರು. ಒಂದು ಶಾಸನದ ಪ್ರಕಾರ, ವಿದೇಶದಿಂದ ಬರುವ ಎಲ್ಲ ದೋಣಿಗಳೂ ಎರಡು ಚಿನ್ನದ ಗದ್ಯಾಣವನ್ನು; ವಿದೇಶದಿಂದ ಬರುವ ಹಡಗುಗಳು ಒಂದು ಚಿನ್ನದ ಧರಣ ಎಂಬ ನಾಣ್ಯವನ್ನು ಶುಲ್ಕವಾಗಿ ಕೊಡಬೇಕಾಗಿದ್ದಿತು, ಎಂದು ತಿಳಿಸುತ್ತದೆ.[೮] ಮೊದಲನೆಯ ಜಯಕೇಶಿಯ ಶಾಸನವನ್ನು ಆದರಿಸಿ ಮೊರೇಸ್ ಅವರು ಯಾವ ಯಾವ ರೀತಿಯ ಹಡಗುಗಳಿಗೆ ಎಷ್ಟೆಷ್ಟು ತೆರಿಗೆ ಎಂದು ವಿಶ್ಲೇಷಿಸಿದ್ದಾರೆ.[೯] ಅದರ ಪ್ರಕಾರ

ಮಲಯದ ಸಾಮಾನ್ಯ ಹಡಗಿಗೆ—ಒಂದು ಗದ್ಯಾಣ
ಮಲಯದ ವಿಶೇಷ ಹಡಗಿಗೆ—ಐದು ಡ್ರಾಕ್ಮಗಳು
ರುಲುಕ್ಕದ ವಿಶೇಷ ಹಡಗಿಗೆ—ಅದೇ
ಸೌರಾಷ್ಟ್ರದ ಹಡಗಿಗೆ—ಒಂದು ಗದ್ಯಾಣ
ಗುರ್ಜರ ಹಡಗಿಗೆ—ಅದೇ
ಲಡ್ಡದ ಹಡಗಿಗೆ—ಅದೇ
ಕೊಂಕಣದ ಹಡಗಿಗೆ—ಅದೇ
ಚಿಪಲೋಣದ ಹಡಗಿಗೆ—ಐದು ಡ್ರಾಕ್ಮ
ಸಂಗಮೇಶ್ವರದ ಹಡಗಿಗೆ—ಅದೇ
ವೆಲ್ಲಪಟ್ಟದ ಹಡಗಿಗೆ—ಅದೇ
ಪಿಂಡಿಯನ್ನದ ಸಣ್ಣ ಹಡಗಿಗೆ—ಎರಡು ಡ್ರಾಕ್ಮಗಳು
ಶಿವಪುರದ ಹಡಗಿಗೆ—ಒಂದು ಡ್ರಾಕ್ಮ

ಈ ಹಡಗುಗಳಲ್ಲಿ ಸಾಂಬಾರ ಪದಾರ್ಥಗಳು, ವಿವಿಧ ಲೋಹಗಳು, ಚಿನ್ನ ಮತ್ತು ಬೆಳ್ಳಿಗಳಿದ್ದವೆಂದೂ ತಿಳಿಯುತ್ತದೆ. ಅವರು ಕೊಂಡವರು ಮತ್ತು ಮಾರಿದವರು ಕೊಡಬೇಕಾದ ಸುಂಕವನ್ನೂ ತಿಳಿಸಿದ್ದಾರೆ.

ಒಂದು ಹಡಗಿನ ಹೊರಗೆ—ಇಬ್ಬರೂ ಒಂದು ಗದ್ಯಾಣ
ಒಂದು ಪರಂಗು(ಹಡಗು)—ಇಬ್ಬರೂ ಐದು ಡ್ರಾಕ್ಮಗಳು
ಒಂದು ಮನೆ (ದೋಣಿ) ಇಬ್ಬರೂ ಎರಡು ಡ್ರಾಕ್ಮಗಳು
ಒಂದು ಮನೆ—ಇಬ್ಬರೂ ಒಂದು ಡ್ರಾಕ್ಮ

ಈ ರೀತಿ ಗೋವೆಯ ಕದಂಬರ ಕಾಲದಲ್ಲಿ ಆಮದು ರಫ್ತು ವ್ಯಾಪಾರ ಚೆನ್ನಾಗಿ ನಡೆಯುತ್ತಿದ್ದು ಚಾಲುಕ್ಯರು ಸುಂಕಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯುತ್ತಿದ್ದರು.

ಪ್ರಾಚೀನ ಕಾಲದಲ್ಲಿ ಹಬ್ಬಹರಿದಿನಗಳು, ಮದುವೆ, ಮುಂಜಿ ಮುಂತಾದ ಸಮಾರಂಭಗಳಿಗೆ ಸಂಬಂಧಿಸಿದಂತೆ ತೆರಿಗೆಗಳನ್ನು ಹಾಕುವ ಪದ್ಧತಿಯನ್ನು ಕಾಣುತ್ತೇವೆ. ಇಂತಹ ತೆರಿಗೆಗಳನ್ನು ಸಾಮಾಜಿಕ ತೆರಿಗೆ ಎಂದು ಕರೆಯಲಾಗಿದೆ. ಇಂತಹ ವಿಶೇಷ ಸಮಾರಂಭಗಳಲ್ಲಿ ಹೇರಳ ಹಣ ಖರ್ಚಾಗುವಾಗ, ಒಂದು ಸಣ್ಣ ತೆರಿಗೆಯನ್ನು ಕೊಡುವುದು ಯಾರಿಗೂ ಭಾರವೆನಿಸುವುದಿಲ್ಲವೆಂಬುದೇ ಇದರ ಹಿಂದೆ ಇದ್ದ ಅಭಿಪ್ರಾಯ ಹಾಗೂ ರಾಜ್ಯದ ಆದಾಯಕ್ಕೆ ತಾವು ತಮ್ಮ ಕೈಲಾದಷ್ಟು ಮಾಡುತ್ತಿದ್ದೇವೆ ಎನ್ನುವ ಸಮಾಧಾನವೂ ಅಂದಿನ ಸಮಾಜಕ್ಕೆ ಇದ್ದಿರಬೇಕು. ಹೀಗಾಗಿ ಈ ಸಾಮಾಜಿಕ ತೆರಿಗೆಗಳು ಪ್ರಚಲಿತವಾಗಿದ್ದವು. ವಿಶೇಷವಾಗಿ ಈ ತೆರಿಗೆಗಳು ರಾಜನವರೆಗೆ ಹೋಗುತ್ತಿರಲಿಲ್ಲ. ಏಕೆಂದರೆ ಇವು ಸ್ಥಳೀಯ ತೆರಿಗೆಗಳಾಗಿದ್ದು, ತಮ್ಮ ಊರಿನ ಶಾಲೆ, ದೇವಾಲಯ, ಕೆರೆ, ಕಟ್ಟೆ, ಬಾವಿ ಮುಂತಾದ ಕೆಲಸಗಳಿಗೆ ಸದ್ವಿನಿಯೋಗವಾಗುತ್ತಿದ್ದವು. ಹೀಗಾಗಿ ಇವು ಅವ್ಯಾಹತವಾಗಿ ಮುಂದುವರಿದವು.

ಮದುವೆ ತೆರ ಅಥವಾ ಮದುವೆ ಹಣ ಈ ರೀತಿಯ ತೆರಿಗೆಗಳಲ್ಲಿ ಮುಖ್ಯವಾದುದು. ಮದುವೆಯ ಸಂದರ್ಭದಲ್ಲಿ ಗಂಡಿನ ಕಡೆಯವರು ಮತ್ತು ಹೆಣ್ಣಿನ ಕಡೆಯವರು—ಇಬ್ಬರೂ ಈ ತೆರಿಗೆಯನ್ನು ಕೊಡಬೇಕಾಗಿದ್ದಿತು (ಮದುವಳಿಗೆಯವರಲ್ಲಿ ಮತ್ತು ಮದುವಣಿಗೆಯವರಲ್ಲಿ) ಎಂದು ಹೇಳಿದೆ. ಮತ್ತೊಂದು ಕಡೆ 'ಮದುವೆಯಾದಡೆ ಕೊಂಡಲ್ಲಿ ಹಾಗ ಕೊಟ್ಟಲ್ಲಿ ಹಾಗ' ಎಂದು ಹೇಳಿರುವುದರಿಂದ ಎರಡೂ ಕಡೆಯವರು ಒಂದೊಂದು ಹಾಗವನ್ನು ತೆರಿಗೆಯಾಗಿ ಕೊಡಬೇಕಾಗಿದ್ದಿತು. ಅಕಸ್ಮಾತ್ ಬೇರೆ ಊರಿನಲ್ಲಿ ಮದುವೆಯಾದ ಪಕ್ಷದಲ್ಲಿ ಆಗಲೂ ಕೂಡ ಎರಡೂ ಕಡೆಯವರಿಂದ ಒಂದೊಂದು ಹಾಗವನ್ನು ವಸೂಲು ಮಾಡಲಾಗುತ್ತಿದ್ದಿತೆಂದು ಇನ್ನೊಂದು ಶಾಸನ ತಿಳಿಸುತ್ತದೆ.

ಬಾದಾಮಿ ಚಾಲುಕ್ಯರ ಕಾಲದ ಲಾಡ್‌ಖಾನ್ ದೇವಾಲಯದಲ್ಲಿರುವ ಸುಮಾರು ಎಂಟನೆಯ ಶತಮಾನದ ಶಾಸನ ಈ ದೃಷ್ಟಿಯಿಂದ ಗಮನಾರ್ಹವಾದುದು[೬] ಇದರಲ್ಲಿ ಬೆಣ್ಣಮ ಸೋಮಯಾಜಿಯು ಕೊಟ್ಟ ದಾನದ ವಿವರಗಳಿವೆ. ಅನ್ನಪ್ರಾಶನ, ಶ್ರೀಮಂತ (ಸೀಮಂತ), ಚೌಲ, ಧಾರಣ, ಉಪನಯನ ಮತ್ತು ಸಮಾವರ್ತನಗಳಲ್ಲಿ ಒಂದು ಗದ್ಯಾಣ, ಮದುವೆ, ಅಗ್ನಿ ಹೋತ್ರ ಮತ್ತು ಪಶುವಿಧಿ ಸಮಾರಂಭಗಳಲ್ಲಿ ಎರಡು ಗದ್ಯಾಣ: ಚಾತುರ್ಮಾಸ್ಯಕ್ಕೆ ಮೂರು ಗದ್ಯಾಣ ಮತ್ತು ಅಗ್ನಿಷ್ಟೋಮಕ್ಕೆ ನಾಲ್ಕು ಗದ್ಯಾಣಗಳನ್ನು ಆರ್ಯಪುರದ ಐನೂರ್ವರಿಗೆ ಕೊಟ್ಟರು. (ಅನ್ನಪ್ರಾಶನಕ್ಕಂ ಪೊಸವಣಕ್ಕಂ ಚಾಲಕ್ಕಂ ಧರಣಕ್ಕಂ ಉಪನಯನಕ್ಕಂ ಸಮಾವರ್ತನಕ್ಕಂ ಗದ್ಯಣ ಮದುವೆಗೆ ಅಧಾನಕ್ಕಂ ಪಶುವಿಧಿಗಮೆರಡು ಗದ್ಯಣಂ ಚಾತುರ್ಮಾಸ್ಯಕ್ಕೆ ಮೂರು ಗದ್ಯಣಂ ಅಗ್ನಿಷ್ಟೋಮಕ್ಕೆ ಗದ್ಯಣಂ ಅಚಳಿಯಮಿಪ್ಪೆರ್ದರ್ಗೆ ಕೊಟ್ಟುದು).

ಇದೇ ರೀತಿ ಇತರ ಸಮಾರಂಭಗಳಲ್ಲಿಯೂ ತೆರಿಗೆಯನ್ನು ಕೊಡಬೇಕಾಗಿದ್ದಿತು. ಹೆಣ್ಣು ಮಗಳು ಮೈನೆರೆದಲ್ಲಿ, ಮಗುವಿಗೆ ವಿದ್ಯಾಭ್ಯಾಸ ಸಮಯದಲ್ಲಿ ಹಾಗೂ ಹೊಸ ಮನೆಯನ್ನು ಪ್ರವೇಶಿಸುವಾಗ ತೆರಿಗೆಯನ್ನು ಮತ್ತೊಂದು ಶಾಸನ ತಿಳಿಸುತ್ತದೆ.[೭]

ಮದುವೆ ಮತ್ತು ಇತರ ಶುಭ ಸಮಾರಂಭಗಳಲ್ಲಿ ಹಾಕಿಸುವ ಚಪ್ಪರ (ಹಂದರ ಬೆಲೆ ಮತ್ತು ಹಂದರ ವಣ) ಮದುವಣಿಗರು ಕುಳಿತುಕೊಳ್ಳುವ ಹಸೆ ಅಥವಾ ಅಲಂಕಾರ (ಹಸೆಯ ವಣ) ವರ ಮತ್ತು ವಧು ಹಣೆಗೆ ಕಟ್ಟಿಕೊಳ್ಳುವ ಬಾಸಿಂಗ (ಬಾಸಿಂಗದೆಲೆ) ಇವುಗಳಿಗೂ ತೆರಿಗೆಯಿದ್ದವು. ಆದರೆ ಪ್ರಾಚೀನ ಕಾಲದ ಜನ ಈ ತೆರಿಗೆಗಳನ್ನು ಸಹಿಸಿಕೊಂಡಂತೆ ಮಧ್ಯಕಾಲೀನ ಜನ ಇದನ್ನು ಸಹಿಸಿಕೊಳ್ಳಲಿಲ್ಲ. ವಿಜಯನಗರದ ಚಕ್ರವರ್ತಿ ಕೃಷ್ಣದೇವರಾಯನಿಗೆ ಪ್ರಜೆಗಳು ಈ ಮದುವೆ ತೆರಿಗೆಯ ವಿಷಯದಲ್ಲಿ ದೂರನ್ನಿತ್ತರು. ಕೂಡಲೇ ಕೃಷ್ಣದೇವರಾಯನು ಈ ತೆರಿಗೆಯನ್ನು ವಜಾ ಮಾಡಿದನೆಂದು ಮಹಾಲಿಂಗಂ ಅವರು ಹೇಳಿದ್ದಾರೆ.[೮]

ಈ ರೀತಿ ಕೆಲವು ಸಣ್ಣಪುಟ್ಟ ತೆರಿಗೆಗಳು ಶಾಸನಗಳಲ್ಲಿ ಕಾಣಸಿಗುತ್ತವೆ. ಇವುಗಳಿಂದ ರಾಜ್ಯದ ಆದಾಯಕ್ಕೆ ಮಾತ್ರವಲ್ಲದೆ, ಸ್ಥಳೀಯ ಸಂಸ್ಥೆಗಳು, ದೇವಾಲಯಗಳು, ಕೆರೆಕಟ್ಟೆಗಳು ಮುಂತಾದ ಸಮಾಜೋ-ಧಾರ್ಮಿಕ ಕಾರ್ಯಗಳಿಗೂ ಉತ್ತೇಜನ ಸಿಗುತ್ತಿತ್ತು. ಇದರಿಂದಾಗಿ ಜನಗಳಿಗೆ ಅವು ಭಾರವೆನಿಸುತ್ತಿರಲಿಲ್ಲ; ಅದಕ್ಕೆ ಸಾಮಾಜಿಕ ಹಾಗೂ ಧಾರ್ಮಿಕ ಪ್ರಸ್ತುತತೆಯೇ ಕಾರಣ ಎನ್ನುವುದನ್ನು ಮರೆಯುವಂತಿಲ್ಲ.

ಟಿಪ್ಪಣಿಗಳು

೧. IA, VIII, p. 205

೨. ಸಾಧನೆ I (III) 191

೩. SII, IX, i, 297, XV, 165

೪. Moraes : Kadambakula, p. 269

೫. ಅದೇ, ಪು. 270

೬. EI, VIII, p. 287

೭. Hyderabad Archaeological Series, XIV, No. 17

೮. T. V. Mahalingam : South Indian Polity, p. 145

ಡಾ. ಸರ್ವಪಲ್ಲಿ ರಾಧಾಕೃಷ್ಣನ್

—ಡಾ. ಎಂ. ಪಿ. ರಮೇಶ್

ಡಾ. ಎಸ್.ರಾಧಾಕೃಷ್ಣನ್ ಅವರು ವಿಶ್ವವೇದಾಂತಿ, ಮಹಾಮಾನವತಾವಾದಿ, ವಿಶ್ವವಿಖ್ಯಾತ ತತ್ತ್ವಜ್ಞಾನಿ, ಶಿಕ್ಷಣತಜ್ಞ, ಸಮಾಜ ಸೇವಕ, ರಾಜಕೀಯ ಮುತ್ಸದ್ದಿ, ಆಚಾರ್ಯ, ಕುಲಪತಿ, ಆದರ್ಶ ಶಿಕ್ಷಕ, ಹೆಸರಾಂತ ಭಾಷಣಕಾರ ಹೀಗೆ ಅವರಲ್ಲಿ ಈ ಗುಣಗಳನ್ನು ಕಾಣುತ್ತೇವೆ. ರಾಧಾಕೃಷ್ಣನ್ ಅವರ ಜನ್ಮದಿನವನ್ನೇ ಇಂದು ಶಿಕ್ಷಕರ ದಿನವನ್ನಾಗಿ ರಾಷ್ಟ್ರಾದ್ಯಂತ ಆಚರಿಸಲಾಗುತ್ತಿದೆ. ಅವರು ಭಾರತದ ಭವ್ಯ ಪಂರಪರೆಯ ಪ್ರತೀಕ. ಡಾ. ಎಸ್. ರಾಧಾಕೃಷ್ಣನ್ ಅವರು ದೇಶದ ಮೊದಲ ಉಪರಾಷ್ಟ್ರಪತಿ ಮತ್ತು ಎರಡನೆಯ ರಾಷ್ಟ್ರಪತಿ ಎನ್ನುವುದಕ್ಕಿಂತಲೂ ದೂರದೃಷ್ಟಿ ಹೊಂದಿದ್ದ ಒಬ್ಬ ದಾರ್ಶನಿಕನೆಂದು ಹೇಳಬಹುದು. ಒಬ್ಬ ಶಿಕ್ಷಕ ಸುಸಂಸ್ಕೃತ ನಾಗರಿಕರನ್ನು ರೂಪಿಸುವುದರ ಮುಖೇನ ದೇಶವನ್ನೂ ಸದೃಢವಾಗಿ ನಡೆಸಬಲ್ಲ ಎಂಬುದಕ್ಕೆ ರಾಧಾಕೃಷ್ಣನ್‌ಅವರೇ ಸಾಕ್ಷಿ. ಭಾರತ ಕಂಡ ಖ್ಯಾತ ವಿದ್ವಾಂಸರು, ತತ್ತ್ವಜ್ಞಾನಿಗಳು, ಬರಹಗಾರರು ಮತ್ತು ಮುತ್ಸದ್ದಿಗಳಲ್ಲಿ ರಾಧಾಕೃಷ್ಣನ್ ಕೂಡ ಒಬ್ಬರಾಗಿದ್ದಾರೆ.

ಜಗತ್ತಿನ ಅತ್ಯುತ್ತಮ ತತ್ತ್ವಜ್ಞ, ಚಿಂತಕರಲ್ಲಿ ಡಾ. ಎಸ್. ರಾಧಾಕೃಷ್ಣನ್ ಸಹ ಒಬ್ಬರು. ಅವರು ೫-೯-೧೮೮೮ರಂದು ತಿರುತ್ತಣಿ ಎಂಬ ಸ್ಥಳದಲ್ಲಿ ಜನಿಸಿದರು. ಅವರಲ್ಲಿ ಸಂಸ್ಕಾರವೆನ್ನುವುದು ಹುಟ್ಟಿನಿಂದಲೇ ಬಂದಿತ್ತು. ಅವರ ತಂದೆ ವೀರಸಾಮಯ್ಯ. ಅವರು ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬಕ್ಕೆ ಸೇರಿದವರು; ತಹಸೀಲ್ದಾರ್ ಆಗಿದ್ದರು. ಕೌಟುಂಬಿಕ ಹಿನ್ನೆಲೆ ಮತ್ತು ಪರಿಸರ ರಾಧಾಕೃಷ್ಣನ್ ಅವರ ವ್ಯಕ್ತಿತ್ವದ ಮೇಲೆ ಗಣನೀಯ ಪರಿಣಾಮ ಬೀರಿದವು. ರಾಧಾಕೃಷ್ಣನ್ ಅವರಿಗೆ ಅವರ ತಂದೆಯವರು ಅಂದಿನ ಕಾಲದಲ್ಲಿ ಆಧುನಿಕ ಶಿಕ್ಷಣಕ್ಕೆ ಹೆಸರಾಗಿದ್ದ ಕ್ರೈಸ್ತ ಮಿಷನರಿ ಶಾಲಾ ಕಾಲೇಜಿನಲ್ಲಿ ಶಿಕ್ಷಣ ಕೊಡಿಸಿದರು. ಬಾಲ್ಯದಲ್ಲಿ ರಾಧಾಕೃಷ್ಣನ್ ಅವರು ಅತ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದರು. ಅವರು ಬಿ.ಎ. (ಆನರ್ಸ್)ಗೆ ಕಾಲಿಟ್ಟಾಗ ಗಣಿತ, ಭೌತಶಾಸ್ತ್ರ, ಜೀವಶಾಸ್ತ್ರ, ತತ್ತ್ವಶಾಸ್ತ್ರ ಮತ್ತು ಇತಿಹಾಸ ವಿಷಯಗಳಲ್ಲಿ ಒಂದು ವಿಷಯವನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕಿತ್ತು. ಅಂತಹ ಸಂದರ್ಭದಲ್ಲಿ ತತ್ತ್ವಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ಆರಿಸಿಕೊಂಡರು. ಅವರು ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಪ್ರಥಮ ಸ್ಥಾನದಲ್ಲಿಯೇ ತೇರ್ಗಡೆ ಹೊಂದಿದರು. ತತ್ತ್ವಶಾಸ್ತ್ರ ವಿಷಯ ರಾಧಾಕೃಷ್ಣನ್ ಅವರ ಭವಿಷ್ಯವನ್ನೇ ಬದಲಿಸಿತೆಂದು ಹೇಳಬಹುದು. ಸಂಸ್ಕೃತ ಮತ್ತು ಹಿಂದಿ

ಭಾಷೆಯನ್ನು ಕಲಿಯುವುದರ ಜೊತೆಗೆ ವೇದ ಮತ್ತು ಉಪನಿಷತ್‌ಗಳನ್ನು ತುಂಬಾ ಆಸಕ್ತಿ ವಹಿಸಿ ಅಧ್ಯಯನ ಮಾಡಿದರು. ಹೀಗಾಗಿ ಅವರೊಬ್ಬ ದಾರ್ಶನಿಕರಾಗಿಯೇ ಇಂದಿಗೂ ಉಳಿದಿದ್ದಾರೆ. ಅವರ ಹದಿನೆಂಟನೆಯ ವರ್ಷದಲ್ಲಿ ಶಿವಕಾಮಮ್ಮ ಎಂಬುವರೊಂದಿಗೆ ವಿವಾಹವಾದರು.

ರಾಧಾಕೃಷ್ಣನ್ ಅವರು ಪುಸ್ತಕ ಪ್ರಿಯರಾಗಿದ್ದರು. ಅವರಿಗೆ ಚಿಕ್ಕ ವಯಸ್ಸಿನಿಂದಲೂ ತುಂಬಾ ಪುಸ್ತಕಗಳನ್ನು ಓದುತ್ತಿದ್ದರು. ಅವರ ಇಪ್ಪತ್ತನೆಯ ವಯಸ್ಸಿಗೆ 'Ethics in Vedanta' ಎಂಬ ಮಹಾಪ್ರಬಂಧವನ್ನು ರಚಿಸಿದರು. ಅವರು ವೇದೋಪನಿಷತ್ತುಗಳಲ್ಲಿ ಅಗಾಧ ಪಾಂಡಿತ್ಯವನ್ನು ಪಡೆದಿದ್ದರು. ಪೌರ್ವಾತ್ಯ–ಪಾಶ್ಚಾತ್ಯ ತತ್ತ್ವಶಾಸ್ತ್ರಗಳೆರಡರಲ್ಲೂ ವಿಶೇಷವಾದ ಜ್ಞಾನವನ್ನು ಹೊಂದಿದ್ದರು. ರಾಧಾಕೃಷ್ಣನ್ ಅವರು ಶಿಸ್ತಿನ ಸಿಪಾಯಿಯೂ, ಸಮಯಪಾಲಕರೂ ಆಗಿದ್ದರು. ನಡೆನುಡಿಗಳಲ್ಲಿ ಗಾಂಭೀರ್ಯ ಮುಂತಾದ ಸದ್ಗುಣಗಳನ್ನು ಅವರು ಹಿಂದೆಯೇ (ಕ್ರೈಸ್ತ ಮಿಷನರಿ ಶಾಲೆಗಳಿಂದ ಶಿಕ್ಷಣ) ಪಡೆದಿದ್ದವರು. "ಜೊತೆಗೆ ಆ ಸಂಸ್ಥೆಗಳಲ್ಲಿ ಬೆಳೆದು ಬಂದಿದ್ದ ಹಿಂದೂ ಧರ್ಮದ ಬಗೆಗಿನ ತಪ್ಪು ತಿಳಿವಳಿಕೆಗಳು ಮತ್ತು ಅನಾದರವನ್ನು ಅವರ ತೀಕ್ಷ್ಣ ಬುದ್ಧಿ ಗುರುತಿಸಿತು." ಈ ತಪ್ಪುಗಳನ್ನು ತಿದ್ದಲು ಪ್ರಯತ್ನಿಸುವಾಗ ಅವರಿಗೆ ನೆರವಾದದ್ದು ಸ್ವಾಮಿ ವಿವೇಕಾನಂದರ ಚಿಂತನೆ, ಇದರ ಪರಿಣಾಮದಿಂದ- ಹಿಂದೂಧರ್ಮ, ಸಮಗ್ರ ಭಾರತೀಯ ಚಿಂತನ ಪರಂಪರೆ ಮತ್ತು ತತ್ತ್ವಶಾಸ್ತ್ರಗಳ ಆಳವಾದ ಅಧ್ಯಯನ, ಅದರ ನಿಖರವಾದ ನಿರೂಪಣೆ, ಲೇಖನಗಳು ಹಾಗೂ ಅನೇಕ ಗ್ರಂಥಗಳಿಂದ ಲಭ್ಯವಾಯಿತು.

೧೯೦೯ ರಲ್ಲಿ ಪ್ರಥಮವಾಗಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಹಿರಿಯ ಉಪನ್ಯಾಸಕರಾಗಿ ವೃತ್ತಿ ಜೀವನ ಆರಂಭಿಸಿದರು. ರಾಧಾಕೃಷ್ಣನ್ ಅವರು ಘನತೆ ಗೌರವಕ್ಕೆ ತಕ್ಕ ಹಾಗೆ ಪಾಠ ಹೇಳುತ್ತಿದ್ದರು. ಹಾಗಾಗಿ ಅವರು ವಿದ್ಯಾರ್ಥಿಗಳಿಗೆ ಬಹುಬೇಗನೆ ಅಚ್ಚುಮೆಚ್ಚಿನ ಗುರುಗಳಾದರು. ೧೯೧೭ರಲ್ಲಿ ರಾಜಮಹೇಂದ್ರಿಯದಲ್ಲಿ ಉಪನ್ಯಾಸಕರಾಗಿದ್ದು, ೧೯೧೮ರಿಂದ ೧೯೨೧ರವರೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದರು. ಅಂದಿನ ಕಾಲದಲ್ಲಿ ಅವರ ಕೀರ್ತಿಯು ಎಲ್ಲಾ ಕಡೆಯೂ ಹರಡುತ್ತಿತ್ತು. ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಕಾಲದಲ್ಲಿ ರವೀಂದ್ರನಾಥ ಟ್ಯಾಗೂರರನ್ನು ಸಂದರ್ಶಿಸಿ ವಿಶ್ವಾಸ ಗಳಿಸಿದರು. ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವು ಸೇರಿದಂತೆ ಅನೇಕ ಹೆಸರಾಂತ ವಿಶ್ವವಿದ್ಯಾನಿಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ನೀಡಿ 'ಆಚಾರ್ಯ'ರಾದರು. ಆಂಧ್ರ ವಿಶ್ವವಿದ್ಯಾನಿಲಯವು ಸೇರಿದಂತೆ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಉಪಕುಲಪತಿಯಾಗಿ ಆಡಳಿತದಲ್ಲಿಯೂ ತಮ್ಮ ಪ್ರಾವೀಣ್ಯತೆಯನ್ನು ತೋರಿಸಿದ್ದಾರೆ. ಡಾ. ಎಸ್. ರಾಧಾಕೃಷ್ಣನ್ ಅವರಿಗೆ ಸಂದ ಬಿರುದು ಗೌರವಗಳನ್ನು ಹೇಳಲು ಅಸಾಧ್ಯವಾದುದು. ಅವರಿಗೆ ಯುನೆಸ್ಕೋದ ಅಧ್ಯಕ್ಷ ಸ್ಥಾನ, ಬ್ರಿಟಿಷ್ ಅಕಾಡೆಮಿ ಫೆಲೋಷಿಪ್, ಆರ್ಡರ್ ಆಫ್ ಮೆರಿಟ್, ನೈಟ್ ಹುಡ್, ಟೆಂಪಲಟನ್ ಅವಾರ್ಡ್ ಹಲವಾರು

ವಿಶ್ವವಿದ್ಯಾನಿಲಯಗಳಿಂದ ಗೌರವ ಡಾಕ್ಟರೇಟ್, ಜರ್ಮನಿಯ ಪುಸ್ತಕ ಮಾರಾಟಗಾರರಿಂದ ಶಾಂತಿ ಪುರಸ್ಕಾರದ ಜೊತೆಗೆ ೧೯೫೪ರಲ್ಲಿ ಭಾರತದ ಅತ್ಯುನ್ನತ ಪುರಸ್ಕಾರವಾದ 'ಭಾರತ ರತ್ನ'ವನ್ನು ನೀಡಿ ಗೌರವಿಸಲಾಯಿತು.

ಡಾ. ಎಸ್. ರಾಧಾಕೃಷ್ಣನ್ ಅವರ ಬದುಕು ವಿಭಿನ್ನವಾದುದು. ಯಾವ ಕ್ಷೇತ್ರವೇ ಆಗಲಿ ಆಸಕ್ತಿ ವಹಿಸಿ ಕಾರ್ಯನಿರ್ವಹಿಸುತ್ತಿದ್ದರು. ಅವರ ಜೀವನದಲ್ಲಿ ನಲವತ್ತು ವರ್ಷಗಳಿಗಿಂತ ಹೆಚ್ಚು ಕಾಲ 'ಶಿಕ್ಷಣ ತಜ್ಞ' ರೆಂದೇ ಪ್ರಸಿದ್ಧರಾಗಿದ್ದರು. ಅವರು ಶಿಕ್ಷಣದ ಜೊತೆಗೆ ರಾಜಕೀಯ ಕ್ಷೇತ್ರವನ್ನು ತಡವಾಗಿ ಪ್ರವೇಶಿಸಿದರು. ಅಲ್ಲಿಯೂ ತಮ್ಮ ಔನ್ನತ್ಯವನ್ನು ಮೆರೆದರು. ಭಾರತೀಯ ಕ್ಷೇತ್ರದಲ್ಲಿ ರಾಜ್ಯಾಂಗ ರಚನೆಯ ಸದಸ್ಯರಾಗಿ ಪಾದಾರ್ಪಣೆ ಮಾಡಿದರು. ೧೯೬೨ರವರೆಗೆ ಹತ್ತು ವರ್ಷ ಕಾಲ ಉಪರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸಿದರು. ಹಾಗೆಯೇ ರಾಜ್ಯಸಭೆಯ ಅಧ್ಯಕ್ಷರೂ ಆಗಿ ಅಲ್ಲಿನ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಿರ್ವಹಿಸಿದರು. ೧೯೬೨ರಲ್ಲಿ ಅನಂತರ ಭಾರತದ ಅತ್ಯುನ್ನತ ಪದವಿಯಾದ ರಾಷ್ಟ್ರಪತಿ ಪೀಠವನ್ನು ಅಲಂಕರಿಸಿದರು. ಅಂದಿನ ಕಾಲದಲ್ಲಿ ಅನೇಕ ರಾಷ್ಟ್ರಗಳಿಗೆ ಸೌಹಾರ್ದ ಭೇಟಿ ಕೊಟ್ಟರು. ಅವರು ಹೋದ ಕಡೆಯಲ್ಲೆಲ್ಲ ಭಾರತೀಯ ಚಿಂತನೆ ಮತ್ತು ತತ್ತ್ವಶಾಸ್ತ್ರದ ಸಾರವನ್ನು ಅಲ್ಲಿಯ ಜನತೆಗೆ ತಿಳಿ ಹೇಳಿ ಭಾರತ ದೇಶದ ಭವ್ಯ ಪರಂಪರೆಯ ಸಂಸ್ಕೃತಿಯನ್ನು ಎತ್ತಿ ಮೆರೆದಿದ್ದಾರೆ. ಅವರು ಭಾರತದ ರಾಷ್ಟ್ರಪತಿಯಾದರೂ ಸಹ ಆ ಪದವಿಗೆ ತಕ್ಕಂತೆ ಅಧಿಕಾರ ವೈಭವವೆಲ್ಲವೂ ಇದ್ದರೂ, ಅವರು ಎಂದಿಗೂ ಆಡಂಬರದ ವ್ಯಕ್ತಿಯಾಗಿ ಜೀವನ ನಡೆಸಿದವರಲ್ಲ. ಯಾವಾಗಲೂ ಸಾಮಾನ್ಯ ಜನರಿಗೂ ಗೌರವ-ಮನ್ನಣೆ ಕೊಡುತ್ತಿದ್ದರು.

ಭಾರತೀಯ ತತ್ತ್ವಶಾಸ್ತ್ರಕ್ಕೆ ರಾಧಾಕೃಷ್ಣನ್ ಕೊಡುಗೆ ಅಮೋಘವಾದುದು. ಅವರು ವಿಶ್ವಕವಿ ರವೀಂದ್ರರ ಸಾಹಿತ್ಯದಲ್ಲಿರುವ ತತ್ತ್ವಶಾಸ್ತ್ರವನ್ನು ವ್ಯಾಸಂಗ ಮಾಡಿ ಪ್ರಥಮ ಗ್ರಂಥವನ್ನು ರಚಿಸಿದರು. ಅದೇ 'ಫಿಲಾಸಫಿ ಆಫ್ ಟ್ಯಾಗೋರ್'. ಅನಂತರ ಅವರು ಅನೇಕ ಗ್ರಂಥಗಳನ್ನು ರಚಿಸಿದರು. ಅವುಗಳಲ್ಲಿ ಪ್ರಮುಖವಾದವು ಭಾರತೀಯ ದರ್ಶನ, ಪ್ರಾಚೀನ ಋಷಿಗಳು, ಪ್ರವಾದಿಗಳು ಮತ್ತು ದಾರ್ಶನಿಕರು ಕಂಡ ದರ್ಶನಗಳ ಸಾರಸಂಗ್ರಹವಾಗಿದೆ. ಹಿಂದೂ ಜೀವನದೃಷ್ಟಿ, ಹಿಂದೂ ವೇದಾಂತ, ಸ್ವಾತಂತ್ರ್ಯ ಮತ್ತು ಸಂಸ್ಕೃತಿ, ಭಾರತೀಯ ಸಂಸ್ಕೃತಿ, ಧರ್ಮ ಮತ್ತು ಸಮಾಜ ಮುಂತಾದವು. ಅವರು ಬರೆದ ಲೇಖನಗಳು ಮತ್ತು ಗ್ರಂಥಗಳು ಸುಮಾರು ನೂರೈವತ್ತು. ಬೌದ್ಧಿಕ ವಿಶ್ವದಲ್ಲಿ ಅವರಷ್ಟು ಸರಳವಾಗಿ, ನಿಖರವಾಗಿ ಪ್ರತಿಪಾದಿಸಿದವರು ಕಡಿಮೆ. ಅವರ ಬೃಹತ್ ಗ್ರಂಥವಾದ 'ಇಂಡಿಯನ್ ಫಿಲಾಸಫಿ' ಎಂಬುದು ವಿಶ್ವಖ್ಯಾತಿಯನ್ನು ಗಳಿಸಿದೆ. ರಾಧಾಕೃಷ್ಣನ್ ಅವರ ಗ್ರಂಥಗಳಲ್ಲಿ ಕೆಲವು ಸೃಜನಾತ್ಮಕವೂ ವಿವರಣಾತ್ಮಕವೂ ಆಗಿವೆ. 'ವಿವಿಧ ಸಂಸ್ಕೃತಿಗಳ ಐಕ್ಯವೇ ಅವರ ಎಲ್ಲಾ ಹೊತ್ತಿಗೆಗಳಲ್ಲಿ ಹರಿದಾಡುವ ಸಾಮಾನ್ಯ ಅಂಶವಾಗಿದೆ. ಇಡೀ ಮಾನವತೆಯೆಲ್ಲ ಆಧ್ಯಾತ್ಮಿಕವಾಗಿ ಒಂದು ಎಂಬ ಅಂಶವನ್ನು ಅವರ ಗ್ರಂಥಗಳು ಮತ್ತೆ ಮತ್ತೆ ಸ್ಥಿರಪಡಿಸುತ್ತವೆ.'

ಪ್ಲೇಟೋ, ಪ್ಲೋಟೈನಸ್, ಕ್ಯಾಂಟ್, ಬ್ರಾಡ್ಲೆ, ಬರ್ಗ್‌ಸನ್ ಮೊದಲಾದ ಪಾಶ್ಚಾತ್ಯ ಚಿಂತಕರ ಪ್ರಭಾವವು ರಾಧಾಕೃಷ್ಣನ್ ಅವರ ತತ್ತ್ವಚಿಂತನೆಯ ಮೇಲೆ ವಿಶೇಷ ಪ್ರಭಾವವನ್ನು ಬೀರಿತು. ಅವರು ಭಾರತೀಯ ಸಂಸ್ಕೃತಿ ಮತ್ತು ದರ್ಶನಗಳೆರಡನ್ನೂ ತುಂಬಾ ಪ್ರೀತಿಸುತ್ತಿದ್ದರು. ಭಾರತೀಯ ಚಿಂತನೆ, ಇಡೀ ಮಾನವತೆಯ ಅತಿ ಶ್ರೇಷ್ಠ ಜ್ಞಾನವನ್ನು ಒಳಗೊಂಡಿದೆಯೆಂದು ಅವರು ದೃಢವಾಗಿ ನಂಬಿದ್ದರು. ಪ್ರಪಂಚದ ತಾತ್ವಿಕ ಭೂಪಟದಲ್ಲಿ ತತ್ತ್ವಚಿಂತನೆಗೆ—ಅದರ ಎಲ್ಲ ರಂಗಗಳನ್ನು ಒಳಗೊಂಡಂತೆ—ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ.' ಅವರ ಪ್ರಕಾರ ತತ್ವಶಾಸ್ತ್ರವೆಂದರೆ ಜೀವನ ಮೌಲ್ಯಗಳ ಅಧ್ಯಯನ. ಅಧ್ಯಯನದ ಜೊತೆಗೆ ಮಾನವ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡುವುದು. 'ಅದು ಭಾವನೆಗಳನ್ನು ವಿಶ್ಲೇಷಿಸಿದರಷ್ಟೆ ಸಾಲದು; ಜೀವನದ ಒಂದು ಸಮಗ್ರ ನೋಟವನ್ನು ಅದು ಕೊಡಬೇಕು. ಆಗ ಮಾತ್ರ ಅದು ತತ್ತ್ವಶಾಸ್ತ್ರ ಎಂದು ಕರೆಸಿಕೊಳ್ಳುವ ಅರ್ಹತೆಯನ್ನು ಪಡೆಯುತ್ತದೆ ಎಂದು ಅವರು ಪ್ರತಿಪಾದಿಸುತ್ತಾರೆ.'

ರಾಧಾಕೃಷ್ಣನ್ ಅವರು ಧರ್ಮವನ್ನು ಕುರಿತು ಹೀಗೆ ಹೇಳುತ್ತಾರೆ :'ಧರ್ಮವೆಂದರೆ ಬಾಹ್ಯ ಕರ್ಮ ಕಲಾಪವಲ್ಲ. ಯಾಂತ್ರಿಕ ಆಚರಣೆಯಲ್ಲಿ ಮತಧರ್ಮ ಸಿದ್ಧಾಂತಗಳಿಗೆ ಜಡವಾದ ರೀತಿಯಲ್ಲಿ ಹೂಗುಟ್ಟುವುದು ಅಲ್ಲ. ಮತಧರ್ಮದ ಬಾಹ್ಯ ಲಾಂಛನಗಳಲ್ಲ; ಧರ್ಮ ಬರಿಯ ಮಾತಿನ ಪ್ರತಿಪಾದನೆಯಲ್ಲ. ಧರ್ಮವೆಂದರೆ ನುಡಿದಂತೆ ನಡೆಯುವುದು. ಅದೇ ಕೇವಲ ನಂಬಿಕೆಯ ವಿವರಣೆಯಲ್ಲ; ನಂಬಿಕೆಯಂತೆ ಬಾಳುವುದೂ ಆಗಿದೆ.' ಧರ್ಮವು ನಿಷ್ಠೆ ತತ್ತ್ವದಲ್ಲಿಯೂ ಅನುಷ್ಠಾನದಲ್ಲಿಯೂ ವ್ಯಕ್ತವಾಗಬೇಕು. ಮತಧರ್ಮವು ಪ್ರಗತಿಶೀಲವೂ, ವ್ಯಾಪಕವೂ ಆಗಿ ಮಾನವನ ಜೀವನಕ್ಕೆ ಸಂಬಂಧಿಸಿದ ಪ್ರತಿಯೊಂದು ರಂಗಗಳಿಗೂ ವ್ಯಾಪಿಸಬೇಕು. ಮಾನವನ ಪ್ರತಿಯೊಂದು ಕ್ರಿಯೆಗಳ ಮೇಲೆ ಪ್ರಭಾವ ಬೀರಿದರೆ ಮಾತ್ರ ಅದು ಸತ್ಯವಾಗುತ್ತದೆ ಎಂದಿದ್ದಾರೆ. ಅವರ ತತ್ತ್ವಚಿಂತನೆಯ ಆಧ್ಯಾತ್ಮಿಕ ದೃಷ್ಟಿಕೋನ, ವಿಶಾಲ ಮನೋಭಾವ, ಮಾನವ ಜನಾಂಗಗಳ ಮೌಲ್ಯೋಪಾಸನ, ಪ್ರಾಚ್ಯ ಮತ್ತು ಪಾಶ್ಚಾತ್ಯ ಧರ್ಮ ಹಾಗೂ ತತ್ತ್ವಗಳ ಸಮನ್ವಯವಾಗಿದೆ; ಭಾರತೀಯ ತತ್ತ್ವಶಾಸ್ತ್ರದ ಜ್ಞಾನದ ಭಂಡಾರವನ್ನು ಜಗತ್ತಿಗೆ ಪರಿಚಯಿಸಿದ ಸಾಧಕರು. ಮಾನವ ಜನಾಂಗಕ್ಕೆ ಇವರ ಕೊಡುಗೆ ಆಶಾವಾದ ಆತ್ಮವಿಶ್ವಾಸಗಳು ಮೂಡುವಂತೆ ಪ್ರೇರೇಪಿಸುತ್ತವೆ.

ಸೋವಿಯತ್ ರಷ್ಯಾದಲ್ಲಿ ರಾಧಾಕೃಷ್ಣನ್ ಅವರು ೧೯೪೯-೧೯೫೨ರವರೆಗೆ ಭಾರತದ ರಾಯಭಾರಿಯಾಗಿದ್ದರು. ಅವರು ಭಾರತಕ್ಕೆ ಮರಳುವ ಮುನ್ನ ಸ್ಟಾಲಿನ್ ಬೀಳ್ಕೊಟ್ಟುದನ್ನು ಅವರೇ ನೆನೆದಿದ್ದಾರೆ. 'ನಾನೊಬ್ಬ ಮಾನವ, ರಾಕ್ಷಸನಲ್ಲ ಎಂದು ಗುರುತಿಸಿದವರು ನೀವೊಬ್ಬರೇ ಎಂದು ಹೇಳಿದನಂತೆ'. ಹಾಗೆಯೇ ಪಂಡಿತ್ ಜವಹರ್‌ಲಾಲ್ ನೆಹರು ಅವರು ರಾಧಾಕೃಷ್ಣನ್ ಅವರನ್ನು ಕುರಿತು 'ಮಹಾನ್ ತತ್ತ್ವಜ್ಞಾನಿ, ಶಿಕ್ಷಣವೇತ್ತ, ಮಹಾಮಾನವತಾವಾದಿಯಾದ ಇಂತಹ ಒಬ್ಬ ವ್ಯಕ್ತಿ ನಮ್ಮ ರಾಷ್ಟ್ರಪತಿಯಾಗಿರುವುದೇ ನಮ್ಮ ಸೌಭಾಗ್ಯ ಎಂದಿದ್ದಾರೆ'. ಆಧುನಿಕ ಯುಗದ ಮಹಾತತ್ತ್ವಜ್ಞಾನಿಯಾದ ಬರ್ಟ್ರೆಂಡ್ ರಸಲ್‌ರು 'ಭಾರತವು ಒಬ್ಬ ತತ್ತ್ವಜ್ಞಾನಿಯನ್ನು ತನ್ನ ರಾಷ್ಟ್ರಪತಿಯಾಗಿ ಆಯ್ಕೆ ಮಾಡಿಕೊಂಡಿರುವುದು ಆ ದೇಶದ ಹೆಗ್ಗಳಿಕೆ' ಎಂದಿದ್ದಾರೆ.

ನಾಯಕ–ನಾಯಕಾರಾಧನೆ

—ಡಾ. ಟಿ. ಎಲ್. ವೆಂಕಣ್ಣ

ಆದಿಮಾನವ ಅರಣ್ಯಗಳಲ್ಲಿ ನೆಲಸಿ ಬೇಟೆಯನ್ನು ತನ್ನ ಉಪಜೀವಿತವನ್ನಾಗಿ ಮಾಡಿಕೊಂಡಿದ್ದ ಕಾಲದಿಂದ ಹಿಡಿದು ಇಂದಿನವರೆಗೂ ಮಾನವ ಸಮುದಾಯ ತನಗಿಂತ ಹಿರಿಯ ಚೇತನವೊಂದರ ಆರಾಧನೆ ಹಾಗೂ ಅನುಕರಣಗಳಲ್ಲಿ ತೊಡಗಿದೆ. ಅಂತಹ ಹಿರಿಯ ಚೇತನಕ್ಕೆ ನಾಯಕತ್ವದ ಪಟ್ಟಕಟ್ಟಿದೆ.

ಅಲೆಮಾರಿ ಜನಾಂಗ ತನ್ನ ಬದುಕಿಗಾಗಿ ಬೆಟ್ಟಕಾಡುಗುಡ್ಡಗಳಲ್ಲಿ ಬೇಟೆಯನ್ನು ತಮ್ಮ ಜೀವನೋಪಾಯವಾಗಿ ಮಾಡಿಕೊಂಡಿದ್ದ ಸಂದರ್ಭದಲ್ಲಿ ದೈಹಿಕವಾಗಿ ಶಕ್ತಿ, ಚುರುಕುತನಗಳನ್ನೂ, ಬೌದ್ಧಿಕವಾಗಿ ದೂರದರ್ಶಿತ್ವದಿಂದ ಕೂಡಿ ಅಪಾಯಗಳಿಂದ ತನ್ನನ್ನು ಸಂರಕ್ಷಿಸಬಲ್ಲ ವ್ಯಕ್ತಿಯೋರ್ವನನ್ನು ತಮ್ಮ ನಾಯಕನನ್ನಾಗಿ ಪರಿಗಣಿಸುತ್ತಿತ್ತು. ದೈಹಿಕವಾಗಿ, ಬೌದ್ಧಿಕವಾಗಿ ತನ್ನ ಸಮುದಾಯದ ಇತರ ವ್ಯಕ್ತಿಗಳಿಗಿಂತ ಬಹುಪಾಲು ಹಿರಿಯನಾಗಿದ್ದು, ತನ್ನ ಸಮುದಾಯಕ್ಕೆ ಒದಗಬಹುದಾದ ಅಪಾಯಗಳನ್ನು ತನ್ನ ಶಕ್ತಿ ಸಾಮರ್ಥ್ಯಗಳಿಂದ; ಶೌರ್ಯ ಸಾಹಸಗಳಿಂದ; ಮುಂದಾಲೋಚನೆಯಿಂದ ಪಾರುಮಾಡುವುದರ ಮೂಲಕ ಆ ಹಿರಿಯ ವ್ಯಕ್ತಿ ಇಡೀ ಸಮುದಾಯದ ಗೌರವಕ್ಕೆ ಪಾತ್ರನಾಗಿರುತ್ತಿದ್ದ ಹಾಗೂ ಇಡೀ ಸಮುದಾಯದ ಮೇಲೆ ತನ್ನ ಹಿಡಿತವನ್ನು ಹೊಂದಿರುತ್ತಿದ್ದ. ಇಂತಹ ಹಿರಿಯ ವ್ಯಕ್ತಿಯ ದೈನಂದಿನ ನಡವಳಿಕೆ, ಚಿಂತನೆ, ಮಾತುಕತೆಗಳು ಮುಂದಿನ ಜನಾಂಗಕ್ಕೆ ಆದರ್ಶಪ್ರಾಯವಾಗಿದ್ದು ಅನುಕರಣೀಯವೆನಿಸುತ್ತಿತ್ತು. ಅವನ ಸುತ್ತ ಒಂದು ಪ್ರಭಾವಿ ಪರಿವೇಷ ಬೆಳೆದು ಅನೇಕ ಕಲ್ಪನೆಗಳಿಗೆ, ಐತಿಹ್ಯಗಳಿಗೆ, ದಂತಕಥೆಗಳಿಗೆ ಅವನು ಕೇಂದ್ರವಾಗಿರುತ್ತಿದ್ದ.

ನಾಗರಿಕತೆಯ ವಿಕಾಸದ ಹಂತದಲ್ಲಿ ಅಲೆಮಾರಿ ಬುಡಕಟ್ಟು ಊರು, ನಗರ ನಿರ್ಮಾಣಗಳಲ್ಲಿ ತೊಡಗಿ ಒಂದು ಕಡೆ ನೆಲೆಸಲು ಆರಂಭಿಸಿದಾಗ, ಕೃಷಿಕ ಸಮೂಹವೊಂದರ ಸೃಷ್ಟಿಯಾಯಿತು. ಭೂಮಿ-ಹೆಣ್ಣುಗಳೆರಡೂ ಆಸ್ತಿಯ ಸ್ವರೂಪವನ್ನು ಪಡೆದು ಶಕ್ತಿಶಾಲಿಯಾದ ವ್ಯಕ್ತಿ ಅವುಗಳ ಒಡೆಯನಾದ. ಇಂತಹ ಒಡೆಯ ತನ್ನ ಬಾಹುಬಲದ ಮೂಲಕ, ಬುದ್ಧಿವಂತಿಕೆಯ ಮೂಲಕ ಇಡೀ ಸಮುದಾಯವನ್ನು ತನ್ನ ಅಧೀನದಲ್ಲಿರಿಸಿಕೊಂಡು ಯಜಮಾನಿಕೆಯ ಪ್ರವೃತ್ತಿಯನ್ನು ರೂಢಿಸಿಕೊಂಡಾಗ ರಾಜಸತ್ತೆಯ ಶ್ರೀಮಂತ ಪ್ರಭುತ್ವದ ಉದಯವಾಯಿತು. ಇಂತಹ

ಸನ್ನಿವೇಶದಲ್ಲಿ ವ್ಯಕ್ತಿ—ಸಮುದಾಯಗಳ ನಡುವಣ ಸಂಘರ್ಷವನ್ನು ನಿವಾರಿಸಲು, ಸಾಮರಸ್ಯವನ್ನು ಸಾಧಿಸಲು ಸಾಮಾಜಿಕ ನೀತಿಯೊಂದರ ಕಲ್ಪನೆ ಮೂಡಿ, ವ್ಯಕ್ತಿ—ಸಮುದಾಯದ ನಡುವಣ ಬಾಂಧವ್ಯ ಅರ್ಥಪೂರ್ಣವಾಗುವಂತೆ ಕುಟುಂಬದಂತಹ ಸಂಸ್ಥೆಗಳು ರೂಪುಗೊಂಡು ವ್ಯಕ್ತಿಯ ಹಿತಾಸಕ್ತಿಗಳ ರಕ್ಷಣೆಗಾಗಿ ಸಮಾಜ ಸೃಷ್ಟಿಸಿದ ವಿಧಿ—ನಿಷೇಧಗಳೇ ಮುಂದೆ ಸೂತ್ರೀಕರಿಸಲ್ಪಟ್ಟು, ಧರ್ಮಸೂತ್ರಗಳಾಗಿ ನಿರೂಪಿತವಾದವು. ಧರ್ಮದ ಈ ನಿಯಮಗಳೇ ಸಮಾಜ ಜೀವನದಲ್ಲಿಯ ಆದರ್ಶಗಳೆಂದು ಗ್ರಹಿಸಲ್ಪಟ್ಟು ಅದರ ಅನುಷ್ಠಾನವೇ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವೆಂಬ ಭಾವನೆ ಮೂಡಿತು. ಧರ್ಮ ಅರ್ಥ ಕಾಮಗಳ ಪರಿಕಲ್ಪನೆಗಳು, ಅವುಗಳ ಅನುಷ್ಠಾನದ ಸಂದರ್ಭದಲ್ಲಿ ವ್ಯಕ್ತಿ ಎದುರಿಸಬಹುದಾದ ಸಮಸ್ಯೆಗಳು ವ್ಯಕ್ತಿ—ಸಮಾಜದ ನಡುವಣ ನಿರಂತರ ಸಂಘರ್ಷವಾಗಿ ಮಾರ್ಪಟ್ಟ ಸನ್ನಿವೇಶದಲ್ಲಿ ಅವು ವಾಸ್ತವ—ಆದರ್ಶಗಳ ನಡುವಣ ಘರ್ಷಣೆಯಾಗಿ ಮಾರ್ಪಟ್ಟಿತು. ಸಾಮಾನ್ಯ ವ್ಯಕ್ತಿಯೊಬ್ಬ ಆ ಆದರ್ಶಗಳ ಎತ್ತರಕ್ಕೆ ಏರಲಾರದೆ ತಮ್ಮ ಮಾನವೀಯ ದೌರ್ಬಲ್ಯಗಳ ನಡುವೆ ಅಳುಕುತ್ತಾ ಸಾಗುತ್ತಿರುವಾಗ, ತಮ್ಮ ಮಧ್ಯೆ ಬದುಕುತ್ತಿರುವ ಅಸಾಧಾರಣ ವ್ಯಕ್ತಿತ್ವ ಒಂದರ ದೃಢತೆ, ಸಂಕಲ್ಪ ಶಕ್ತಿ, ಬೌದ್ಧಿಕ ಪರಿಣತಿ, ದೈಹಿಕ ಸಾಮರ್ಥ್ಯಗಳಿಗೆ ಮರುಳಾಗಿ ಆತನ ವಿಚಾರವಾಗಿ ಮೆಚ್ಚುಗೆಯನ್ನೂ, ತನ್ನ ವಿಚಾರವಾಗಿ ದೀನತೆಯನ್ನೂ ಅನುಭವಿಸುತ್ತ ಅವನನ್ನು ಆರಾಧಿಸಲು ತೊಡಗಿದ. ಆ ಅಸಾಧಾರಣ ವ್ಯಕ್ತಿ ತನ್ನ ಕಾಲದ ಸಾಮಾಜಿಕ ಮೌಲ್ಯಗಳನ್ನು ಒಪ್ಪಿ ತನ್ನ ಬದುಕಿನಲ್ಲಿ ಅನುಸರಿಸುವುದರ ಮೂಲಕ ಅವುಗಳ ಸಂರಕ್ಷಕನಾದ. ಅವನು ತನ್ನ ಕಾಲದ ಮೌಲ್ಯಗಳನ್ನು ವಿರೋಧಿಸುವ ಪ್ರತಿಕೂಲ ಶಕ್ತಿಗಳೊಂದಿಗೆ ಹೋರಾಡುವ ಹಾಗೂ ಸಮಾಜದ ಸ್ವಾಸ್ಥ್ಯವನ್ನು ರಕ್ಷಿಸುವ ರಕ್ಷಕಶಕ್ತಿಯಾಗುತ್ತಾನೆ. ಅಂತಹ ನಾಯಕ ಕೇವಲ ಮಾತುಗಾರನಲ್ಲ; ಕ್ರಿಯಾಶೀಲವ್ಯಕ್ತಿ. ಅವನ ಹೋರಾಟದ ಉದ್ದೇಶ ಸ್ವಾರ್ಥಸಾಧನೆಯಾಗಿರದೆ, ತನ್ನ ಸುತ್ತಮುತ್ತಲಿನ ಜನಸಾಮಾನ್ಯರ ಕ್ಷೇಮಚಿಂತನೆಯೇ ಆಗಿರುತ್ತದೆ. ಸಾಮಾನ್ಯ ವರ್ಗದ ಜನರ ಹಿತಾಸಕ್ತಿಗಳನ್ನು ರಕ್ಷಿಸುವುದರಲ್ಲಿ ಅವನು ಪಡೆದ ಯಶಸ್ಸು ವ್ಯಕ್ತಿಗತ ಗೆಲುವಾಗಿರದೆ, ಒಂದು ಸಮುದಾಯದ ಆಸೆ-ಆಕಾಂಕ್ಷೆಗಳ ಗೆಲುವಾಗಿ ಪ್ರಕಟವಾಗುತ್ತದೆ. ಅಂತಹ ಅಸಾಧಾರಣ ವ್ಯಕ್ತಿಯ ನಡವಳಿಕೆ, ಆದರ್ಶಪ್ರಿಯತೆ, ಶೌರ್ಯ ಸಾಹಸಗಳು ಅವನ ಕಾಲದ ಸಮಾಜದಲ್ಲಿ ಗೌರವಕ್ಕೆ ಪಾತ್ರವಾಗುವುದಷ್ಟೇ ಅಲ್ಲದೆ, ಮುಂದಿನ ಜನಾಂಗವೊಂದರ ಪಾಲಿಗೆ ಇತಿಹಾಸವಾಗಿ ನಿರೂಪಿತವಾಗುತ್ತವೆ.

"ನಾಗರಿಕತೆಯ ವಿಕಾಸದ ಒಂದು ಹಂತದಲ್ಲಿ ಸಮಾಜ ವ್ಯವಸ್ಥೆಗೊಂಡು ಮೌಲ್ಯಗಳು ರೂಪುಗೊಂಡ ಪರಿಸರದಲ್ಲಿ ಯಾವ ವ್ಯಕ್ತಿ ತನ್ನ ಕಾಲದ ಮೌಲ್ಯಗಳ ಪ್ರತಿನಿಧಿಯೆಂಬಂತೆ ಎದ್ದು ನಿಲ್ಲುತ್ತಾನೆಯೋ ಮತ್ತು ವಿರುದ್ಧ ಶಕ್ತಿಗಳೊಡನೆ ಹೋರಾಡಿ ತನ್ನ ಸಮಾಜದ ಆತ್ಮಗೌರವ-ಪ್ರತಿಷ್ಠೆಗಳ ಪ್ರತಿನಿಧಿಯಂತೆ ತೋರುತ್ತಾನೆಯೋ ಅವನು ಆ ಸಮಾಜದ ನಾಯಕನಾಗುತ್ತಾನೆ, ವೀರನಾಗುತ್ತಾನೆ, ಧೈರ್ಯಶಾಲಿಯೂ, ಬುದ್ಧಿವಂತನೂ, ನಿಸ್ವಾರ್ಥನೂ ಆದ ಇಂತಹ ವ್ಯಕ್ತಿ, ಮಾನವ ಸಮಾಜದ ಪ್ರತಿನಿಧಿಯಾಗಿ, ಮಾರ್ಗದರ್ಶಿಯಾಗಿ, ಸಂರಕ್ಷಕ ಶಕ್ತಿಯಾಗಿ, ಆರಾಧ್ಯವ್ಯಕ್ತಿಯಾಗಿ ಗೋಚರಿಸುತ್ತಾನೆ". (ಜಿ. ಎಸ್. ಶಿವರುದ್ರಪ್ಪ, ಮಹಾಕಾವ್ಯ ಸ್ವರೂಪ: ೧೯೭೬, ಪುಟ ೩೪).

ಯಾವುದೇ ಸಮಾಜದಲ್ಲಾಗಲಿ, ಕಾಲದಲ್ಲಾಗಲಿ ಇಂತಹವರ ಸಂಖ್ಯೆ ವಿರಳ. ಅತ್ಯಲ್ಪ ಪ್ರಮಾಣದ ಈ ವ್ಯಕ್ತಿಗಳೇ ನಿಜವಾದ ಅರ್ಥದಲ್ಲಿ ಸಮಾಜದ ಪ್ರಗತಿಗೆ, ಸುಸ್ಥಿತಿಗೆ ಗತಿಬಿಂಬವಾಗುವವರು. ಒಂದು ಯುಗದ ಸತ್ವ ಇಂತಹ ವ್ಯಕ್ತಿಗಳ ಮೂಲಕ ಪ್ರಕಟವಾಗುತ್ತದೆ. ಇತಿಹಾಸದಲ್ಲಿ ಅಂತಹ ವ್ಯಕ್ತಿಗಳು ಶಾಶ್ವತ ಸ್ಥಾನವನ್ನು ಗಳಿಸುತ್ತಾರೆ. ಆದುದರಿಂದಲೇ ಕಾರ್ಲೈಲ್ "ಜಗತ್ತಿನ ಇತಿಹಾಸವೆನ್ನುವುದು ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯೇ ಆಗಿದೆ" ಎಂದು ಅಭಿಪ್ರಾಯಪಡುತ್ತಾನೆ. ಕಾರ್ಲೈಲ್‌ನ ಪ್ರಕಾರ ಇತಿಹಾಸದ ಪ್ರತಿಯೊಂದು ಪ್ರಮುಖ ಘಟ್ಟದಲ್ಲಿಯೂ ಮಹಾತ್ಮನೊಬ್ಬ ತನ್ನ ಕಾಲದ ರಕ್ಷಕನಾಗಿ ಉದ್ಭವಿಸಿ ಅದನ್ನು ಚೈತನ್ಯಯುಕ್ತವಾಗಿಸುತ್ತಾನೆ. ಅವನು ಜನಸಾಮಾನ್ಯರ ದೇಹ-ಆತ್ಮಗಳ ಗುರುವೂ ಚಾಲಕಶಕ್ತಿಯೂ ಆಗಿದ್ದು; ಅವನು ಚಾಣಾಕ್ಷನೂ ದೈವಬಲಸಂಪನ್ನನೂ ಸಹೃದಯಿಯೂ ಆಗಿರುತ್ತಾನೆ. ಅವನ ಚಿಂತನೆಯ ಮಾರ್ಗ ಜನಸಾಮಾನ್ಯರ ಪಾಲಿಗೆ ಅನುಕರಣೀಯವಾಗುತ್ತದೆ. ಅಂತಹ ನಾಯಕನ ಆರಾಧನೆ ಸಹಜವೂ, ಪ್ರಿಯವೂ ಆಗಿರುವುದರಿಂದ ಅವನನ್ನು ಆರಾಧಿಸಲು ಯಾರೂ ಹಿಂಜರಿಯುವುದಿಲ್ಲ. ಅಂತಹ 'ನಾಯಕಾರಾಧನೆ' ಕಾಲ ದೇಶಾತೀತವಾದ ಚಿರಂತನತೆಯನ್ನು ಪಡೆಯುತ್ತದೆ.

ಕಾರ್ಲೈಲ್‌ನ 'ಮಹಾನ್‌ವ್ಯಕ್ತಿ ಸಿದ್ಧಾಂತ'ದ ಪ್ರಕಾರ ನಾಯಕ ಸಮಾಜದ ಅನಿವಾರ್ಯ ಅಂಗವಾಗಿ ಸೃಷ್ಟಿಯಾಗುವುದಿಲ್ಲ; ಅವನು ಸಮಾಜವನ್ನು ತನ್ನ ವಿಚಾರಗಳಿಗೆ ಅನುಗುಣವಾಗಿ ನಿರ್ಮಾಣ ಮಾಡುವ ಸ್ವತಂತ್ರ ವ್ಯಕ್ತಿ; ಅವನು ತನ್ನ ಹೆಗಲಮೇಲೆ ಇಡೀ ವಿಶ್ವದ ಆಗುಹೋಗುಗಳ ಹೊರೆಯನ್ನು ಹೊತ್ತಿರುವವನು. ಮಹಾನ್ ವ್ಯಕ್ತಿ ತನ್ನ ಪರಿಸರ ಹಾಗೂ ಪ್ರಭಾವಗಳನ್ನು ಮೀರಿ ಬೆಳೆಯುವ ಕ್ರಿಯಾಶೀಲನಾದ ಸ್ವತಂತ್ರ ವ್ಯಕ್ತಿಯಾಗಿದ್ದು ಅವನು ಅನನ್ಯನೂ ಮಾನ್ಯನೂ ಆಗಿರುತ್ತಾನೆ. "ಮಹಾನ್ ವ್ಯಕ್ತಿ ಸರ್ವಶ್ರೇಷ್ಠನಾಗಿದ್ದು ಅವನು ತನ್ನ ಕಾಲದ ಸೃಷ್ಟಿಯಾಗಿರದೆ, ಕಾಲದ ಸೃಷ್ಟಿಕರ್ತನಾಗಿರುತ್ತಾನೆ. ಅವನು ಕಾಲಕ್ಕೆ ಅಧೀನನಲ್ಲ; ಕಾಲದ ಒಡೆಯ" [ಕಾರ್ಲೈಲ್‌ಥಾಮಸ್: Sartor Resartus - on Heroes and Hero worship - 1964 - p. 251]

ಕಾರ್ಲೈಲ್‌ನ 'ನಾಯಕ'ನ ಪರಿಕಲ್ಪನೆ ವ್ಯಕ್ತಿ ವಿಶೇಷತೆಯ ಮೇಲೆ ಆಧರಿಸಿದ್ದು ಕುವೆಂಪು ಅವರ 'ವಿಭೂತಿಪೂಜೆ'ಗೆ ಸಂವಾದಿಯಾಗಿದೆ. ಅದು ಏಕಕಾಲದಲ್ಲಿ ಪ್ರಜಾಪ್ರಭುತ್ವ ವಿರೋಧಿಯೂ, ಅವೈಜ್ಞಾನಿಕವೂ ಆಗಿದ್ದು, ಆಧುನಿಕ ಸಮಾಜಶಾಸ್ತ್ರೀಯ ಅಧ್ಯಯನದ ವಿಚಾರಗಳಿಗೆ ವಿರುದ್ಧವೂ ಆಗಿದೆ.

ಸಮಾಜ ವಿಜ್ಞಾನಿಗಳ ದೃಷ್ಟಿಯಲ್ಲಿ ಯಾವ ವ್ಯಕ್ತಿ ತನ್ನ ಬುದ್ಧಿವಂತಿಕೆ ಶಕ್ತಿ ಸಾಮರ್ಥ್ಯಗಳ ಮೂಲಕ ಒಂದು ಸಮುದಾಯದ ಸದಸ್ಯರನ್ನು ಸಂಘಟಿಸಿ, ಉದ್ದೇಶಿತ ಗುರಿಯ ಕಡೆಗೆ ಚಲಿಸುವಂತೆ ನಿರ್ದೇಶಿಸಿ ಕರೆದೊಯ್ಯಬಲ್ಲನೋ ಅವನು ನಾಯಕನೆನಿಸಿಕೊಳ್ಳುತ್ತಾನೆ. ಸಂಘಟನಾಶಕ್ತಿ, ದೂರದರ್ಶಿತ್ವ, ಸಂಚಾಲಕಶಕ್ತಿ ಹಾಗೂ ಆತ್ಮವಿಶ್ವಾಸಗಳು ನಾಯಕನಲ್ಲಿರ ಬೇಕಾದ ಪ್ರಧಾನ ಗುಣಗಳಾಗಿವೆ. ಸಾಮಾಜಿಕವಾಗಿ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಂದಿಲ್ಲೊಂದು

ಬಗೆಯ ಸಹಜ ಕೌಶಲವಿದ್ದು, ಅವನು ಒಂದು ಕ್ಷೇತ್ರದಲ್ಲಿ ನಾಯಕನಾಗಿಯೂ ಮತ್ತೊಂದು ಕ್ಷೇತ್ರದಲ್ಲಿ ಅನುಚರನಾಗಿಯೂ ಇರುತ್ತಾನೆ. ಸಮಾಜದಲ್ಲಿ ಆಗಿಂದಾಗ್ಗೆ ಉಂಟಾಗುವ ಸಾಮಾಜಿಕ, ಆರ್ಥಿಕ ಬದಲಾವಣೆಗಳ ಪರಿಣಾಮವಾಗಿ ಹಾಗೂ ಜೀವನ ಸ್ಥಿತಿಯಲ್ಲಿನ ಸ್ಥಿತ್ಯಂತರಗಳ ಪರಿಣಾಮವಾಗಿ ನಾಯಕತ್ವ ಹಾಗೂ ನಾಯಕಾರಾಧನೆಯ ಪರಿಕಲ್ಪನೆಗಳೂ ಬದಲಾಗುತ್ತವೆ. ಆದರೂ ಒಬ್ಬ ನಾಯಕನಲ್ಲಿರಬೇಕಾದ ಕೆಲವು ವಿಶೇಷ ಲಕ್ಷಣಗಳು ಎಲ್ಲ ಕಾಲದಲ್ಲಿಯೂ ಸಮಾನವಾಗಿದ್ದು ಅವುಗಳನ್ನು ಈ ರೀತಿ ಗುರುತಿಸಬಹುದಾಗಿದೆ.

೧. ನಾಯಕನಿಗೆ ಕೆಲವು ವೈಯಕ್ತಿಕ ಪ್ರತಿಷ್ಠೆಗಳು, ಘನತೆಗಳು ಇರಬೇಕು. ಅವನ ಸಾಧನೆಗಳು, ಜ್ಞಾನದ ಪರಿಣತಿ, ಬಿರುದು ಬಾವಲಿಗಳು, ಪ್ರಶಸ್ತಿಗಳು ಸಮಾಜದಲ್ಲಿ ನಾಯಕನ ಘನತೆ, ಗೌರವಗಳನ್ನು ಹೆಚ್ಚಿಸುತ್ತವೆ ಮತ್ತು ಅವನ ಅನುಚರರಲ್ಲಿ ಅವನು ಗೌರವಕ್ಕೆ ಪಾತ್ರನಾಗುತ್ತಾನೆ.

೨. ನಾಯಕನಲ್ಲಿ ತಾಳ್ಮೆ, ಕಷ್ಟಸಹಿಷ್ಣುತೆ, ವಿಶಾಲವಾದ ಮನಸ್ಸು, ಅಚಲತೆ, ಕಾರ್ಯೋನ್ಮುಖತೆ, ಕಾರ್ಯನಿಷ್ಠೆಗಳಿರಬೇಕು.

೩. ಅವನು ಅಭೇದ್ಯನಾಗಿದ್ದು ಸತ್ಯವ್ರತಿ ಆಗಿರಬೇಕು.

೪. ಧ್ಯೇಯ, ಆತ್ಮವಿಶ್ವಾಸ, ತನ್ನ ಗುರಿಯನ್ನು ಸಾಧಿಸುವಲ್ಲಿ ನಂಬಿಕೆ ಹಾಗೂ ಛಲವನ್ನು ಹೊಂದಿರಬೇಕು.

೫. ಅನುಚರರಿಗಿಂತ ದೂರದೃಷ್ಟಿಯುಳ್ಳವನೂ, ಹೆಚ್ಚು ಬುದ್ಧಿವಂತನೂ ಆಗಿರಬೇಕು.

೬. ಹೂವಿನಷ್ಟು ಮೃದುವಾಗಿದ್ದು, ಸಮಯಬಂದಾಗ ವಜ್ರದಷ್ಟು ಕಠಿಣನಾಗಬೇಕು.

೭. ಅನುಚರರ ಮೌಲ್ಯ, ಮನೋಧರ್ಮ ಮತ್ತು ಅಭ್ಯಾಸಗಳಲ್ಲಿ ಅನನ್ಯನಾಗಿರಬೇಕು.

೮. ಸ್ವಾವಲಂಬನೆ, ಸಮಯಸ್ಫೂರ್ತಿ, ಮಿತ್ರತ್ವ, ವಿಶ್ವಾಸ, ಮುಂದಾಳುತನ ಬಹಿರ್ಮುಖತೆ, ಹಾಸ್ಯ ಪ್ರವೃತ್ತಿ, ಸಂಘಟನಾಶಕ್ತಿಗಳಂತಹ ಧನಾತ್ಮಕ ಅಂಶಗಳಿಂದ ಕೂಡಿದ್ದು, ದ್ವೇಷ, ಅಸೂಯೆ, ಭೀತಿ ಮುಂತಾದ ಸಂಕುಚಿತ ಮನೋಭಾವಗಳಿಂದ ಮುಕ್ತನಾಗಿರಬೇಕು.

ಲಂಬಾಣಿಗರ ಕಸೂತಿ ಕಲೆ

—ಮಹಾದೇವಿಬಾಯಿ

ಸೂಜಿ ಹಾಗೂ ದಾರಗಳಿಂದ ಬಟ್ಟೆಯ ಮೇಲೆ ತಮ್ಮ ಭಾವವನ್ನು ಮೂಡಿಸುವ ಚಿತ್ರವಿನ್ಯಾಸವೇ ಕಸೂತಿಕಲೆ. ಇದು ಬಹಳ ಪ್ರಾಚೀನವಾದ ಕಲೆ. ಶುಭ್ರವಾದ ಬಟ್ಟೆಯ ಮೇಲೆ ಬಣ್ಣ ಬಣ್ಣದ ದಾರಗಳಿಂದ ಹಾಕಿದ ಕಸೂತಿ ವಿನ್ಯಾಸ ತುಂಬಾ ಕಲಾತ್ಮಕವಾಗಿರುತ್ತದೆ. ಹೂವು, ಗಿಡ, ಬಳ್ಳಿ, ಪ್ರಾಣಿ, ಪಕ್ಷಿ ಮೊದಲಾದ ಪ್ರಕೃತಿಯಲ್ಲಿನ ಚಿತ್ರಗಳು ಕಸೂತಿ ಕಲೆಗೆ ಸ್ಫೂರ್ತಿಯ ಸೆಲೆಯಾಗಿ ಪರಿಣಮಿಸಿವೆ.

ಕಸೂತಿಯು ಒಂದು ಮನಮೋಹಕ ಕಲೆ. ರಂಗುರಂಗಿನ ದಾರಗಳಿಂದ ಬಣ್ಣಬಣ್ಣದ ತುಂಡುಬಟ್ಟೆಗಳನ್ನು, ಗಾಜಿನ ತುಂಡುಗಳನ್ನು ಪ್ರಿಯವಾದ ಸಣ್ಣ ಸಣ್ಣ ವಸ್ತುಗಳನ್ನು ಬಟ್ಟೆಗಳ ಮೇಲೆ ದಾರದಿಂದ ಬಂಧಿಸಿ ಚಿತ್ತಾರವಾಗುವಂತೆ ಮಾಡುವ ಕಲೆಯೇ ಕಸೂತಿ. ಉತ್ತರಭಾರತದ ಗರಾಸಿಯಾ, ಸೋದಾ, ಜಾಟ್ಸ್, ರೋಹಸಾಸ್, ಧಾನೇತಾಜಾಟ್ಸ್ ಜನರು ಮತ್ತು ಗುಜರಾತ್ ರಾಜಸ್ಥಾನ ಮಹಿಳೆಯರು ತಮ್ಮ ಬಟ್ಟೆಗಳ ಮೇಲೆ ಹಾಕಿಕೊಳ್ಳುವ ಕಸೂತಿಯು ಹೆಚ್ಚು ಪ್ರಸಿದ್ಧವಾಗಿದೆ.

ಕಸೂತಿಕಲೆಯಲ್ಲಿ ಗುಜರಾತಿನ ಕಚ್ ಪ್ರಾಂತ್ಯದ ಹಿರಿಮೆ ಹೆಚ್ಚಿನದು. ಬಲೂಚಿಸ್ಥಾನದಿಂದ ಬಹು ಹಿಂದೆ ಜಾಟ್ ಜನಸಮುದಾಯ ಈ ಕಲೆಯನ್ನು ತಮ್ಮೊಂದಿಗೆ ಭಾರತಕ್ಕೆ ತಂದಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯ. ಬಹುಶಃ ಕಸೂತಿ ಕಲೆಯ ಪರಂಪರೆಗೆ ಭಾರತದಲ್ಲಿ ನಾಂದಿ ಹಾಡಿದವರು ಕಚ್ ಚಮ್ಮಾರರು. ಹಲವಾರು ಶತಮಾನಗಳ ಹಿಂದೆ ತೊಗಲಿನ ಉತ್ಪನ್ನಗಳ ಮೇಲೆ ಸುಂದರವಾದ ಚಿನ್ನ ಬೆಳ್ಳಿಯ ಕಸೂತಿಯನ್ನು ಅವರು ಹಾಕುತ್ತಿದ್ದರು. ಈ ಸಮುದಾಯದ ಕಸೂತಿ ಕಲೆಯನ್ನು ಕಂಡು ಬೆರಗಾಗಿ ಹದಿಮೂರನೇ ಶತಮಾನದಲ್ಲಿ ಭೇಟಿಯನ್ನಿತ್ತ ಮಾರ್ಕ್‌ಪೋಲೋ "ಅವರ ಈ ಕೌಶಲ್ಯಕ್ಕೆ ಸರಿಸಾಟಿಯಾಗುವಂತಹದ್ದು ವಿಶ್ವದಲ್ಲಿಯೇ ಇಲ್ಲ" ಎಂದು ಪ್ರಶಂಸಿಸಿದ್ದಾರೆ. ಕಚ್ ಚಮ್ಮಾರರ ಚರ್ಮದ ಮೇಲಿನ ಕಲೆಯ ಪ್ರವೀಣತೆಯು ಕಾಲಕ್ರಮದಲ್ಲಿ ಬಟ್ಟೆಗಳ ಮೇಲಿನ ಕಸೂತಿಗೆ ಪ್ರೇರಣೆಯಾಗಿರಬೇಕು. ಮುಂದೆ ಅದು ಭಾರತದ ಇತರೆ ಸಮುದಾಯಗಳಿಗೂ ವ್ಯಾಪಿಸಿರಬೇಕು.

ಮಹಿಳೆಯರ ಮನಃಶ್ಶಾಂತಿಯ ಪ್ರತೀಕವಾಗಿ, ಮಂಗಳಕರ ಚಿಹ್ನೆಯಾಗಿ, ಗೃಹಲಂಕರಣ ವಸ್ತುವಾಗಿ ಕಸೂತಿಕಲೆ ಶೋಭಿಸುತ್ತದೆ. ಆತ್ಮದ ಅಭಿವ್ಯಕ್ತಿಗೆ ಕಸೂತಿಕಲೆ ಒಂದು ಮಾಧ್ಯಮ. ಸೃಷ್ಟ್ಯಾತ್ಮಕ ಕಲೆ. ಮಂಗಳಕರ, ಅಲಂಕಾರಿಕ, ಶುಭ, ಸೌಭಾಗ್ಯ, ಜೀವನಶ್ರದ್ಧೆ ತೋರುವ ಮಧ್ಯವರ್ತಿ ಇದಾಗಿದೆ. ಈ ಕಲೆಯಲ್ಲಿ ಮೈಮರೆತ ಮಹಿಳೆ ಕೆಲಕಾಲವಾದರೂ ತನ್ನ ದಿನನಿತ್ಯದ ಜಂಜಡಗಳಿಂದ ಮುಕ್ತಳಾಗಿರಬಲ್ಲಳು. ಅವಳ ವಿರಾಮ ಕಾಲದ ಕಲೆಯಾಗಿ, ಆಯಾ ಸಮುದಾಯದ ಧಾರ್ಮಿಕ ಸಾಮಾಜಿಕ ಭಾವನೆಗಳ ಪ್ರತಿನಿಧಿಯಾಗಿ, ಅವರ ನಂಬಿಕೆ ಆಚಾರ-ವಿಚಾರಗಳನ್ನು ಪ್ರಕಟಪಡಿಸುವ ಮಾಧ್ಯಮವಾಗಿ ಆಲಂಕಾರಿಕವಾಗಿ ಹೊರಹೊಮ್ಮುವ ಈ ಕಲೆ, ಮಹಿಳೆಯ ಒಟ್ಟು ಕಲ್ಪನೆ, ಧರ್ಮ, ಸಂಸ್ಕಾರಗಳು ಅವಳ ಕಸೂತಿಕಲೆಯಲ್ಲಿ ವ್ಯಕ್ತಗೊಂಡಿವೆ.

ಸಾಮಾನ್ಯವಾಗಿ ಕಸೂತಿ ಮತ್ತು ಹೆಣಿಗೆ (ಹೆಣಿಕೆ) ಯನ್ನು ಒಂದೇ ಅರ್ಥದಲ್ಲಿ ಬಳಸಲಾಗುತ್ತಿದ್ದರೂ, ಹೊಲಿಗೆ ಕಲೆಯ ಮುಂದುವರಿಕೆ ಹೆಣಿಗೆಯೆನಿಸಿದೆ. ಕಸೂತಿ ಅಥವಾ ಹೆಣಿಗೆ ಹಾಕುವ ವಿಧಾನದಲ್ಲಿ ಎರಡು ಪ್ರಕಾರಗಳನ್ನು ಗುರುತಿಸಲಾಗುತ್ತಿದ್ದು, ಕೈ ಕಸೂತಿಯು ಜನಪದ ಮಾದರಿಯದಾದರೆ, ಯಂತ್ರ ಕಸೂತಿಯು ನಾಗರಿಕ ಮಾದರಿಯದಾಗಿದೆ.

ಲಂಬಾಣಿ ಜನಪದ ಕಲೆಗಳಲ್ಲಿ ಕಸೂತಿ ಕಲೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಲಂಬಾಣಿಗರು ಕಸೂತಿ ಕಲೆಗೆ ತಮ್ಮ 'ಗೋರ್‌ಬೋಲಿ' ಭಾಷೆಯಲ್ಲಿ 'ಖೀಲಣ್', 'ಲೂಣ್' ಎಂದು ಕರೆಯುತ್ತಾರೆ. ಲಂಬಾಣಿ ಸ್ತ್ರೀಯರ ಪೋಷಾಕುಗಳೆಂದರೆ ಕಸೂತಿ ಕಲೆಯೇ ಮೈವೆತ್ತಂತಿರುತ್ತದೆ. ಲಂಬಾಣಿ ಸ್ತ್ರೀಯರು ಬಟ್ಟೆಗಳ ಮೇಲೆ ಬಣ್ಣ ಬಣ್ಣದ ಎಳೆಗಳಿಂದ ಕಸೂತಿ ಹಾಕುತ್ತಾರೆ. ಅವರಿಗೆ ಸ್ವಲ್ಪ ಬಿಡುವು ದೊರೆತರೂ ಕಸೂತಿ ಮಾಡುತ್ತಿರುತ್ತಾರೆ.

ಸೂಜಿಯು ಲಂಬಾಣಿ ಮಹಿಳೆಯ ಒಡನಾಡಿ. ಇವರು ತಮ್ಮ ಪೋಷಾಕುಗಳಿಗೆ ಕನ್ನಡಿ, ಕವಡೆ, ತಗಡಿನ ಗುಂಡಿ, ಸತು, ಕಾಸಿನ ಬಿಲ್ಲೆ, ಹಿತ್ತಾಳೆ ಮೊದಲಾದ ಲೋಹಗಳನ್ನು ಸೇರಿಸಿ ಪಳಪಳನೆ ಹೊಳೆಯುವಂತೆ ಕಸೂತಿ ಕೆಲಸ ಮಾಡಿ ಹೊಲಿದು ಧರಿಸಿಕೊಳ್ಳುತ್ತಾರೆ. ಈ ಬಗೆಯ ಅವರ ಪೋಷಾಕುಗಳು ನಿಜಕ್ಕೂ ಆಕರ್ಷಕವಾಗಿವೆ. ಕಸೂತಿಯ ನಯಗಾರಿಕೆ, ಅಂದ-ಚೆಂದ, ಕಲ್ಪನಾ ಸಾಮರ್ಥ್ಯ, ಸಾಧನೆ ಅದ್ಭುತವಾಗಿದೆ. ಕಸೂತಿಯು ಇಂದು ಪರಪ್ರಾಂತ್ಯದವರಿಂದ, ಪಾಶ್ಚಾತ್ಯರಿಂದ ಮನ್ನಣೆ ಗಳಿಸಿದೆ.

ಲಂಬಾಣಿ ಸಮುದಾಯದಷ್ಟೇ ಪ್ರಾಚೀನ ಇತಿಹಾಸ ಅವರ ಕಸೂತಿ ಕಲೆಗೂ ಇದೆಯೆಂಬುದನ್ನು ಖಚಿತವಾಗಿ ಹೇಳಬಹುದಾದರೂ ಅವರ ಮೂಲ ಉಡುಪು ಅನ್ಯ ಸಮುದಾಯದವರಂತೆ ಬೇರೆಯೇ ಇದ್ದಿರಬೇಕೆಂಬುದು ಕೆಲ ವಿದ್ವಾಂಸರ ಅಭಿಪ್ರಾಯ. ಇದಕ್ಕೆ ಪೂರಕವೆಂಬಂತೆ ಅವರಲ್ಲೊಂದು ಐತಿಹ್ಯ ಹೀಗಿದೆ:

ಬಹಳ ಹಿಂದೆ ಒಂದು ಪಟ್ಟಣದ ಗಡಿಯಲ್ಲಿ ಲಂಬಾಣಿಗರು ಬಿಡಾರ ಹೂಡಿದ್ದರು. ಪ್ರತಿದಿನ ಲಂಬಾಣಿ ಮಹಿಳೆಯರು ನೀರಿಗಾಗಿ ಹೊಳೆಯಲ್ಲಿ ಗೇಣಿ ಅಥವಾ ಒರತೆ ತೆಗೆದು, ಮಡಕೆಯ ಬಾಯಿಗೆ ಒಂದರ ಮೇಲೊಂದರಂತೆ ಏಳುಬಟ್ಟೆಗಳನ್ನಿಟ್ಟು ಗೇಣಿಯಲ್ಲಿನ ನೀರು ಸೋಸಿ ಮನೆಗೆ

ತರುತ್ತಿದ್ದರು. ಹೀಗಿರುವಾಗ ಒಮ್ಮೆ ಆ ಪಟ್ಟಣದ ಬಾಚ್ಯ(ರಾಜ) ಇವರು ನೀರು ತರುವುದನ್ನು ಕಂಡು ವಿಸ್ಮಿತನಾಗಿ, 'ಏನಾದರಾಗಲಿ ಈ ಸಮುದಾಯದ ಹೆಣ್ಣು ಮಗಳನ್ನು ಮದುವೆಯಾಗಬೇಕೆಂದು' ಮನಸ್ಸಿನಲ್ಲಿಯೇ ನಿರ್ಧರಿಸಿ, ಲಂಬಾಣಿ ನಾಯಕನನ್ನು ಕರೆದು 'ನಿಮ್ಮ ಕುಲದ ಒಬ್ಬ ಹೆಣ್ಣು ಮಗಳನ್ನು ನನಗೆ ಮದುವೆ ಮಾಡಿಕೊಡಿ' ಎಂದು ಕೇಳಿಕೊಂಡನು. ಲಂಬಾಣಿ ನಾಯಕ ಪರಜಾತಿಯವರಿಗೆ ಯಾವುದೇ ಕಾರಣಕ್ಕೂ ಹೆಣ್ಣು ಕೊಡುವುದಿಲ್ಲವೆಂದು ನೇರವಾಗಿ ಹೇಳಲಾಗಿ, ರಾಜ ಅವರನ್ನು ವಿಧವಿಧವಾಗಿ ಹಿಂಸೆಗೆ ಗುರಿಪಡಿಸಿದನು. ಹಿಂಸೆ ತಾಳಲಾರದೆ ಕೊನೆಗೆ, ಲಂಬಾಣಿ ನಾಯಕ ಕೆಲವು ಷರತ್ತುಗಳೊಂದಿಗೆ ಹೆಣ್ಣು ಕೊಡಲು ಒಪ್ಪಿದನು. ಮದುವೆಗೆ ಮುಂಚೆ ಒಂದು ದಿನ ರಾಜನಿಗೆ ವಿಷದ ಸಾರಾಯಿ ಕುಡಿಸಿ ಆತ ಮೂರ್ಛೆ ಹೋಗುತ್ತಿದ್ದಂತೆ ತಮ್ಮವರನ್ನೆಲ್ಲ ಕರೆದುಕೊಂಡು ಆ ಪಟ್ಟಣ ಬಿಟ್ಟು ಕಾಡಿನ ಹಾದಿ ಹಿಡಿದರು. ಕಾಡಿನಲ್ಲಿ ಎಲ್ಲರೂ ಒಂದೆಡೆ ಕುಳಿತು ಸಮಾಲೋಚಿಸಿ ಒಂದು ತೀರ್ಮಾನಕ್ಕೆ ಬಂದರು. ಅದರಂತೆ ಬಾಚ್ಯ (ರಾಜ)ನೇನಾದರೂ ಬದುಕಿದರೆ ನಮ್ಮ ಕುಲದವರನ್ನು ಎಲ್ಲಿದ್ದರೂ ಬಿಡಲಾರ. ಆದುದರಿಂದ ನಾವು ನಮ್ಮ ಉಡುಗೆತೊಡುಗೆಗಳನ್ನು ಸಂಪೂರ್ಣವಾಗಿ ಬದಲಾಯಿಸಿಕೊಳ್ಳೋಣ. ಈ ಬದಲಾವಣೆಯಿಂದ ರಾಜನಿಗೆ ನಾವೇ ಲಂಬಾಣಿಗರೆಂಬುದು ತಿಳಿಯುವುದಿಲ್ಲವೆಂದು ತೀರ್ಮಾನಿಸಿದರು. ಆ ಕ್ಷಣದಿಂದಲೇ ಲಂಬಾಣಿ ಮಹಿಳೆಯರು ತಮ್ಮ ಜೊತೆಯಲ್ಲಿದ್ದ ತುಂಡು ತುಕಡಿ ಬಟ್ಟೆಗಳನ್ನೇ ಸೇರಿಸಿ ಒಂದು ಗಿಡದ ಹೂವು (ಸೊಕಣ್ಯಾರ್ ಫೂಲ್)ನ್ನು ನೋಡಿ ಅದರಂತೆ ಗೊಂಡೆ (ಫುಂದಾ) ಕಟ್ಟಿ ಬಟ್ಟೆ ಹೊಲಿಯಲು ಪ್ರಾರಂಭಿಸಿ, ಅವರು ಬೇರೊಂದು ಪಟ್ಟಣ ಸೇರುವಷ್ಟರಲ್ಲಿ ಅವರ ವೇಷಭೂಷಣ ಸಂಪೂರ್ಣ ಬೇರೆಯಾಗಿ ವಿಶೇಷವಾದ ಉಡುಪಾಯಿತು. ಅನಂತರದಲ್ಲಿ ಅದನ್ನೇ ಮುಂದುವರಿಸಿಕೊಂಡು ಬಂದುದರ ಬಗೆಗಿನ ಮಾಹಿತಿ ಅವರ ಮೌಖಿಕ ಸಾಹಿತ್ಯದಲ್ಲಿ ದೊರೆಯುತ್ತದೆ. ಹೀಗೆ ಉಡುಗೆ ಬದಲಾಯಿಸಿಕೊಂಡ ಲಂಬಾಣಿಗರ ಮೊದಲಿನ ವೇಷ–ಭೂಷಣ ಬೇರೆಯೇ ಇದ್ದಿರಬೇಕು. ಅವರು ಯಾವ ಉಡುಪಿನಿಂದ ಲಂಬಾಣಿಗರೆಂದು ಗುರುತಿಸಲ್ಪಡಬಾರದೆಂದು ಇಚ್ಛೆಪಟ್ಟರೋ ಇಂದು ಅದೇ ಉಡುಪಿನಿಂದ ಅವರು ಲಂಬಾಣಿಗರೆಂದು ಗುರುತಿಸಲ್ಪಡುತ್ತಿರುವುದು ವಿಷಾದದ ಸಂಗತಿ.


ಲಂಬಾಣಿ ಮಹಿಳೆಯರಿಗೆ ಕಸೂತಿ ಕಲೆಯು ರಕ್ತಗತವಾಗಿ ಬಂದಿದೆ. ಎಂಟು-ಹತ್ತು ವರ್ಷದ ಹೆಣ್ಣು ಮಗುವು ತನ್ನ ತಾಯಿಯೊಂದಿಗೆ ಸೂಜಿಯನ್ನು ಹಿಡಿದುಕೊಂಡು ಕಸೂತಿ ಹಾಕಲು ಪ್ರಾರಂಭಿಸುತ್ತಾಳೆ. ಹತ್ತು ವರ್ಷ ದಾಟಿದ ಹೆಣ್ಣು ಮಗು ಮಹಿಳೆಯರ ಉಡುಪಿನ ಕೆಲವು ಸಣ್ಣ ಸಣ್ಣ ಭಾಗಗಳಿಗೆ ಸ್ವತಂತ್ರವಾಗಿ ಕಸೂತಿ ಹಾಕುವುದನ್ನು ಕಲಿಯುತ್ತಾಳೆ. ಮಹಿಳೆಯರೇ ಕಸೂತಿ ಕಲೆಯನ್ನು ಮೊದಲಿನಿಂದ ಬಿಡಿಸುತ್ತಿದ್ದುದರಿಂದ ಅದು ಅವರದೇ ಕಲೆ ಎನ್ನುವಷ್ಟರ ಮಟ್ಟಿಗೆ ಪ್ರಸಿದ್ಧಿ ಪಡೆದಿದೆ. ಆದರೆ ಅಪರೂಪವಾದರೂ ಪುರುಷರು ಎತ್ತುಗಳ ಮೇಲೆ ಹಾಕುವ ಜೂಲ ಹಾಗೂ ಗೊರವಯ್ಯಗಳು ತೊಡುವ ವೇಷಭೂಷಣಗಳಲ್ಲಿ ಕಸೂತಿ ಹಾಕುತ್ತಾರೆ.

ಲಂಬಾಣಿಗಳ ಕಸೂತಿಯ ಕೆಲ ವಿಧಗಳನ್ನು ಪರಿಚಯಿಸಿಕೊಳ್ಳಲು ಈ ಕೆಳಗೆ ಕಾಣಿಸಿರುವ ಕೆಲವು ವಿನ್ಯಾಸಗಳನ್ನು ಗಮನಿಸಬಹುದು.

ಲಂಬಾಣಿಗರ ಪೋಷಾಕುಗಳಲ್ಲಿ ಪ್ರಮುಖವಾದವುಗಳೆಂದರೆ ಲಹಂಗ (ಪೇಟಿಯಾ), ಕುಪ್ಪಸ (ಕಾಂಚೋಳಿ), ಮೇಲ್ಮುಸುಕು (ಛಾಂಟಿಯಾ). ಇವಲ್ಲದೆ ಮಂಡೋಘುಂಘಟೋ, ಛಡೋ ಘುಂಘಟೋ, ಆಡೋಛೇಡಾ, ಮಂಡಿಕಾಂಚೋಳಿ. ಇದು ಮದುವೆ ಸಮಾರಂಭದಲ್ಲಿ ಗಂಡಿನ ಕಡೆಯವರು ವಧುವಿಗಾಗಿ ತರುವ ಕುಪ್ಪಸ. ಬಾಂಡೋ ಪೇಟಿಯಾ – ಇದು ಕೂಡ ವರನ ಕಡೆಯವರು ವಧುವಿಗಾಗಿ ತರಬೇಕಾದ ಲಹಂಗ. ಗಣ್ನೋ–ಕಸೂತಿ ಮಾಡಿರುವ ಕಲಾತ್ಮಕವಾಗಿರುವ ಚೌಕಾಕಾರದ ವಸ್ತ್ರ. ಫುಲ್ಯಾ – ಕಸೂತಿ ಹಾಕಿರುವ ಚೌಕ. ವಾಳೇರಗಾಲ-ಮದುಮಗಳು ನೀರು ತರುವಾಗ ಬಳಸಬೇಕಾದ ಸಿಂಬಿ ಇವು ಪ್ರಮುಖವಾದವು.

ಲಹಂಗ (ಪೇಟಿಯಾ) – ಈ ಲಂಗವನ್ನು ಸಿದ್ಧಪಡಿಸಲು ಒಂದು ಗೇಣು ಅಗಲಳತೆಯ ಹನ್ನೆರಡು ಮೊಳ ಉದ್ದದ ಕೆಂಪು ಬಟ್ಟೆ (ರಾತಡೋ ಛಾಂಟಿಯಾರ್ ಘೇರೋ), ಒಂದು ಗೇಣು ಅಗಲಳತೆಯ ಹನ್ನೆರಡು ಮೊಳ ಉದ್ದದ ಕಪ್ಪು ಬಟ್ಟೆ (ಕಾಳೋ ಛಾಂಟಿಯಾರ್ ಘೇರೋ), ಒಂದು ಗೇಣು ಅಗಲಳತೆಯ ಹನ್ನೆರಡು ಮೊಳ ಉದ್ದದ ನೀಲಿ ಅಥವಾ ಬಿಳಿಯ ಬಟ್ಟೆ ಹಾಗೂ ಎರಡು ಅಂಗುಲಳತೆಯ ಹನ್ನೆರಡು ಮೊಳ ಉದ್ದದ ಪಟ್ಟಿ (ಲಾವಣ್ಯ) ಮತ್ತೆ ಮೇಲೊಂದು ದಪ್ಪನೆಯ ನಡುಪಟ್ಟಿ (ಲೇಪೋ), ಜೊತೆಗೆ ಬೇರೆ ಬೇರೆ ಬಣ್ಣದ ಇತರ ಬಟ್ಟೆಗಳು ಬೇಕು. ಐದು ತರದ ಸೂಜಿ ನಡುನಡುವೆ ಇನ್ನಿತರ ಬಣ್ಣದ ದಾರ ಬೇಕಾಗುತ್ತದೆ. ಮೊದಲಿಗೆ ಕೆಂಪುಬಟ್ಟೆಯನ್ನು ಕೈಯಿಂದ ಅಥವಾ ಕುಡುಗೋಲಿನಿಂದ ಹರಿದುಕೊಂಡು ಈ '∧' ಆಕಾರದಲ್ಲಿ ಕಸೂತಿ ಹಾಕುತ್ತಾರೆ. ತರತರದ ಬಟ್ಟೆಗಳನ್ನಿಟ್ಟುಕೊಂಡು ಇದರೊಟ್ಟಿಗೆ ಕವಡೆ, ಕನ್ನಡಿ, ತಗಡಿನ ಗುಂಡಿ, ಕಾಸಿನ ಬಿಲ್ಲೆ, ಸತು, ಹಿತ್ತಾಳೆಯ ಲೋಹ – ಇವನ್ನೆಲ್ಲ ಸೇರಿಸಿ ಕಸೂತಿ ಹಾಕುತ್ತಾರೆ. ಇದರಲ್ಲಿ ಲಂಗದ ನಡುಪಟ್ಟಿ (ಲೇಪೋ) ಹೊಲಿಯಲು ಒಂದು ತಿಂಗಳ ಸಮಯ ಬೇಕಾಗುತ್ತದೆ. ಪೇಟಿಯಾಗೆ ಗೊಂಡೆ (ಫುಂದಾ) ಕಟ್ಟಿ ಕಸೂತಿ ಮಾಡುತ್ತಾರೆ. ಪೇಟಿಯಾ ಅಂದರೆ ಲಂಗದ ಕೆಳಭಾಗದ ಅಂಚು (ಘೇರೋ) ಹೊಲಿಯಲು ಹದಿನೈದು ದಿನಗಳಾದರೂ ಬೇಕಾಗುತ್ತದೆ. 'ಲಾವಣ್ಯ' ಹೊಲಿದು, 'ಚೀಣ್ ಬಾಂದೇರೋ' ಮಾಡಿ 'ಡೋರ್' ಅಥವಾ 'ಸಡಕ್' (ಲಾಡಿ) ಹೊಲಿದು ಲಾಡಿಯಲ್ಲಿ ಕವಡೆಗಳನ್ನು ಸೇರಿಸಿ ಕಸೂತಿ ಹಾಕುತ್ತಾರೆ.

ಕುಪ್ಪಸ (ಕಾಂಚೋಳಿ) ಸಿದ್ಧಪಡಿಸಲು ಎದೆ ಅಳತೆಯ ಪಟ್ಟಿ (ಛಾತೀರ ಪೇಟ್), ಹೊಟ್ಟೆಯಳತೆಯ ಪಟ್ಟಿ, ತೋಳುಪಟ್ಟಿ, ಬೆನ್ನಿನ ಎರಡೂ ಕಡೆಗೆ ಮೂರು ಅಂಗುಲಳತೆಯ ಪಟ್ಟಿ (ಕಡಪಾ) ಬೇಕಾಗುತ್ತದೆ. ಅಲ್ಲದೆ ಎದೆಯ ಮೇಲೆ ಎರಡೂ ಕಡೆಗಳಲ್ಲಿ 'ಕಾಂಟಲಿ', ಎಡಗಡೆ ತೋಳಿನ ಮೇಲೆ 'ಖವ್ಯಾ', ಕುಪ್ಪಸದ ತುಂಬೆಲ್ಲ ಅಲ್ಲಲ್ಲಿ ಚಿಕ್ಕ ಚಿಕ್ಕ ಕನ್ನಡಿ, ತಗಡಿನ ಗುಂಡಿ, ಉಣ್ಣೆಯ ಗೊಂಡೆ (ಝುಂಡಾ) ಹಾಗೂ ಕಲಾತ್ಮಕವಾದ ಕಸೂತಿ ಕೆಲಸದ ಅಲಂಕಾರದ ಜೊತೆಗೆ ಅದರ ಅಂಚಿನಲ್ಲಿ ಚಿಕ್ಕ ಚಿಕ್ಕ ಗೆಜ್ಜೆಸರಗಳನ್ನು ಜೋಡಿಸುತ್ತಾರೆ. ಕುಪ್ಪಸಕ್ಕೆ ಕಾಂಕಿ, ಛಾಯಾ, ಕಡಪ, ಪೇಟಿ, ಕಲ್ಹಣಿ (ಚಿತ್ರ ೧). ಲಂಬಾಣಿ ಭಾಷೆಯಲ್ಲಿ 'ಮಾಕಿ' ಎಂದರೆ 'ನೊಣ' ಎಂದರ್ಥ. ನೊಣದ ರೀತಿಯ




ಚಿತ್ರ ೧. ಕಲ್ಹಣಿ


ಕಸೂತಿ ವಿನ್ಯಾಸಕ್ಕೆ ಮಾಕಿ ಎನ್ನುತ್ತಾರೆ. (ಚಿತ್ರ ೨) 'ಭುರ್‍ಯಾ' ಎಂದರೆ ಅವರ ಮೂಗಿನ ಆಭರಣ (ಚಿತ್ರ ೩). ನಕ್ರ, (ಚಿತ್ರ ೪) ಕಟ್ಟಾಮೊಡೇರೋ ಎರಡು ರೀತಿಯ ಬಣ್ಣದ ಬಟ್ಟೆಗಳನ್ನು ಸೇರಿಸಿ ΛΛΛΛΛΛ ಈ ರೀತಿ ಹೊಲಿಯುವುದು. ಹೀಗೆ ಬಗೆಬಗೆಯ ವಿನ್ಯಾಸಗಳಿಂದ ಕಸೂತಿ ಹಾಕಿ ಅದಕ್ಕೆರಡೆರಡು ಕವಡೆ ಸೇರಿಸಿ ಹೊಲಿಯುತ್ತಾರೆ. ಈ ಕುಪ್ಪಸ ಸಿದ್ಧಪಡಿಸಲು ಹದಿನೈದರಿಂದ ಇಪ್ಪತ್ತು ದಿನ ಬೇಕಾಗಬಹುದು. ಆದರೆ ಇವರ ಕುಪ್ಪಸದ ಬೆನ್ನಿನ ಭಾಗ ತೆರೆದಿರುತ್ತದೆ. ಇದೊಂದು ಅಪೂರ್ಣ ಉಡುಗೆ.



ಚಿತ್ರ ೨. ಮಾಕಿ



ಚಿತ್ರ ೩. ಭುರ್‍ಯಾ



ಚಿತ್ರ ೪. ನಕ್ರ

ಮೇಲ್ಮುಸುಕು (ಭಾಂಟಿಯಾ) ಸಿದ್ಧಪಡಿಸಲು ಐದು ಮೊಳ ಉದ್ದದ ಕೆಂಪು ಅಥವಾ ಹಸಿರುಬಟ್ಟೆ. ಅದರ ಮೇಲೆ ಕನ್ನಡಿ ಹಾಕಿ ಕಸೂತಿ ಮಾಡಿದ ಐದು ಚೌಕಾಕಾರದ ಒಂದೇ ಪ್ರಮಾಣದ ಹೂವುಗಳು (ಪಾಂಚ್‌ಫೂಲ್), ಎರಡಂಗುಲ ಅಳತೆಯ ಎರಡು ಪಟ್ಟಿ (ಫಾಟಾ) ಹಾಗೂ ಒಂದು ಭಾರವಾದ ದಪ್ಪನೆಯ ಸೆರಗು (ಘುಂಘಟೋ) ಜೋಡಿಸುತ್ತಾರೆ. ಈ ಸೆರಗನ್ನು ಅತ್ಯಂತ ಕಲಾತ್ಮಕವಾಗಿ ಕನ್ನಡಿ ಜೋಡಿಸಿ ಕಸೂತಿ ಮಾಡಿರುತ್ತಾರೆ. ಜೊತೆಗೆ ಅಲ್ಲಲ್ಲಿ ಗುಂಡಿ, ಗೊಂಡೆ, ಬೆಳ್ಳಿಗೆಜ್ಜೆ ಹಾಗೂ ಹಳೆಯ ನಾಣ್ಯದ ಬಿಲ್ಲೆಗಳನ್ನು ಸಾಲುಸಾಲಾಗಿ ಜೋಡಿಸಿ ಭಾರವಾಗುವಂತೆ ಮಾಡಿರುತ್ತಾರೆ. ಬಹುಶಃ ತಲೆಯ ಮೇಲಿನ ಈ ಸೆರಗು ಕೆಳಗೆ ಬೀಳಬಾರದೆಂಬುದೇ ಇಲ್ಲಿನ ಮುಖ್ಯ ಆಶಯವಾಗಿದೆ. ಮೇಲ್ಮುಸುಕಿನ ಒಡಲೊಳಗೆ ಅಲಂಕಾರಕ್ಕಾಗಿ ಅಲ್ಲಲ್ಲಿ ಬಣ್ಣಬಣ್ಣದ ತ್ರಿಕೋನಾಕಾರದ ತುಂಡುತುಕಡಿಗಳನ್ನು (ಖಾಂಪಲಿ) ಹಚ್ಚಿರುತ್ತಾರೆ.

ಸಾಮಾನ್ಯವಾಗಿ ಒಬ್ಬ ಲಂಬಾಣಿ ಮಹಿಳೆ ಈ ರೀತಿಯ ಉಡುಪನ್ನು ಸಿದ್ಧಪಡಿಸಲು ಎರಡರಿಂದ ಮೂರು ತಿಂಗಳ ಸಮಯ ತೆಗೆದುಕೊಳ್ಳುತ್ತಾಳೆ. ಈ ಮೇಲೆ ಹೇಳಿದ ಪೇಟಿಯಾ, ಕಾಂಚೋಳಿ, ಭಾಂಟಿಯಾ ಇವು ಮುತ್ತೈದೆಯರು ಧರಿಸುವ ಉಡುಪುಗಳು. ಹಾಗೆಯೇ ಮಂಡಿಕಾಂಚೋಳಿ, ಬಾಂಡೋಪೇಟಿಯಾ – ಇವು ಮದುಮಗಳು ಧರಿಸಬೇಕಾದ ಉಡುಗೆಗಳು. ಅದರಂತೆ ಕನ್ಯೆಯಾದವಳ ಕಾಲಿನಲ್ಲಿ ಹಸಿರುಮಣಿಯ ಒಂದು ಸರವಿರುತ್ತದೆ. ವಿಧವೆಯಾದವಳು ಪೇಟಿಯಾ,ಕಾಂಚೋಳಿ, ಭಾಂಟಿಯಾ ಧರಿಸಿದರೂ ಮುತ್ತೈದೆ ಸೂಚಕವಾದ ಘುಘರಿ, ಚುಡೋ, ಬಲ್ಯಾ ತೊಡುವಂತಿಲ್ಲ. ಅವಳು ಮರುಮದುವೆಯಾದರೆ ಆ ಹಕ್ಕನ್ನೆಲ್ಲಾ ಮತ್ತೆ ಪಡೆಯುತ್ತಾಳೆ.

ಒಟ್ಟಿನಲ್ಲಿ ಈ ರೀತಿಯ ಅಲಂಕರಣಗೊಂಡ ಉಡುಪನ್ನು ಸ್ತ್ರೀಯರೇ ಧರಿಸುತ್ತಾರೆ. ಅದರಲ್ಲಿಯೂ ಸ್ತ್ರೀಯರು ಸಂದರ್ಭಕ್ಕನುಗುಣವಾಗಿ ಬಟ್ಟೆ ತೊಡುತ್ತಾರೆ. ಕನ್ಯೆಯಾಗಿದ್ದಾಗಿನ ಉಡುಪಿಗಿಂತ ಮದುವೆಯಾದ ನಂತರದ ಉಡುಪು ಭಿನ್ನವಾಗಿರುತ್ತದೆ. ಹಾಗೆಯೇ ವಿಧವೆಯಾದಾಗಿನ ಉಡುಪೇ ಬೇರೆಯಾಗಿರುತ್ತದೆ. ಆದರೆ ಪುರುಷರ ಉಡುಪಿಗೆ ಹೆಚ್ಚು ಅಲಂಕರಣವಿರುವುದಿಲ್ಲ.

ಬದಲಾದ ಪರಿಸ್ಥಿತಿಯಲ್ಲಿ ಲಂಬಾಣಿಗರ ಈ ಕಲಾತ್ಮಕವಾದ ಆಕರ್ಷಕ ಉಡುಪುಗಳು ಇಂದು ಕಣ್ಮರೆಯಾಗುತ್ತಿವೆ. ಅದರಲ್ಲಿಯೂ ಚಾಮರಾಜನಗರ ಸುತ್ತಲಿನ ಕೋಳಿಪಾಳ್ಯ ತಾಂಡ, ಮೂಕನಪಾಳ್ಯ ತಾಂಡ, ವೀರಯ್ಯನಪುರ ತಾಂಡ, ಹೊಸಪಾಳ್ಯ ಮತ್ತು ಬೂದಿಪಡಗ - ಈ ಪ್ರದೇಶಗಳಲ್ಲಿ ಲಂಬಾಣಿಗರ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಈ ಉಡುಪು ಕಣ್ಮರೆಯಾಗುತ್ತಿದೆ. ಕಾರಣಗಳು ಹಲವಾರಿರಬಹುದು: ಈ ಉಡುಪುಗಳನ್ನು ಸಿದ್ಧಪಡಿಸಲು ಹೆಚ್ಚಿನ ಸಮಯ ಬೇಕಾಗುತ್ತದೆ. ಈ ಉಡುಪುಗಳನ್ನು ತೊಳೆಯುವುದು ಕಷ್ಟ. ಏಕೆಂದರೆ ಅದರಲ್ಲಿ ಸೇರಿಸಿರುವ ಕನ್ನಡಿ ಒಡೆದು ಚೂರುಚೂರಾಗುತ್ತದೆಂಬ ಭಯ. ಜೊತೆಗೆ ಈ ಪ್ರದೇಶದ ಜನ ಕೃಷಿಕರಾದರೂ ಹೆಚ್ಚಿನವರು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಬಡತನದ ಬೇಗೆಯಿಂದ ಬಳಲುತ್ತಿರುವ ಈ ಜನರು ಎರಡು-ಮೂರು ತಿಂಗಳು ಕುಳಿತು ತಾಳ್ಮೆಯಿಂದ ತಮ್ಮ ಪೋಷಾಕುಗಳನ್ನು ಸಿದ್ಧಪಡಿಸುವುದು ಕಷ್ಟಸಾಧ್ಯ. ಹೊಟ್ಟೆಪಾಡಿನ ಬೇಗೆಯಲ್ಲಿ ಕಲೆ ಕರಗಿಹೋಗುತ್ತಿದೆ.

ಹಿಂದೆ ಲಂಬಾಣಿಗರು ವ್ಯಾಪಾರಸ್ಥರಾಗಿದ್ದಾಗ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವ್ಯಾಪಾರಕ್ಕಾಗಿ ಹೋಗಿ ಬರುತ್ತಿದ್ದರು. ಗಂಡಸರು ವ್ಯಾಪಾರಕ್ಕೆಂದು ಹೊರಟರೆ ಮರಳಿ ಬರಲು ಒಮ್ಮೊಮ್ಮೆ ಮೂರರಿಂದ ಆರು ತಿಂಗಳು ಹಿಡಿಯುತ್ತಿತ್ತು. ಈ ಸಂದರ್ಭದಲ್ಲಿ ಮಹಿಳೆಯರಿಗೆ ಬಿಡುವಿರುತ್ತಿದ್ದುದರಿಂದ ತಮ್ಮ ಕೈಚಳಕದಿಂದ ಆಕರ್ಷಕವಾಗಿ ಬಟ್ಟೆಗಳ ಮೇಲೆ ಕಸೂತಿ ಮಾಡಿ ತಮ್ಮ ಇಚ್ಛೆಗನುಸಾರ ಪೋಷಾಕುಗಳನ್ನು ಸಿದ್ಧಪಡಿಸಿಕೊಂಡು ಧರಿಸಿಕೊಳ್ಳುತ್ತಿದ್ದರು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಜನರು ಸಹ ಬದಲಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ಅವರ ಉಡುಪು ಬದಲಾಗುತ್ತಿರುವುದು ಅತೀ ಪ್ರತ್ಯೇಕತೆಯನ್ನು ಬಿಟ್ಟು ಅವರು ಭೌತಿಕ ನೆಲೆಯನ್ನು ಕಂಡುಕೊಳ್ಳುತ್ತಿರುವುದರ ಪರಿಣಾಮ. ಯಾವುದೇ ಒಂದು ಸಮುದಾಯದ ಉಡುಪು ಸ್ಥಳೀಯ ನೆಲೆಯಲ್ಲಿ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡರೂ ಭೌತಿಕ ನೆಲೆಯಲ್ಲಿ ತಮ್ಮ ಉಡುಪಿನ ವೈಶಿಷ್ಟ್ಯತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗುವುದಿಲ್ಲ. ಆದುದರಿಂದ ತಮ್ಮ ಸಾಂಸ್ಕೃತಿಕ ಉಡುಪನ್ನು ತಯಾರಿಸುವ ಕಷ್ಟಕ್ಕೆ ಕೈಹಾಕದೆ ಅನ್ಯಸಂಸ್ಕೃತಿಯವರಂತೆಯೇ ಉಡುಪುಗಳನ್ನು ಧರಿಸುತ್ತ ಕೆಲಸವನ್ನು ಹಗುರ ಮಾಡಿಕೊಳ್ಳುವುದರೊಂದಿಗೆ, ಪ್ರಾಚೀನವಾದ ತಮ್ಮ ಈ ಕೌಶಲವನ್ನು ತಮಗರಿವಿಲ್ಲದಂತೆ ವಿನಾಶದಂಚಿಗೆ ದೂಡಿರುವುದು ದುರ್ದೈವದ ಸಂಗತಿಯಾಗಿದೆ. ಇಂದು ಇಲ್ಲಿನ ಒಂದೊಂದು ತಾಂಡಗಳನ್ನು ಪರಿಶೀಲಿಸಿದರೆ ಮೂರು ಅಥವಾ ನಾಲ್ಕಕ್ಕಿಂತ ಹೆಚ್ಚು ಜನರ ಹತ್ತಿರ ಈ ಉಡುಪುಗಳಿಲ್ಲ.

ಪ್ರಸಕ್ತ ತಂತ್ರಜ್ಞಾನದ ಪರಿಣಾಮದಿಂದಾಗಿ ಈ ಕಲೆಯು ಯಂತ್ರಕಸೂತಿಯಾಗಿ ವಾಣಿಜ್ಯ ಮಹತ್ವ ಪಡೆದುದರ ಕಾರಣ ಜನಪದ ಕಸೂತಿ ಕಲೆಯು ಕ್ಷೀಣವಾಗುವ ಹಂತ ಮುಟ್ಟುತ್ತಿರುವುದು ಆತಂಕಕಾರಿ ಭಾವನೆ ಮೂಡಿಸುತ್ತಿದೆ. ಇಷ್ಟಾದರೂ ಕಸೂತಿಕಲೆಗೆ ನವಚೈತನ್ಯ ನೀಡಿ ಉಳಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ. ನಶಿಸಿಹೋಗುತ್ತಿರುವ ಲಂಬಾಣಿಗರ ಕಸೂತಿಕಲೆಯನ್ನು ಉಳಿಸಿ ಬೆಳೆಸಲು ಅನೇಕರು ಶ್ರಮಿಸುತ್ತಿದ್ದಾರೆ. ೧೯೮೪ರಲ್ಲಿ ಎಂ. ವೈ. ಘೋರ್ಪಡೆಯವರ ಮುಂದಾಳತ್ವದಲ್ಲಿ 'ಸೊಂಡೂರು ಕುಶಲ ಕಲಾಕೇಂದ್ರ'; ೧೯೯೨ ರಲ್ಲಿ ಲಕ್ಷ್ಮೀಬಾಯಿ ಮೆಹರ್ವಾಡೆಯವರ ನೇತೃತ್ವದಲ್ಲಿ 'ಶಕ್ತಿ ಮಹಿಳಾಮಂಡಳಿ' ಹಾಗೂ ವಿಜಾಪುರ ಜಿಲ್ಲೆಯ ಮಲ್ಲಮ್ಮಾಳ್‌ವಾರ ಅವರ 'ಸಬಲಾ ಸ್ವಯಂ ಸೇವಾಸಂಸ್ಥೆ' — ಮೊದಲಾದವರು ಈ ಕ್ಷೇತ್ರದಲ್ಲಿ ದಿಟ್ಟಹೆಜ್ಜೆ ಇಟ್ಟಿದ್ದಾರೆ. ಜರ್ಮನಿ, ಜಪಾನ್, ಇಟಲಿ, ಫ್ರಾನ್ಸ್ ಮತ್ತು ಅಮೆರಿಕಾ ದೇಶಗಳಿಗೆ ವಿವಿಧ ಕರಕುಶಲ ಅಭಿವೃದ್ಧಿ ನಿಗಮಗಳು ಇಲ್ಲಿ ಸಿದ್ಧವಾಗುವ ಕಸೂತಿಯಾದ ಸಿದ್ಧವಸ್ತುಗಳನ್ನು ರಫ್ತು ಮಾಡುತ್ತಿವೆ.

ಹೀಗೆ ಕಸೂತಿಕಲೆಯನ್ನು ಗುರುತಿಸಿ, ಅವರ ಕಲೆಗೆ ಜೀವತುಂಬಿ ಲಂಬಾಣಿ ಮಹಿಳೆಯರ ಬದುಕಲ್ಲಿ ಭರವಸೆ ತುಂಬುವ ಈ ಕಾರ್ಯ ಇನ್ನೂ ಹೆಚ್ಚಾಗಿ ಆಗಬೇಕು. ಅವರು ಸ್ವತಂತ್ರವಾಗಿ ಬದುಕುವ ನಿಟ್ಟಿನಲ್ಲಿ ಸಹಕರಿಸಬೇಕು.

ದೀವದ ಬೇಂಟೆಯೋ–ದೀಪದ ಬೇಂಟೆಯೋ?

—ಪ್ರೊ. ಶಿವರಾಮಯ್ಯ

ಮುಳಿಯ ತಿಮ್ಮಪ್ಪಯ್ಯನವರು ತಮ್ಮ 'ನಾಡೋಜಪಂಪ' ಎಂಬ ಗ್ರಂಥದಲ್ಲಿ 'ಪಂಪನದೇಸಿ' (ಪುಟ ೨೭೭) ಯ ಬಗ್ಗೆ ಉತ್ಸುಕರಾಗಿ ನಿರ್ವಚಿಸುತ್ತ; 'ದೀಪದ ಬೇಟೆ'ಯನ್ನು ಕುರಿತು ತಮ್ಮ ಕಡೆಯ ಬೇಟೆಗಾರರಿಂದ ತಿಳಿದ ಸಂಗತಿಯನ್ನು ಹೀಗೆ ಒಕ್ಕಣಿಸುತ್ತಾರೆ: ಇದು ರಾತ್ರಿಯಲ್ಲಾಡುವ ಬೇಟೆ; ಮುಕ್ಕಡೆಯಲ್ಲಿಯೂ ಮುಚ್ಚಳಗೊಂಡು ಒಂದೆಡೆಯಲ್ಲಿ ಮಾತ್ರವೇ ತೆರೆದುಕೊಂಡಿರುವ ಪೆಟ್ಟಿಗೆಯೊಂದರೊಳಗೆ, ಕುಪ್ಪಿಗೆಯಿಂದಾವೃತವಾಗಿ ಗಾಳಿಗೆ ನಂದಿಹೋಗದೆ ಜ್ವಲಿಸುವ ಒಂದು ದೀಪವನ್ನು ಅಲುಗಾಡದಂತೆ ನೆಲೆಗೊಳಿಸಬೇಕು. ತೆರೆದ ಬಾಗಿಲನ್ನು ಮುಂದುಮಾಡಿದ ಆ ಪೆಟ್ಟಿಗೆಯನ್ನು ಹೊತ್ತುಕೊಂಡು, ಪಳಗಿದವನೊಬ್ಬನು ಮೆಲ್ಲಮೆಲ್ಲನೆ ಮುಂಬರಿಯುತ್ತಾ ತನಗೆ ಹೊಲಬಾದ ಮೃಗಗಳ ಇಕ್ಕೆಪಕ್ಕೆಗಳತ್ತ ಹೋಗಬೇಕು. ಸಜ್ಜಾದ ಕೋವಿಯನ್ನೆತ್ತಿಕೊಂಡು, ಜಾಣ ಬೇಟೆಗಾರನೊಬ್ಬನು ಆ ದೀಪದ ಪೆಟ್ಟಿಗೆಯನ್ನು ಹಿಂಬಾಲಿಸಿಕೊಂಡು ಸದ್ದಿಲ್ಲದೈದಬೇಕು. ಸದ್ದಿನ ಸುದ್ದಿಯೂ ಇಲ್ಲದ ಕಗ್ಗತ್ತಲೆಯ ಕಾಡಿನೊಳಗೆ, ಅಂತರಾಳದಲ್ಲಿ ತನ್ನತ್ತಲೇ ಹರಿದು ಬರುತ್ತಿರುವ ಜ್ಯೋತಿರಿಂಗಣವದು ಪಕ್ಕೆಯಲ್ಲಿದ್ದ ಮೃಗದ ಕಣ್ಣನ್ನು ಕುಕ್ಕುತ್ತದೆ. ಆ ಜ್ಯೋತಿಯೆಂದರೆ ತನ್ನನ್ನು ಗಿಳಂಕರಿಸಲಿಕ್ಕೆಂದು ಹುಡುಕುತ್ತಾ ಬರುತ್ತಿರುವ ಪ್ರಬಲವಾದ ಮೃಗದ ಕಣ್ಣೋ ಅಥವಾ ಬೇರಾವುದಾದರೂ ಅಪಾಯಕರ ವ್ಯಕ್ತಿಯೋ ಎಂದು ಮೃಗವದು ದಿಗಿಲುಗೊಳ್ಳುತ್ತದೆ. ಅಂಜುಕುಳಿಯಾಗಿದ್ದರೆ ಅದು ಓಡಲಾರಂಭಿಸುವುದು; ಧೈರ್ಯಶಾಲಿಯಾಗಿದ್ದರೆ ಮಲೆದು ಮೇಲೆ ಹಾರಲಿಕ್ಕೆ ಸನ್ನದ್ಧವಾಗುವುದು. ನೆಟ್ಟಗಿದಿರಾದಲ್ಲಿ ಆ ಜ್ಯೋತಿ ಕಣ್ಣು ಕುಕ್ಕುವುದರಿಂದ ಮೃಗವು ಕಣ್ಣುಗೊಂಡು ಸ್ತಬ್ಧವಾಗುವುದು. ಹೇಗಾದರೂ ಸರಿ. ಪಕ್ಕೆಯಲ್ಲಿದ್ದ ಮೃಗವು ಚಲಿಸಬೇಕು; ಆ ಚಲನವು ತಮ್ಮ ಕಣ್ಣಿಗೆ ವ್ಯಕ್ತವಾಗಿ ತೋರಬೇಕು—ಎಂಬ ಬೇಟೆಗಾರನ ಗುರಿ ಈಡೇರುತ್ತದೆ.

ಹೀಗೆ ತಮ್ಮ ಕಡೆಗೆ ದೇಸಿಯಾಗಿರುವ ದೀಪದ ಬೇಟೆಯನ್ನು ಪರಿಭಾವಿಸಿಕೊಂಡು ಮುಂದೆ ಪಂಪನ ವಚನಾನುಸಾರವಾಗಿ ಅದನ್ನು ಪಂಪನ ಕೃತಿಯಿಂದ ಪ್ರತೀಕ್ಷಿಸುವ ಪ್ರಯತ್ನವನ್ನು ಮಾಡುತ್ತಾರೆ. ವಿಕ್ರಮಾರ್ಜುನ ವಿಜಯದ ಐದನೆಯ ಆಶ್ವಾಸದ ೪೩ನೆಯ ಮತ್ತು ೪೪ ನೆಯ ಪದ್ಯದ ನಡುವಿನ ವಚನ ಭಾಗದಲ್ಲಿ ಈ ದೀವದ ಬೇಟೆಯ ಪ್ರಸ್ತಾಪ ಇದೆಯಷ್ಟೆ. ಇದನ್ನು ಲೇಖಕರು ನಾಲ್ಕು ಹಂತಗಳನ್ನಾಗಿ ವಿಭಾಗಿಸಿಕೊಂಡು ಅನ್ವಯಿಸುತ್ತಾ ಹೋಗುತ್ತಾರೆ. ಇಲ್ಲಿ ಎರಡು ಪಾತ್ರಗಳನ್ನು ಬೇಟೆಗಾರ ಮತ್ತು ಇನ್ನೊಬ್ಬ ದೀಪಧಾರಕ ಎಂದು ಕಲ್ಪಿಸುತ್ತಾರೆ. ಆದರೆ

ಇವರು ಮೊದಲು ತಪ್ಪಿರುವುದು ದೀವದ ಬೇಂಟೆ ಎಂಬುದನ್ನು ದೀಪದ ಬೇಂಟೆ ಎಂದು ತದ್ಭವ ಮಾಡಿಕೊಂಡು ಓದುವುದರಲ್ಲಿ; ಆಮೇಲೆ ಅವರು ಮೇಲೆ ಕೊಟ್ಟಿರುವ ದೀಪದ ಬೇಟೆಯ ಲಕ್ಷಣಕ್ಕೆ ಅದನ್ನು ಅಳವಡಿಸಿ ಓದಿಕೊಳ್ಳುವುದರಲ್ಲಿ. ಆದ್ದರಿಂದ ದೀವದ ಮೃಗ ಮತ್ತು ದೀವಗಾರರು ಕಣ್ಮರೆಯಾಗಿ ದೀಪಧಾರಿ ಮತ್ತು ಬೇಟೆಗಾರ ಕಾಣಿಸಿಕೊಂಡರು. ಉಳಿದಂತೆ ಅವರ ಅನ್ವಯವೆಲ್ಲ ಸಲೀಸಾಗಿ ಸಾಗಿ ಹೋಯಿತು. ಆದರೆ ಮುಳಿಯವರ ಈ ಅರ್ಥಾನ್ವಯ ಕ್ರಮ ಪಂಪನ 'ದೀವದ ಬೇಟೆ'ಯ ವರ್ಣನೆಗೆ ಸಲ್ಲುವುದಿಲ್ಲ. ಇಡೀ ದೀಪದ ಬೇಟೆಯ ಲಕ್ಷಣವನ್ನು ಲೇಖಕರು ಎಳೆದು ತಂದು ಅನ್ವಯಿಸಿಕೊಂಡಿದ್ದಾರೆ. ಕಿಟ್ಟೆಲ್ ಪ್ರಕಾರ ದೀವ : a decoy; a bird, an elephant, an antelope, a trained as a decoy; ದೀವಗಾರ: one who trains birds and beasts for the purpose of decoying other birds and beasts. ದೀವದ ಬೇಟೆ ಎಂದರೆ ಪಕ್ಷಿ, ಪ್ರಾಣಿ, ಆನೆ, ಹರಿಣಿ, ನಾಯಿ ಮುಂತಾದವುಗಳನ್ನು ಸಾಕಿ ತರಬೇತುಗೊಳಿಸಿ ವನ್ಯಪ್ರಾಣಿಗಳನ್ನು ಮರುಳುಗೊಳಿಸಿ ಹಿಡಿಯುವ ಕ್ರಮ. ಈ ಬಗೆಯಾದ ಬೇಟೆಯನ್ನು ಆಡುವವನೇ ದೀವಗಾರ. ದೀವರು ಎಂದರೆ ಬೇಟೆಗಾರರು.

ಪಂಪನ ಕಾವ್ಯದ ಪ್ರಕಾರ, ಮೇಲಿನ ಅರ್ಥಗಳ ಅನ್ವಯದಲ್ಲಿ ನೋಡಿದರೆ ಈ ವಚನ (ವಿ. ವಿ. ೫-೪೩ ವಚನ) ಭಾಗದಲ್ಲಿ ವರ್ಣಿತವಾಗಿರುವ ಬೇಟೆಯ ಪ್ರಾಕಾರವು ದೀವದ ಬೇಟೆಯ ಲಕ್ಷಣವಾಗಿದೆಯೇ ಹೊರತು ದೀಪದ ಬೇಟೆಯ ಲಕ್ಷಣವಂತೂ ಅಲ್ಲ. ದೀಪದ ಬೇಟೆ ಮುಖ್ಯವಾಗಿ ರಾತ್ರಿ ವೇಳೆಯಲ್ಲಿ ನಡೆಯಬೇಕಾದ ಬೇಟೆ. ಆದರೆ ಕಾವ್ಯದಲ್ಲಿ ಎಲ್ಲಿಯೂ ರಾತ್ರಿಯ ಸೂಚನೆ ಇಲ್ಲ ಮತ್ತು ದೀವದ ಬೇಟೆಯನ್ನು ಕತ್ತಲ ರಾತ್ರಿಗಳಲ್ಲಿ ಆಡುವುದು ಅಷ್ಟು ಸುಲಭವಲ್ಲ. ಇದು ಹಗಲ ಬೇಟೆ. ಮುಳಿಯವರೆಂದಂತೆ, ಡಿಎಲ್ಎನ್ ಅವರು ತಿಳಿದಂತೆ ಪಂಪ ವರ್ಣಿಸಿರುವುದು ದೀವದ ಬೇಟೆಯೇ ಹೊರತು ದೀಪದ ಬೇಟೆಯಲ್ಲ. ದೀಪದ ಬೇಟೆಯೆಂದು ಮುಳಿಯವರು ಹೇಳಿರುವ ಆ ಇನ್ನೊಂದು ಬೇಟೆಯ ಪ್ರಕಾರವನ್ನು ಕವಿ ಇಲ್ಲಿ ಹೇಳಿಲ್ಲ. ನಮ್ಮ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಬೇಟೆಗೆ ಸಂಬಂಧಿಸಿದ ಸಂಕೇತಗಳು, ಸಾಂಕೇತಿಕ ಕ್ರಿಯೆಗಳು ಹಾಗೂ ವಸ್ತು ಸೂಚಕ ಪ್ರತಿಮೆಗಳು ಅನೇಕ ಸಂದರ್ಭಗಳಲ್ಲಿ ಬಂದಿವೆ.

ಉದಾ: ಜನ್ನನ ಯಶೋದರ ಚರಿತೆಯಲ್ಲಿ;

ಅಮೃತಮತಿಗಡ ಯಶೋಧರ
ನ ಮನಃ ಪ್ರಿಯೆ ಆಕೆ ದೀವಮಾಗೆ ಪುಳಿಂದಂ
ಸುಮನೋಬಾಣಂ ತದ್ ಭೂ
ರಮಣನೊಲಿದಂತೆ ಗೋರಿಗೊಳಿಸುತ್ತಿರ್ಕುಂ

ಇಲ್ಲಿ ದೀವದ ಬೇಟೆಯು ವಸ್ತು ಸೂಚಕ ಪ್ರತಿಮೆಯಾಗಿ ಬರುತ್ತದೆ. ಅಮೃತಮತಿ ದೀವಮೃಗದಂತೆ ಎಂಬ ಮಾತು ಇನ್ನೂ ಕೆಲವು ಕಡೆ ದೊರೆಯುತ್ತದೆ. ಇಲ್ಲೆಲ್ಲ ದೀವ ಎಂಬ ಪದವನ್ನು ದೀಪ ಎಂದು ಓದಿಕೊಂಡರೆ ಅರ್ಥ ವ್ಯಕ್ತಿಯೇ ಬರುವುದಿಲ್ಲ. ಅಲ್ಲದೆ ಯಾವ

ಹಳಗನ್ನಡ ಕವಿಯೂ ದೀಪದ ಬೇಟೆಯ ಬಗ್ಗೆ ಎಲ್ಲಿಯೂ ಪ್ರಸ್ತಾಪಮಾಡಿಲ್ಲ ಮತ್ತು ಪಂಪನ ಕಾವ್ಯದಲ್ಲೂ ದೀವದ ಬೇಂಟೆ ಎಂಬ ಪಾಠ ಇದೆಯೇ ಹೊರತು ದೀಪದ ಬೇಂಟೆ ಎಂಬ ಪಾಠ ವಿಲ್ಲ. ಹೀಗಿದ್ದರೂ ಮುಳಿಯ ತಿಮ್ಮಪ್ಪಯ್ಯನವರು ದೀವದ ಎಂಬುದನ್ನು ದೀಪದ ಎಂದು ಏಕೆ ತದ್ಭವ ಮಾಡಿಕೊಂಡರೋ ತಿಳಿಯದು. ಹಾಗೆಯೇ ಪಂಪಭಾರತ ದೀಪಿಕೆಯಲ್ಲಿ ಡಿಎಲ್‌ಎನ್ ಅವರೂ ಸಹ ದೀಪದ ಬೆಂಟೆ ಎಂದೇ ಯಾಕೆ ಭಾವಿಸಿಕೊಂಡರೋ ತಿಳಿಯುತ್ತಿಲ್ಲ. ಎಲ್ಲಕ್ಕೂ ಮಿಗಿಲಾಗಿ ದೀವದ ಬೇಂಟೆಗಿರುವ ಧ್ವನಿಶಕ್ತಿ ದೀಪದಬೇಂಟೆಯಲ್ಲಿಲ್ಲ ಎಂಬುದನ್ನು ಜನ್ನನ ಯಶೋಧರ ಚರಿತೆಯೇ ಸಾಬೀತು ಮಾಡುತ್ತದೆ. ಈ ಎಲ್ಲ ಹಿನ್ನೆಲೆಯಿಂದ ನೋಡಿದರೆ ಪಂಪ ಹೇಳಿರುವುದು ದೀವದ ಬೇಂಟೆಯೇ ಹೊರತು ದೀಪದ ಬೇಟೆಯಲ್ಲ ಎಂಬ ನಿರ್ಣಯಕ್ಕೆ ಬರಬಹುದು. ಇನ್ನು ದೀವದ ಬೇಟೆಯ ಲಕ್ಷಣಾನುಸಾರವಾಗಿ ಪಂಪನ ಕಾವ್ಯಕ್ಕೆ ಅನ್ವಯಾರ್ಥವನ್ನು ಮಾಡಬಹುದು:

ಮೊದಲನೆಯದಾಗಿ, ದೀವಮೃಗ (ಪಶು, ಪಕ್ಷಿ, ಪ್ರಾಣಿ, ಜಿಂಕೆ, ನಾಯಿ ಇತ್ಯಾದಿ) ಸಮೇತನಾಗಿ ಕಾಡಿನಲ್ಲಿ ಪ್ರವೇಶಿಸಿದ ಬೇಟೆಗಾರನು ಗಾಳಿಯ ಚಲನೆಯ ದಿಕ್ಕನ್ನು ಸೂಕ್ಷ್ಮವಾಗಿ ಅವಲೋಕಿಸುವ ಸಾಮರ್ಥ್ಯವುಳ್ಳವನಾಗಿರಬೇಕು. ಯಾಕೆಂದರೆ ಮೇಲ್ಗಾಳಿಯಲ್ಲಿ ತಾನಿದ್ದು ಕೆಳಗಾಳಿಯಲ್ಲಿ ಬೇಟೆಯ ಮೃಗವಿದ್ದರೆ ಗಾಳಿ ಹಿಡಿದು ಅದು ಓಟಕೀಳುತ್ತದೆ. ಕಱಿವು, ಉಱಿವು ಎಂದರೆ, ಇಕ್ಕೆಪಕ್ಕೆಗಳಿಂದ ಎದ್ದೋಡಿದ ಮತ್ತು ಅಲ್ಲೇ ಉಳಿದಿರುವ ಪ್ರಾಣಿಗಳ ಹೊಲಬನ್ನೂ; ಕಾಪು ಮೇಪು ಎಂದರೆ, ಅವುಗಳ ಕಾಯುವಿಕೆಯನ್ನೂ ಮೇಯುವಿಕೆಯನ್ನೂ; ತೋಡು ಬೀಡು ಎಂದರೆ ಅವುಗಳು ತಂಗಲು ತೋಡಿರುವ ತಗ್ಗುಗಳನ್ನೂ; ದೆಸೆ ಕೊನೆ ಎಂದರೆ, ಅವುಗಳು ಬೆದೆಯಲ್ಲಿ ನೆರೆಯುವ ಬಗೆ ವಿಧಾನಗಳನ್ನೂ; ಮೆಚ್ಚು ಬೆಚ್ಚು ಎಂದರೆ, ಅಂಥ ಪ್ರಾಣಿಗಳ ಮೆಚ್ಚು ಏನು, ಅವುಗಳು ಬೆದರುವುದು ಹೇಗೆ ಎಂಬುದನ್ನೂ; ಪೋಗು ಮೇಗು ಎಂದರೆ, ಅವುಗಳ ಗುಂಪು ಕೆದರುವ, ಕೂಡುವ ಬಗೆಯನ್ನೂ; ಪೆರ್ಚು ಕುಂದು ಎಂದರೆ, ಪ್ರಾಣಿಗಳಿಗೆ ಮದವೇರುವ ಮದವಿಳಿಯುವ ಲಕ್ಷಣವನ್ನೂ ಕುಶಲನಾದ ಬೇಟೆಗಾರನು ಅರಿಯಲು ಸಮರ್ಥನಿರಬೇಕು.

ಎರಡನೆಯದಾಗಿ, ಕಾಣಲುಂಕಾಣಿಸಲುಂ ಎಂದರೆ ಅಡವಿಯ ಮೃಗವನ್ನು ತಾನು ಕಾಣುವುದಕ್ಕೂ ಮತ್ತು ಅದನ್ನು ತನ್ನ ದೀವಕ್ಕೆ ಕಾಣಿಸುವಂತೆ ಏರ್ಪಡಿಸುವುದಕ್ಕೂ; ಮಾಣದುದಂ ಮಾಣಿಸಲುಂ ಎಂದರೆ ದೀವವು ತಾನು ಹಿಡಿದ ಬೇಟೆಯನ್ನು ಬಿಡದಿರುವಾಗ ಬಿಡಿಸಿಕೊಳ್ಳುವುದಕ್ಕೂ; ಏರದುದನೇಱಿಸಲುಂ, ಏರಿ ಹೋಗಿ ಬೇಟೆಯಾಡಿದ ದೀವವನ್ನು ಪ್ರಚೋದಿಸಿ ಹಿಡಿಯಲು ಹೋಗುವಂತೆ ಮಾಡುವುದಕ್ಕೂ ಬೇಟೆಗಾರನು ಜಾಣನಾಗಿರಬೇಕು. ಈ ಭಾಗ ಮುಖ್ಯವಾಗಿ ದೀವ ಮೃಗಕ್ಕೆ ಬೇಟೆಗಾರ ನೀಡಬೇಕಾದ ತರಬೇತಿಯನ್ನು ಕುರಿತು ಹೇಳಲಾಗಿದೆ.

ಮೂರನೆಯದಾಗಿ, ಮೂರು ಕೊಂಬುಮಂ ಎಂದರೆ ಮೃಗಗಳು ಏರುವ-ಇಳಿಯುವ-ಸಮತಟ್ಟಾಗಿರುವ ಮೂರು ನಿಯಮಿತ ಜಾಗಗಳನ್ನೂ ಅಥವಾ ಅವು ಬೆದೆಯೆದ್ದು ಕೂಗುವ

ಮೂರು ಬಗೆಯನ್ನೂ; ಆಱುನಾಣ್ಪೋಗುಮಂ ಎಂದರೆ, ಅವುಗಳ ಆರು ಬಗೆಯ ಲಜ್ಜಾಹೀನವಾದ ಕಾಮಕ್ರೀಡೆಗಳನ್ನೂ; ಎರಟ್ಟಿಜ್ಜೆಯುಮಂ ಎಂದರೆ, ಪ್ರಾಣಿಗಳು ತಮ್ಮ ತಂಗುದಾಣಗಳಿಗೆ ಅಥವಾ ನೀರ್ದಾಣಗಳಿಗೆ ಹೋಗುವ ಹೊರಬರುವ ಹೆಜ್ಜೆ ಗುರುತುಗಳನ್ನೂ ಅರಿಯಬಲ್ಲವನಾಗಿರಬೇಕು. ಮೂಱು ಪೊೞ್ತುಮಂ ಎಂದರೆ, ಮುಂಜಾನೆ ಹಗಲು ಸಂಜೆ—ಈ ಮೂರು ಹೊತ್ತುಗಳಲ್ಲಿಯೂ, ಮೃಗದ ಮೂಱಿರವುಮಂ ಎಂದರೆ, ಅವುಗಳು ನಿಲ್ಲುವ, ವಿರಮಿಸುವ, ಕೂಡುವ ಮೂರು ಜಾಗಗಳನ್ನೂ, ಗಾಳಿಯ, ಮನೆಱಂಕೆಯುಮಂ ಬಲ್ಲವನಾಗಿ ಎಂದರೆ ಬೀಸುವ ಗಾಳಿಯಿಂದ ಮೃಗವಾಸನೆಯನ್ನು ಹಿಡಿಯಬಲ್ಲ ಚತುರನಾಗಿರಬೇಕೆಂದು ತೋರುತ್ತದೆ.

ನಾಲ್ಕನೆಯದಾಗಿ, ನಂಬಿದ ಬರವುಮಂ ನಂಬದ ಬರವುಮನಱಿದು ಎಂದರೆ, ಬೇಟೆಗೆ ಒಡ್ಡಿ ಬರುವುದು ಯಾವುದು ನಂಬಿ ಬಾರದೆ ಇರುವುದು ಯಾವುದು ಎಂಬುದನ್ನು ಅರಿದಿರಬೇಕು; ಮಲೆಯದುದಿಂ ಮಲೆಯಿಸಲುಂ ಎಂದರೆ ಮಲೆತು ದೀವ ಮೃಗದ ಮೇಲೇರಿ ಬರದಿರುವುದನ್ನು ಮಲೆಯುವಂತೆ ಮಾಡುವುದಕ್ಕೂ, ಮಲೆದುದಂ ತೊಲಗಿಸಲುಂ ಎಂದರೆ ಮಲೆತು ಬಂದುದನ್ನು ದೂರ ತೊಲಗಿಸುವುದಕ್ಕೂ, ನಂಬದುದಂ ನಂಬಿಸಲುಂ ಎಂದರೆ ತನ್ನ ದೀವವನ್ನು ನಂಬದೆ ದೂರ ಹೋಗುವುದನ್ನು ನಂಬಿಸಲಿಕ್ಕೂ, ನಂಬಿದುದಂ ಬಿಡಿಸಲುಂ ಎಂದರೆ, ದೀವವನ್ನು ನಂಬಿ ಸನಿಹ ಬಂದುದನ್ನು ಬೇರ್ಪಡಿಸಲಿಕ್ಕೂ, ಒಳಪುಗುವುದರ್ಕೆಡೆ ಮಾಡಲುಂ ಎಂದರೆ, ಆಯಕಟ್ಟಿನ ಜಾಗದೊಳಕ್ಕೆ ಮೃಗ ನುಸುಳುವುದಕ್ಕೆ ಅವಕಾಶ ಮಾಡುವುದಕ್ಕೂ, ಎಡೆಯಾಗದ ಮೃಗಮನವುಂಕಿಸಲುಂ ಎಂದರೆ ಹೊಡೆಯಲು ಅವಕಾಶವಾಗದ ಸಂದರ್ಭದಲ್ಲಿ ದೀವವನ್ನು ಅಡಗಿಸಿ ಮೃಗವನ್ನು ಒತ್ತಿ ಹತ್ತಿರ ತರುವುದಕ್ಕೂ ಬೇಟೆಗಾರನು ಚತುರ ರಸಿಕನಂತಿರಬೇಕು ಎಂದು ಅಲಂಕಾರಯುಕ್ತವಾಗಿ ನಿರೂಪಿಸುತ್ತಾನೆ. ಕಡೆಗೆ ಅಂತರಂಗದಲ್ಲಿ ಒಲ್ದು ಒಲ್ಲದ ನಲ್ಲರಂತೆ ಮಿಡುಕಿಸಲುಂ ಎಂದರೆ, ಒಳಗೆ ಒಲವಿದ್ದರೂ ಬಾಹ್ಯನಡವಳಿಕೆಯಲ್ಲಿ ಒಲ್ಲದವರಂತೆ ನಟಿಸುವ ಪುರುಷರನ್ನು ಅನುರಕ್ತೆಯರಾದ ನಲ್ಲೆಯರು ಅವರ ಮೇಲ್ಬಾಯ್ದು ಹೇಗೆ ಮಿಟುಕಿಸುವಂತೆ ಮಾಡುವರೋ ಹಾಗೆ; ಕೆಲವೆಡೆಗಳಲ್ಲಿ ಪಣಮುಡಿದ (ನಿರ್ಧನಿಕರಾದಿ) ನಲ್ಲರು ಹೇಗೆ ತಲೆಮರೆಸಿಕೊಂಡು ಹೋಗುತ್ತಾರೋ ಹಾಗೆ ವರ್ತಿಸಿ, ಎಸೆದ ದೆಸೆಗಳ್ಗೋಡಿಸಲುಂ ಎಂದರೆ, ಬಾಣವನ್ನು ಹೊಡೆದ ದಿಕ್ಕಿಗೆ ತನ್ನ ತರಬೇತುಗೊಳಿಸಿದ ದೀವ ಮೃಗವನ್ನು ಛೂಬಿಟ್ಟು ಗಾಯಗೊಂಡ ಬೇಟೆಯನ್ನು ದಕ್ಕಿಸಿಕೊಳ್ಳುವುದಕ್ಕೂ ಬೇಟೆಗಾರನು ಚತುರನಾಗಿರಬೇಕು.

ಒಟ್ಟಿನಲ್ಲಿ ದೀವದ ಬೇಟೆ ಎಂಬುದು ಪ್ರತಿಭಾವಂತನಾದ ಬೇಟೆಗಾರನು ತನ್ನೆಲ್ಲ ಚತುರತೆಯಿಂದ ದೀವವನ್ನು ಬಳಸಿ ಮೃಗವನ್ನು ಮರುಳುಗೊಳಿಸಿ ಆಡುವ ಬೇಟೆ ಎಂಬುದು ಮೇಲಿನ ಅನ್ವಯ ಕ್ರಮದಿಂದ ತಿಳಿದುಬರುತ್ತದೆ. ಮತ್ತೂ ಸೂಕ್ಷ್ಮವಾಗಿ ಈ ಸಂದರ್ಭವನ್ನು ಗಮನಿಸಿದರೆ, ದೀವದ ಬೇಟೆಯನ್ನೂ ಪ್ರಣಯ ಬೇಟೆಯನ್ನೂ ಕವಿ ಸಮೀಕರಿಸಿ ಹೇಳಿದಂತೆ ಕಂಡುಬರುತ್ತದೆ. ಇಷ್ಟೆಲ್ಲಾ ಹೇಳಿದುದರ ತಾತ್ಪರ್ಯವೆಂದರೆ ಪಂಪ ವಿ.ವಿ.: ೫-೪೩ ವಚನಂ ಭಾಗದಲ್ಲಿ ವರ್ಣಿಸಿರುವುದು ದೀವದ ಬೇಟೆಯೇ ಹೊರತು ಮುಳಿಯವರು ದೂರಾನ್ವಯ ಮಾಡಿ ಹೇಳಿರುವಂತೆ ದೀಪದ ಬೇಟೆಯಲ್ಲ ಎಂಬುದನ್ನು ದೃಢಪಡಿಸಲೋಸುಗ.

ಕನ್ನಡ ಭಾಷೆಯಲ್ಲಿ ಸಂಬೋಧನಾ ರೀತಿ

—ಡಾ. ಎಲ್. ಮಂಜುಳಾಕ್ಷಿ

ಪೀಠಿಕೆ

ಮಾನವನು ಸಂಘ ಜೀವನ ಆರಂಭಿಸಿದ ಕಾಲದಿಂದಲೂ ಭಾಷೆಯ ಮೂಲಕ ಅಭಿಪ್ರಾಯಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಪದ್ಧತಿ ರೂಢಿಗೆ ಬಂದಿತು. ಪ್ರತಿ ಸಂಘ ಅಥವಾ ಕುಟುಂಬದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಮತ್ತೊಬ್ಬರನ್ನು ಸಂಬೋಧಿಸುವ ರೀತಿ ಮತ್ತು ಪದಗಳು ರೂಢಿಗೆ ಬಂದವು. ಸಂಬಂಧವನ್ನು ಗುರುತಿಸಲು ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಂಬೋಧನೆ ಅತ್ಯಾವಶ್ಯಕ. ಇದು ಸಂಬೋಧಿಸುವ ವ್ಯಕ್ತಿ ಮತ್ತು ಸಂಬೋಧಿಸಲ್ಪಟ್ಟ ವ್ಯಕ್ತಿಗಳ ನಡುವಣ ವಯಸ್ಸು, ಲಿಂಗ ಮತ್ತು ಕೌಟುಂಬಿಕ ಸಂಬಂಧವನ್ನವಲಂಬಿಸಿರುತ್ತದೆ. ಆದುದರಿಂದ ಸಾಮಾಜಿಕಭಾಷಾ ಪರಿಶೋಧನೆಯು ಭಾಷೆಯ ಸಂಬೋಧನಾ ರೀತಿಗಳು ಮತ್ತು ಪದಗಳ ಅಧ್ಯಯನದಲ್ಲಿ ಮುಖ್ಯ ಪಾತ್ರ ಹೊಂದಿದೆ. ಇವು ಸಾಮಾಜಿಕ ರಚನೆ, ಸಾಂಸ್ಕೃತಿಕ ಮಾದರಿ ಮತ್ತು ಭೌಗೋಳಿಕ ಸನ್ನಿವೇಶ ಮುಂತಾದ ಅಂಶಗಳಿಂದ ನಿರ್ಧರಿಸಲ್ಪಡುತ್ತವೆ. ಪ್ರತಿ ಸಮಾಜದಲ್ಲಿಯೂ ಅದರ ಅಗತ್ಯಗಳಿಗನುಗುಣವಾಗಿ ಪ್ರತಿಯೊಬ್ಬ ವ್ಯಕ್ತಿಯ ಪಾತ್ರವೂ ವಿಭಿನ್ನವಾಗಿರುತ್ತದೆ. ಸಂಬೋಧನಾ ರೀತಿಗಳನ್ನು ಸಾಮಾಜಿಕ, ಆರ್ಥಿಕ ಸ್ಥಾನಮಾನ, ವಿದ್ಯೆಯಮಟ್ಟ, ಜಾತಿ, ವಯಸ್ಸು ಮತ್ತು ಲಿಂಗ ನಿರ್ಣಯಿಸುತ್ತವೆ. ಅಲ್ಲದೆ ಸಂಬೋಧನಾ ರೀತಿಗಳ ವಿಭಾಗದ ಮೇಲೆ ಅನೇಕ ಐತಿಹಾಸಿಕ ಮತ್ತು ಸಾಮಾಜಿಕ ಅಂಶಗಳು ನಿರ್ಣಾಯಕ ಪರಿಣಾಮ ಬೀರುತ್ತವೆ. ಸಂಬೋಧಿಸುವ ವ್ಯಕ್ತಿಗಳ ನಡುವಣ ವ್ಯತ್ಯಾಸಗಳು ಪ್ರತಿವ್ಯಕ್ತಿಯ ವ್ಯಕ್ತಿತ್ವ ವ್ಯತ್ಯಾಸಕ್ಕನುಗುಣವಾಗಿರುತ್ತವೆ.

ಆಧುನಿಕ ಸಮಾಜವು ಚಲನಾತ್ಮಕ. ಇದು ಮಾನವನ ಭಾಷಾ ಚಟುವಟಿಕೆಗಳಲ್ಲಿ ಶೀಘ್ರ ಬದಲಾವಣೆಗಳನ್ನೂ ತಂದಿದೆ. ಸಂಬೋಧನಾ ರೀತಿಗಳು ಒಳಗೊಂಡಿರುವ ಮುಖ್ಯ ವಿಷಯಗಳೆಂದರೆ — ಸಂಕ್ಷಿಪ್ತ ಮೂಲ ನಾಮ, ದ್ವಿತೀಯ ಮತ್ತು ತೃತೀಯ ನಾಮಗಳು, ಉಪನಾಮಗಳು, ವ್ಯಕ್ತಿಗತ ಪದವಿ ಮತ್ತು ಬೇರೆ ಬೇರೆ ಸಂಬೋಧಕ ಉದ್ಗಾರಗಳು ಈ ಲೇಖನದಲ್ಲಿ ಹಿಂದಿನ ಮೈಸೂರು ಜಿಲ್ಲೆಯಲ್ಲಿ ಪ್ರಚಲಿತವಿದ್ದ ಸಂಬೋಧನಾ ರೀತಿ ಮತ್ತು ಪದಗಳನ್ನು ಅವರ ಆಡುಭಾಷೆಯ ಆಧಾರದ ಮೇಲೆ ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಸಂಬೋಧನಾ ಪದ ಪ್ರಯೋಗ ರೀತಿಗಳು — ೧) ಜಾತಿನಾಮ ೨) ಗೌರವಸೂಚಕನಾಮ ೩) ವೈಯಕ್ತಿಕ ನಾಮ ೪) ರಕ್ತಸಂಬಂಧನಾಮ ೫) ವೃತ್ತಿಗತ ನಾಮ—ವೃತ್ತಿಗತ ರಕ್ತಸಂಬಂಧ ನಾಮ ೬) ವೃತ್ತಿಗತ ಗೌರವ ಸೂಚಕ ನಾಮ ೭) ವೈಯಕ್ತಿಕ—ರಕ್ತಸಂಬಂಧ ನಾಮ ೮) ವೈಯಕ್ತಿಕ—ವೃತ್ತಿಗತ ನಾಮ ೯) ಗೌರವಸೂಚಕವಲ್ಲದ ನಾಮ.

ಮಾಹಿತಿ ಸಂಗ್ರಹ

ಕನ್ನಡ ಭಾಷೆಯಲ್ಲಿ ಅನೇಕ ಸಂಬೋಧಕ ಪದಗಳಿವೆ. ಇವು ವಿದ್ಯೆಯ ಮಟ್ಟ, ಸಾಮಾಜಿಕ-ಆರ್ಥಿಕ ಸ್ಥಾನಮಾನ, ವಯಸ್ಸು, ಲಿಂಗ, ಜಾತಿ, ಪರಿಸರ ಮುಂತಾದ ಅನೇಕ ಅಂಶಗಳಿಂದ ನಿರ್ಣಯಿಸಲ್ಪಡುತ್ತವೆ.

ಕೆಳಗೆ ಕಾಣಿಸಿರುವ ಮುಖ್ಯ ಆಧಾರಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ-

೧) ಪರಿಶೀಲನೆ ಮತ್ತು ಅನುಭವ ೨) ಚರ್ಚೆ ೩) ಸಾಹಿತ್ಯ ಗ್ರಂಥಗಳು

ಸಂಬೋಧನಾ ರೂಪಗಳನ್ನು ಅರಿಯಬೇಕಾದರೆ ಆಳವಾದ ಪರಿಶೀಲನೆ ಅಗತ್ಯ. ಇದರಿಂದ ಸಂಬೋಧನಾ ರೂಪಗಳು, ರೀತಿ ಮತ್ತು ಪದಬಳಕೆ ತಿಳಿಯಬಹುದು. ಸಂಶೋಧನೆಯಲ್ಲಿ ಪ್ರಶ್ನಾವಳಿ ಅತ್ಯಂತ ಪ್ರಾಮುಖ್ಯ ಅಂಶ. ಮಾತನಾಡುವ ವ್ಯಕ್ತಿಯ ಹೆಸರು, ಜನ್ಮಸ್ಥಳ, ಲಿಂಗ, ವಯಸ್ಸು, ಕೋಮು, ಜಾತಿ, ವಿದ್ಯಾಭ್ಯಾಸ ಮತ್ತು ವೃತ್ತಿಗೆ ಸಂಬಂಧಿಸಿದ ಮಾಹಿತಿಯಿಂದ ಪ್ರಶ್ನಾವಳಿ ಆರಂಭವಾಗುತ್ತದೆ. ಆದ ಕಾರಣ ಮಾಹಿತಿಯ ಕೌಟುಂಬಿಕ, ಸಾಮಾಜಿಕ ಮತ್ತು ವೃತ್ತಿಜೀವನ ಸಂಬಂಧಗಳಿಗೆ ಸಂಬಂಧಿಸಿದ ಪುರಾವೆಗಳನ್ನೊದಗಿಸುತ್ತದೆ. ಕೌಟುಂಬಿಕ ವರ್ಗವು ರಕ್ತಸಂಬಂಧದ ಎಲ್ಲಾ ಸಂಬಂಧಕ ಪದಗಳನ್ನೂ ವಿಶದಪಡಿಸುತ್ತದೆ. ಸಾಮಾಜಿಕ ವರ್ಗವು ಸಮಾಜದಲ್ಲಿ ವ್ಯಕ್ತಿಗಳ ನಡುವೆ ಇರುವ ಸಂಬಂಧವನ್ನೂ ಸೂಚಿಸುತ್ತದೆ. ಉದಾ: ಮಾಲಿಕ-ಬಾಡಿಗೆದಾರ, ಯಜಮಾನ-ಸೇವಕ, ಸ್ನೇಹಿತ-ಅಪರಿಚಿತ, ನೆರೆಹೊರೆ ಸಂಬಂಧಗಳು ಇತ್ಯಾದಿ. ವೃತ್ತಿಪರ ಸಂಬಂಧಗಳು ಅಂಗಡಿಯವ-ಗಿರಾಕಿ, ವೈದ್ಯ-ರೋಗಿ, ಶಿಕ್ಷಕ-ವಿದ್ಯಾರ್ಥಿ, ವಕೀಲ-ಕಕ್ಷಿದಾರ, ಅಧಿಕಾರಿ-ಅರ್ಜಿದಾರ ಮುಂತಾದ ವಿಷಯಗಳನ್ನೊಳಗೊಂಡಿರುತ್ತವೆ. ಅಲ್ಲದೆ ಸ್ಥಳೀಯ ಜನಗಳೊಡನೆ ಸಂಬೋಧನಾ ರೀತಿಗಳ ವಿಷಯವಾಗಿ ಚರ್ಚಿಸುವುದು ಬಹಳ ಉಪಯುಕ್ತ. ಇದರಿಂದ ಕೆಲವು ಸಂಬೋಧನಾ ರೀತಿಗಳು ವಿವಿಧ ಸನ್ನಿವೇಶಗಳಲ್ಲಿ ಪದೇ ಪದೇ ಬಳಕೆಯಾಗುವುದನ್ನು ತಿಳಿಯಬಹುದು. ಸಂಬೋಧನಾ ರೀತಿಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸುವ ನಿಟ್ಟಿನಲ್ಲಿ ಸಾಹಿತ್ಯ ಪುಸ್ತಕಗಳು-ಕಥೆಗಳು, ನಾಟಕಗಳು ಮತ್ತು ಐತಿಹಾಸಿಕ ಗ್ರಂಥಗಳು ಬಹಳ ಉಪಯುಕ್ತ ಮಾಹಿತಿ ಒದಗಿಸುತ್ತವೆ.

ಸಾಮಾಜಿಕ ರಚನೆ ಮತ್ತು ಕ್ರಿಯಾತ್ಮಕ ಸಂಬಂಧಗಳು

ಕನ್ನಡದಲ್ಲಿ ಸಂಬೋಧನಾ ರೀತಿಗಳು ಮತ್ತು ಸರ್ವನಾಮ ಬಳಕೆ ಅಧ್ಯಯನಕ್ಕೆ ಕನ್ನಡ ಭಾಷೆಯಾಡುವ ಸಮಾಜದ ರಚನೆ ಮತ್ತು ಕ್ರಿಯಾತ್ಮಕ ಸಂಬಂಧಗಳನ್ನು ತಿಳಿಯುವುದು

ಬಹುಮುಖ್ಯ. ಪ್ರಾಚೀನ ಸಮಾಜವನ್ನು ವೃತ್ತಿಗಳಿಗನುಗುಣವಾಗಿ ವರ್ಣಗಳಾಗಿ ವಿಭಾಗಿಸಲಾಗಿದೆ. ಉದಾ: ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ. ಪ್ರತಿವರ್ಣದಲ್ಲಿಯೂ ಉಪಪಂಗಡಗಳು ಅಥವಾ ಜಾತಿಗಳು ಏರ್ಪಟ್ಟವು. ಮೂಲತಃ ವರ್ಣಗಳನ್ನು ವೃತ್ತಿ ವಿಭಜನೆಯ ಆಧಾರದ ಮೇಲೆ ರಚಿಸಲಾಯಿತು. ಬೇರೆ ಬೇರೆ ಹಂತಗಳಲ್ಲಿ ವರ್ಣಗಳು ತಮ್ಮ ಕಾಯಕಗಳಿಗೆ ಅನುರೂಪವಾದ ಸಂಬಂಧ ಹೊಂದಿದ್ದುವು. ಕಾಲಕ್ರಮೇಣ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಉಂಟಾದ ಚಲನಾತ್ಮಕ ಬದಲಾವಣೆಗಳಿಂದಾಗಿ ಹಾಗೂ ಆಧುನಿಕತೆ, ವಿದ್ಯಾಭ್ಯಾಸ, ಸಾಮಾಜಿಕ, ಆರ್ಥಿಕ ಸುಧಾರಣೆಗಳು ಮುಂತಾದ ಕಾರಣಗಳಿಂದಾಗಿ ಜಾತಿಗಳು ಮತ್ತು ಉದ್ಯೋಗಗಳು, ಜಾತಿಗಳು ಮತ್ತು ಉದ್ಯೋಗಗಳ ನಡುವೆ ಇದ್ದ ತಡೆ ಗೋಡೆಗಳು ಮತ್ತು ಸಂಕುಚಿತ ಸ್ಥಾನವನ್ನು ತೆರವು ಮಾಡಿದವು.

ಪ್ರತ್ಯೇಕ ಸಂಘಗಳ ಜನ ಸಮೀಪ ಬರುವಂತಾಗಿ ಅವರ ನಡುವೆ ವಿಷಯಗಳ ಪರಸ್ಪರ ವಿನಿಮಯ ಮತ್ತು ಸಂಬಂಧಗಳು ಬೆಳೆದವು. ಮೇಲೆ ಹೇಳಿದ ಎಲ್ಲಾ ಅಂಶಗಳೂ ಸಂಬೋಧನಾ ರೀತಿಯ ಮೇಲೆ ಪ್ರಭಾವ ಬೀರಿವೆ. ಆದಾಗ್ಯೂ ಕೆಲವು ಕಡೆ ಇನ್ನೂ ಗ್ರಾಮ್ಯ ಸಂಬೋಧನಾ ರೀತಿಗಳು ಬಳಕೆಯಲ್ಲಿವೆ. ಇನ್ನೂ ಕೆಲವು ಕಡೆ ಅವು ನಿರುಪಯುಕ್ತವಾಗಿವೆ.

ಉದಾ: 'ಹೊಲೆಯ' ಎಂಬ ಪದವನ್ನು ನಿಂದನಾ ಸಂಬೋಧಕವಾಗಿ ಬಳಸುತ್ತಾರೆ. ಇದು ಯಾವ ಜಾತಿ–ಪಂಗಡದ ಸಂಬೋಧನೆಯಲ್ಲ. ಬಹಳ ಹಿಂದಿನ ಕಾಲದಲ್ಲಿ ಒಂದು ಪಂಗಡದವರು ಉತ್ತಮ ಜಾತಿಯವರ ಹೊಲಸನ್ನು ತಲೆಮೇಲೆ ಹೊರುತ್ತಿದ್ದರು. ಈ ಅಮಾನವೀಯ, ಅಪಮಾನಕರ ಪದ್ಧತಿಯನ್ನು ತೊಡೆದು ಹಾಕಲಾಗಿದೆ. ವ್ಯಕ್ತಿ ತಪ್ಪು ಮಾಡಿದಾಗ ಅಥವಾ ಅನೈತಿಕ ಚಟುವಟಿಕೆಯಲ್ಲಿ ತೊಡಗಿದಾಗ ಅವನಿಗೆ ಛೀಮಾರಿ ಹಾಕಲು "ಏನೋ ಹೊಲೆಯಾ?" ಎಂದು ಸಂಬೋಧಿಸುತ್ತೇವೆ. ಇದು ಯಾವ ಜಾತಿ ಅಥವಾ ವರ್ಗದ ಸಂಬೋಧನೆಯಲ್ಲ.

ಸ್ಥೂಲವಾಗಿ ಕನ್ನಡ ಮಾತನಾಡುವ ಎಲ್ಲಾ ವರ್ಗ ಮತ್ತು ಜಾತಿಯವರನ್ನು ಎರಡು ವರ್ಗ ಮಾಡಬಹುದು-ವಿದ್ಯಾವಂತರು ಮತ್ತು ಅವಿದ್ಯಾವಂತರು. ವಿದ್ಯಾವಂತರ ವೃತ್ತದಲ್ಲಿ ಸಂಬೋಧನಾ ರೀತಿಗಳಲ್ಲಿ ಬದಲಾವಣೆಗಳು ಮತ್ತು ಬೆಳವಣಿಗೆಗಳುಂಟಾಗಿವೆ. ಆದರೆ ಅವಿದ್ಯಾವಂತರು ಗ್ರಾಮೀಣ ಪದಗಳನ್ನು ಸಂಬೋಧನೆಯಲ್ಲಿ ಇಂದಿಗೂ ಬಳಸುತ್ತಾರೆ. ಅವರ ಸಂಬೋಧನಾ ರೀತಿಯಲ್ಲಿ ಬದಲಾವಣೆಯಾಗಿಲ್ಲ. ಉಚ್ಚಾರಗಳ ಮೇಲೆ ಪ್ರಭಾವ ಬೀರುವ ಅಂಶವೆಂದರೆ ಶಿಕ್ಷಣ. ಶಿಕ್ಷಣದ ಕೊರತೆಯ ಪರಿಣಾಮವಾಗಿ ಸ್ಪಷ್ಟ ಉಚ್ಚಾರಣೆಗಳು ಬರುವುದಿಲ್ಲ. ಸಂಸ್ಕೃತ ಪದಗಳು ಉಚ್ಚರಿಸಲು ಕಠಿಣವಾಗಿದ್ದು ಅವುಗಳ ಗ್ರಾಮೀಣ ಅಪಭ್ರಂಶ ರೂಪಗಳು ಉಚ್ಚರಿಸಲ್ಪಡುತ್ತವೆ. ಮತ್ತೆ ಕೆಲವು ದೀರ್ಘ ಉಚ್ಚಾರಣೆಗಳು ಕುರೂಪ ಹೊಂದುವುದಲ್ಲದೆ ಮೊಟಕಾಗುತ್ತವೆ. ಉದಾ: 'ವಿದ್ಯೆ', 'ವಿಷಯ', 'ಸಂತೋಷ'ಗಳು 'ಯಿದ್ಯೆ', 'ಯಿಷ್ಯ', ಮತ್ತು'ಸಂತೋಸ' ಗಳಾಗುತ್ತವೆ.

ಮತ್ತೊಂದು ಸಂಬೋಧನಾ ರೀತಿಯ ವ್ಯತ್ಯಾಸಗಳಿಗೆ ಕಾರಣವಾದ ಮುಖ್ಯ ಅಂಶವೆಂದರೆ, ಮಾತನಾಡುವ ಅಥವಾ ಸಂಬೋಧಿಸಲ್ಪಡುವ ವ್ಯಕ್ತಿಯ ವೃತ್ತಿ, ವೈಶಿಷ್ಟ್ಯ ಮತ್ತು ಸಖ್ಯ.

ಸಂಬೋಧನಾ ರೀತಿಯ ಮೇಲೆ ಆರ್ಥಿಕ ಸ್ಥಾನಮಾನವೂ ಕೂಡ ಪರಿಣಾಮಕಾರಿಯೆಂಬುದು ಗಮನಿಸಬೇಕಾದ ವಿಷಯ. ಅವಿದ್ಯಾವಂತರು ಕಡುಬಡವರು ಮತ್ತು ಜೀವನೋಪಾಯಕ್ಕಾಗಿ ಪಾಡುಪಡುವವರ ಸಂಬೋಧನಾ ರೀತಿಯಾಗಲಿ, ಸರ್ವನಾಮಗಳ ಬಳಕೆಯಲ್ಲಿ ಯಾವ ಬದಲಾವಣೆಯಾಗಲಿ ಮಾರ್ಪಾಡಾಗಲಿ ಉಂಟಾಗಿಲ್ಲ.

ಉದಾ: ವೀರಶೈವರಲ್ಲಿ ಜಂಗಮ, ಆರಾಧ್ಯ, ಬಣಜಿಗ ಎಂಬ ಬಣಗಳಿವೆ. ಬ್ರಾಹ್ಮಣರ ಸಂಬೋಧನಾ ರೀತಿಗಳು, ಅವರ ಪರಿಸರ ಮತ್ತು ಭೌಗೋಳಿಕ ನೆಲಗಟ್ಟನ್ನೂ ಅವಲಂಬಿಸಿವೆ. ಇತರ ಜಾತಿ, ಬಣ ಮತ್ತು ವರ್ಗಗಳಲ್ಲಿ ಕೂಡ ಸಂಬೋಧನಾ ರೀತಿಗಳಲ್ಲಿ ವ್ಯತ್ಯಾಸಗಳಿವೆ.

ಸಂಬೋಧನಾ ರೀತಿಯ ಮಾದರಿಗಳು

ಜಾತಿನಾಮ ಬಳಕೆ: ಬ್ರಾಹ್ಮಣ ಅರ್ಚಕರನ್ನು 'ಸ್ವಾಮಿ ಪೂಜಾರ್ರೆ' ಎಂದೂ, ಅಡಿಗೆಯವನನ್ನು 'ಏನ್ ಭಟ್ರೆ' ಎಂದೂ, ಜಂಗಮರನ್ನು 'ಅಯ್ಯಗೋಳ' ಹಾಗೂ 'ಅಯ್ಯನೋರ' ಎಂದೂ; ಅಧಿಕಾರಿಯನ್ನು 'ಸಾಹೆಬ್ರ' ಎಂದೂ, ಮಠದ ಅಧಿಪತಿ ಅಥವಾ ಗುರುವನ್ನು 'ಸ್ವಾಮಿಗಳು' ಎಂದೂ ಸಂಬೋಧಿಸುತ್ತೇವೆ. ಇಂಗ್ಲಿಷ್ ಪದ 'ಸರ್' ಎಂಬುದನ್ನು ಸರ್ಕಾರಿ ಅಧಿಕಾರಿಗೂ, 'ಸಾರ್' ಎಂಬ ಪದವನ್ನು ವಿದ್ಯಾವಂತ ವ್ಯಕ್ತಿಗೂ ಹಾಗೂ ನೌಕರನಿಗೂ, ಗ್ರಾಮೀಣ ಜನರು ಸಂಬೋಧಿಸುತ್ತಾರೆ. ಇಬ್ಬರು ವಿದ್ಯಾವಂತರ ನಡುವೆ 'ಸಾರ್' ಎಂಬುದು ಗೌರವ ಸೂಚಕ ಸಂಬೋಧನೆ. ಕಿರಿಯರು ಹಿರಿಯರನ್ನೂ ಗೌರವಸೂಚಕವಾಗಿ ಸಂಬೋಧಿಸುತ್ತಾರೆ. ಗ್ರಾಮೀಣ ಜನರು 'ಸ್ವಾಮಿ' ಎಂಬ ಸಂಬೋಧನೆಗೆ ಬದಲಾಗಿ 'ಸಾರ್' ಎಂಬ ಸಂಬೋಧನೆಯನ್ನೂ ಬಳಸುತ್ತಾರೆ. ಬಹುಶಃ ಇದಕ್ಕೆ ಉಚ್ಚಾರಣೆಯ ಕ್ಲಿಷ್ಟತೆ ಕಾರಣವಿರಬಹುದು.

ಗ್ರಾಮೀಣ ಪ್ರದೇಶಗಳಲ್ಲಿ ಕೆಳವರ್ಗದ ವ್ಯಕ್ತಿಗಳು ಮೇಲ್ವರ್ಗದ ವ್ಯಕ್ತಿಯನ್ನು ಸಂಬೋಧಿಸುವ ರೀತಿ ಗೌರವಯುಕ್ತವಾದುದು. ಉದಾ: ಬ್ರಾಹ್ಮಣ ಅಥವಾ ಜಂಗಮರನ್ನು 'ಬುದ್ದಿ' ಎಂದು ಸಂಬೋಧಿಸುತ್ತಾರೆ. ಇದು ಜಾತಿ ಸೂಚಕವಲ್ಲ. ಸಂಬೋಧಿತ ವ್ಯಕ್ತಿಯ ಉನ್ನತ ವ್ಯಕ್ತಿತ್ವದ ಸಂಕೇತ.

ವೈಯಕ್ತಿಕನಾಮ: ಸಂಬಂಧಿಗಳು ಅಥವಾ ಅತ್ಯಂತ ನಿಕಟ ಸ್ನೇಹಿತರಾದವರು ಒಬ್ಬರನ್ನೊಬ್ಬರು ಅವರ ಹೆಸರಿನಿಂದ ಕರೆಯುತ್ತಾರೆ. ಇದಕ್ಕೆ ಕಾರಣ, ಸಂಬೋಧಕ ವ್ಯಕ್ತಿ ಮಾತ್ರ ಗಮನಿಸಬೇಕು. ಇತರರಿಗೆ ತೊಂದರೆಯಾಗಬಾರದೆಂಬುದು. ಉದಾ: 'ಏನ್ ಗೋಪಾಲ', 'ಏಯ್ ಸರೋಜಾ!', 'ಲೋ ಕೃಷ್ಣ'.

ರಕ್ತಸಂಬಂಧ ಸಂಬೋಧನಾ ನಾಮಗಳು: ರಕ್ತಸಂಬಂಧದ ಆಧಾರದ ಮೇಲೆ ಕೆಲವು ಸಂಬಂಧಿತ ನಾಮಗಳನ್ನು ಬಳಸುತ್ತಾರೆ.

ಉದಾ: ತಾಯಿ	: ಅಮ್ಮ, ಅವ್ವ, ಅವ್ವಯ್ಯ, ಅಮ್ಮಿ
ತಂದೆ	: ಅಣ್ಣ, ಅಪ್ಪ, ಅಪ್ಪಯ್ಯ, ಅಪ್ಪಾಜಿ, ಅಯ್ಯ

ಸಹೋದರ (ಹಿರಿಯ) : ಅಣ್ಣ, ಅಣ್ಣಯ್ಯ

ಸಹೋದರ (ಕಿರಿಯ) : ತಮ್ಮ, ತಮ್ಮಯ್ಯ, ತಮ್ಮಣ್ಣ

ಸಹೋದರಿ (ಹಿರಿಯ) : ಅಕ್ಕ, ಅಕ್ಕಯ್ಯ, ಅಕ್ಕಮ್ಮ

ಸಹೋದರಿ (ಕಿರಿಯ) : ತಂಗಿ, ತಂಗೆವ್ವ, ತಂಗಮ್ಮ, ತಾಯಿ

ತಂಗಿಯ ಗಂಡ : ಮೈದ

ಅಕ್ಕನ ಗಂಡ : ಭಾವ, ಮಾವ

ಅಣ್ಣ : ದೊಡ್ಡಮ್ಮನ ಮಗ

ತಮ್ಮ : ಚಿಕ್ಕಮ್ಮನ ಮಗ

ಅಕ್ಕ : ದೊಡ್ಡಮ್ಮನ ಮಗಳು

ತಂಗಿ : ಚಿಕ್ಕಮ್ಮನ ಮಗಳು

ತಂದೆಯತಂದೆ/ತಾಯಿಯ ತಂದೆ: ಅಜ್ಜ, ತಾತ, ಅಜ್ಜಯ್ಯ/ತಾಯಿ-ಅಜ್ಜಿ, ಅಜ್ಜಮ್ಮ

ತಂದೆಯ ತಾತ/ತಾಯಿಯ ತಾತ: ಮುತ್ತಜ್ಜ/ಅಜ್ಜಿ-ಮುತ್ತಜ್ಜಿ

ಮಗನ ಮಕ್ಕಳು : ಮೊಮ್ಮಕ್ಕಳು

ಮಗನ, ಮಗನ ಮಕ್ಕಳು : ಮರಿಮಕ್ಕಳು

ತಾಯಿಯ ಸಹೋದರ : ಮಾವ, ಮಾವಯ್ಯ, ಮಾಮ, ಸೋದರಮಾವ

ತಂದೆಯ ಅಣ್ಣ : ದೊಡ್ಡಪ್ಪ, ದೊಡ್ಡಯ್ಯ, ದೊಡ್ಡಪ್ಪಾಜಿ

ತಂದೆಯ ತಮ್ಮ : ಚಿಗಪ್ಪ, ಚಿಕ್ಕಪ್ಪ

ತಾಯಿಯ (ಅಣ್ಣನ) ತಮ್ಮನ ಮಗ: ಅಳಿಯ, 'ತಮ್ಮಯ್ಯ' ಎಂದು ಸಂಬೋಧನೆ

ತಾಯಿಯ (ಅಣ್ಣನ) ತಮ್ಮನ ಮಗಳು: ಸೊಸೆ

ಮಗನ ಹೆಂಡತಿ : ಸೊಸೆ, ಸೊಸೆಯವ್ವ

ಮಗಳ ಗಂಡ : ಅಳಿಯ, ಅಳಿಮಯ್ಯ, ಅಳಿಯದೇವರು

ಹೆಂಡತಿಯು ಗಂಡನನ್ನು ಸಂಬೋಧಿಸುವ ರೀತಿ: ಹಿಂದೂ ಸಂಸ್ಕೃತಿಯ ಪ್ರಕಾರ ಹೆಂಡತಿಯು ಗಂಡನನ್ನು ಹೆಸರು ಹಿಡಿದು ಸಂಬೋಧಿಸುವುದಿಲ್ಲ. ತೃತೀಯ ಪುರುಷವಾಚಕದಲ್ಲಿ ಸಂಬೋಧಿಸುತ್ತಾಳೆ.

ಉದಾ: 'ಏನೂ ಅಂದ್ರೆ', 'ರೀ', 'ಬರ್ಲಿ', 'ಹೋಗ್ಲಿ', 'ತಗೊಳ್ಳಲಿ' ಹೀಗೆ...ಪತ್ನಿಯು ಪತಿಯನ್ನು ಗೌರವಪೂರ್ವಕವಾಗಿ ಸಂಬೋಧಿಸುತ್ತಾಳೆ.

ಹಿಂದಿನ ಕಾಲದಲ್ಲಿ ಗಂಡನು ಹೆಂಡತಿಯನ್ನು ಸಂಬೋಧಿಸುತ್ತಿದ್ದ ರೀತಿ: 'ನಮ್ಮವಳು', 'ಲೇ ಬಾರೇ', 'ತಗೊಳ್ಳೇ', 'ಕೂತ್ಕೊಳ್ಳೇ' ಇತ್ಯಾದಿ...

ಈಚಿನ ಕಾಲದಲ್ಲಿ ಪತ್ನಿಯನ್ನೂ, ಪತಿಯನ್ನೂ ಹೆಸರು ಹಿಡಿದು ಸಂಬೋಧಿಸುವುದು ಒಂದು ರೂಢಿಯ ಶೈಲಿಯಾಗಿದೆ.

ಉದಾ: 'ಲೇ ಪಾರೂ', 'ಲೇ ರಾಜು'.....ಮುಂತಾಗಿ.

ಕೆಲವು ಪದಗಳನ್ನು ಬೇರೆ ಭಾಷೆಯಿಂದ ಎರವಲು ಪಡೆದು ಕನ್ನಡ ಪದಗಳ ಬದಲಿಗೆ ಸಂಬೋಧನೆಯಲ್ಲಿ ಪ್ರಯೋಗಿಸುತ್ತೇವೆ.

ಉದಾ: ಆಂಟಿ, ಅಂಕಲ್, ಮಮ್ಮಿ, ಡ್ಯಾಡಿ, ಮಮ್ಮ, ಪಪ್ಪ, ಕಕ್ಕ, ಚಾಚಾ ಇತ್ಯಾದಿ.

ಔದ್ಯೋಗಿಕ ಪದಗಳ ಬಳಕೆ

ಯಾವುದಾದರೂ ಕಸುಬು ಅಥವಾ ನೌಕರಿಯಲ್ಲಿದ್ದವರನ್ನು ಸಂಬೋಧಿಸಲು ಔದ್ಯೋಗಿಕ ಪದಗಳನ್ನು ಬಳಸುತ್ತಾರೆ. ಉದಾ: ಧರ್ಮಗುರು ಅಥವಾ ಶಿಕ್ಷಕರನ್ನು 'ಗುರುಗಳೇ' ಎಂದೂ, ವೈದ್ಯರನ್ನು 'ಡಾಕ್ಟರೇ' ಎಂದೂ, ಅಕ್ಕಸಾಲಿಗ ಅಥವಾ ಬಡಗಿಯನ್ನು 'ಆಚಾರ್ರೆ ಎಂದೂ ಸಂಬೋಧಿಸುತ್ತಾರೆ. ನೌಕರಿಯಲ್ಲಿರುವವರನ್ನು ಹೆಸರು ಹಿಡಿದು ಸಂಬೋಧಿಸುತ್ತಾರೆ. ಉದಾ: 'ಶ್ರೀನಿವಾಸ ಮೇಷ್ಟ್ರು' — ಇದರಲ್ಲಿ ಜಾತಿ ವರ್ಗ ಭೇದವಿರುವುದಿಲ್ಲ.'ಸಾಹೇಬ್ರು' ಅಥವಾ 'ಸಾಹೇಬ್ರೆ', 'ಸಾರ್', 'ಸ್ವಾಮಿ' ಎಂಬುದೂ ಇತರ ಸಂಬೋಧನೆಗಳು. ಕೆಲವು ಸಂದರ್ಭಗಳಲ್ಲಿ ಹೆಸರನ್ನೂ ಸಂಬಂಧದೊಡನೆ ಸಂಬೋಧಿಸುವುದೂ ಉಂಟು. ಉದಾ: 'ರವಿ ಚಿಕ್ಕಪ್ಪ', 'ರಾಜೂಮಾಮ'. ವ್ಯವಸಾಯ ಕಸುಬಾಗುಳ್ಳವರನ್ನು 'ಒಕ್ಕಲಿಗರು' ಎಂದು ವರ್ಗೀಕರಣ ಮಾಡಿದ್ದಾರೆ. ಇವರನ್ನು 'ಗೌಡ'ಎಂದೂ, ಗೌರವಯುತವಾಗಿ 'ಗೌಡ್ರೆ' ಎಂದೂ ಸಂಬೋಧಿಸಲಾಗುತ್ತದೆ.

ಕೆಲವು ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿ ಹಿಂದೆ ಊರಿನ ಮುಖಂಡ ಅಥವಾ ಪಟೇಲನಾಗಿದ್ದರೆ, ಮುಂದೆಯೂ ಅವರನ್ನು 'ಪಟೇಲರೆ' ಎಂದು ಸಂಬೋಧಿಸುತ್ತಾರೆ. ಮತ್ತೆ ಸಲಿಗೆಯಿದ್ದವರು ಹೆಸರು ಸೇರಿಸಿ ಸಂಬೋಧಿಸುತ್ತಾರೆ. ಉದಾ: 'ಪಟೇಲ್ ಪುಟ್ಟಪ್ಪ'.

ಜವಾಬ್ದಾರಿಯುತ ಮತ್ತು ಜವಾಬ್ದಾರಿ ರಹಿತ ಪದಗಳು

ಹಿಂದಿನ ಕಾಲದಲ್ಲಿ ಜಾತಿ ಪದ್ಧತಿ ಕಠಿಣವಾಗಿದ್ದಿತು. ಆಗ ಕೆಲವು ವರ್ಗದವರು ಮೇಲ್ಜಾತಿಯವರ ವಸತಿಯಿಂದ ಬಹುದೂರ ವಾಸಿಸಬೇಕಾಗಿದ್ದಿತು. ಬ್ರಾಹ್ಮಣರು ವಾಸಿಸುತ್ತಿದ್ದ ಬೀದಿಗಳಿಗೆ 'ಕೇರಿ' ಅಥವಾ 'ಅಗ್ರಹಾರ' ಎಂದೂ, ಜಂಗಮರು ವಾಸಿಸುತ್ತಿದ್ದ ಬೀದಿಗಳಿಗೆ 'ಕೇರಿ' ಎಂದೂ ಹೆಸರಿದ್ದಿತು. ವೃತ್ತಿ-ಕಸುಬುಗಳನ್ನು ಅನುಸರಿಸುತ್ತಿದ್ದವರು ಅವರವರ ಬೀದಿ ಅಥವಾ ಕೇರಿಗಳಲ್ಲಿ ವಾಸಿಸುತ್ತಿದ್ದರು.

ಮೇಲ್ಜಾತಿಯವರು ಕೆಳಜಾತಿಯವರನ್ನು ಗೌರವ ಸೂಚಕವಲ್ಲದ ಪದಗಳಿಂದ ಸಂಬೋಧಿಸುತ್ತಿದ್ದರು. ಉದಾ: 'ಏನೋ', 'ಬಾರೋ', 'ಹೋಗೋ', 'ಕುಕ್ಕರ್ ಬಡಿ' (ಕುಳಿತುಕೊ), 'ತೊಲಗು' (ಹೋಗು).

ಜನರು ವಿದ್ಯಾವಂತರು, ತಿಳಿವಳಿಕೆಯುಳ್ಳವರಾದಂತೆಲ್ಲಾ ಸಾಮಾಜಿಕ ಬದಲಾವಣೆಗಳಾಗಿವೆ. ಸಾರ್ವಜನಿಕ ಜೀವನದಲ್ಲಿ ಜಾತಿ ಪದ್ಧತಿಯ ಬಿಕ್ಕಟ್ಟುಗಳು ಸಡಿಲವಾಗಿವೆ. ಅದು ಕುಟುಂಬ ಜೀವನಕ್ಕೆ ಮಾತ್ರ ಸೀಮಿತವಾಗಿದೆ. ಈಗ ಮೇಲ್ವರ್ಗದ ವ್ಯಕ್ತಿ ಕೆಳವರ್ಗದ ವ್ಯಕ್ತಿಯನ್ನು 'ಏನಪ್ಪ', 'ಏನಯ್ಯ', 'ಬಾರಪ್ಪ', 'ಕೂತುಕೊ', 'ಹೋಗು' ಎಂದು ಸಂಬೋಧಿಸುತ್ತಾರೆ.

ಇತರ ಸಂಬೋಧನಾ ರೂಪಗಳು

ಸಾಮಾನ್ಯ ಸಂಬೋಧನಾ ರೂಪಗಳು ಯಾವುವೆಂದರೆ, ಪ್ರಥಮನಾಮ, ಅನ್ವರ್ಥನಾಮ, ಅಂತ್ಯನಾಮ ಮತ್ತು ಗೌರವಸೂಚಕ ಅಂತ್ಯಾಕ್ಷರಗಳು. ಅನ್ವರ್ಥನಾಮಕ್ಕೆ ಉದಾಹರಣೆ (ಪುಲ್ಲಿಂಗ) - ಕುಳ್ಳ, ಪುಟ್ಟ, ಕೆಂಚ, ಕರಿಯ, ಗಿಡ್ಡ. (ಸ್ತ್ರೀಲಿಂಗ) - ಪುಟ್ಟಿ, ಕುಳ್ಳಿ, ಕೆಂಚಿ, ಗಿಡ್ಡಿ.

ಮಕ್ಕಳನ್ನು ಪ್ರೀತಿ ವಾತ್ಸಲ್ಯದಿಂದ ಸಂಬೋಧಿಸುವ ಪದಗಳು

ಮೊಗ, ಪುಟಾಣಿ, ಚಿನ್ನ, ಮರಿ, ಪಾಪು, ಚಿನ್ನಾರಿ, ಪಮ್ಮಿ, ಅಪ್ಪಿ, ಚಿಂತು, ಚಿನ್ನು, ಚಿಂಟು, ಅಪ್ಪು.

ಮೇಲೆ ಹೇಳಿದವುಗಳಲ್ಲದೆ ಸಂಬೋಧನಾ ರೂಪಗಳನ್ನೂ ಎರಡು ವಿಧವಾಗಿ ಗುರ್ತಿಸಬಹುದು.

೧) ಪದಸಂಬೋಧನೆ

೨) ಪರಿಶ್ರಮ ಸಂಬೋಧನೆ

ಪದಸಂಬೋಧನೆ ಸರಳ ಮತ್ತು ಸುಲಲಿತ. ಆದರೆ ಪರಿಶ್ರಮ ಸಂಬೋಧನೆ ಕ್ಲಿಷ್ಟಕರ ಹಾಗೂ ಪರಿಸರದ ಪ್ರಭಾವಕ್ಕೆ ಒಳಗಾಗುತ್ತದೆ. ಆದರೆ ಕೆಲವು ವೇಳೆ ಕ್ಲಿಷ್ಟಕರ ಪರಿಶ್ರಮ ಸಂಬೋಧನೆ ಸಂದರ್ಭ ಮತ್ತು ಉಪಯೋಗಕ್ಕನುಗುಣವಾಗಿ ಸರಳವಾಗಬಹುದು ಮತ್ತು ಪ್ರತ್ಯಯದಿಂದಾಗಿ ಸುಲಲಿತವಾಗಬಹುದು. ಆದರೆ ಈ ವಿಚಾರದಲ್ಲಿ ಕಟ್ಟುನಿಟ್ಟಾದ ನಿಯಮಗಳಿಲ್ಲ. ಅವುಗಳು ಉಪಯೋಗ ಮತ್ತು ಪ್ರಯೋಗದಿಂದಾಗಿ ವ್ಯತ್ಯಾಸ ಹೊಂದಬಹುದು.

ಉದಾ: ತಂದೆ, ತಾಯಿ, ಅತ್ತೆ, ಮಾವ, ಸಹೋದರ, ಸಹೋದರಿ, ಇತ್ಯಾದಿ ಪದಗಳ ಹಿಂದೆ 'ನನ್ನ' ಅಥವಾ 'ನಮ್ಮ' ಎಂಬ ಸರ್ವನಾಮ ಸೇರಿಸಲಾಗುತ್ತದೆ. ಅಲ್ಲದೆ ನೇರವಾಗಿ ಸಂಬೋಧನ ಪ್ರಥಮಾ ವಿಭಕ್ತಿಯಲ್ಲಿ ಹೆಸರಿಸಲಾಗುತ್ತದೆ. ಉದಾ: ಅಪ್ಪ, ಅಣ್ಣಾ, ಅಪ್ಪಾಜಿ(ತಂದೆಗೆ), ಅಮ್ಮ, ಅವ್ವ, ಅವ್ವಯ್ಯ(ತಾಯಿಗೆ), ಮಾವ, ಮಾವಯ್ಯ(ಮಾವನಿಗೆ), ಅತ್ತೆ, ಅಣ್ಣಾ, ಅಣ್ಣಯ್ಯ(ಅಣ್ಣನಿಗೆ), ತಮ್ಮ ಅಥವಾ ತಂಗಿಯನ್ನು ಅವರ ಹೆಸರು ಹಿಡಿದು ಕರೆಯುವುದು. ತಂದೆಯ ಅಣ್ಣನಿಗೆ ದೊಡ್ಡಪ್ಪ, ದೊಡ್ಡಯ್ಯ, ತಂದೆಯ ತಮ್ಮನಿಗೆ ಚಿಗಪ್ಪ, ಚಿಕ್ಕಪ್ಪ, ಚಿಕ್ಕಯ್ಯ ಇವುಗಳಲ್ಲಿ ವ್ಯತ್ಯಾಸಗಳಾಗಬಹುದು.

ಕೆಲವು ಸಂದರ್ಭಗಳಲ್ಲಿ ಪದ ಸಂಬೋಧನೆ ಪರಿಶ್ರಮ ಸಂಬೋಧನೆಯಾಗಿ ಪರಿವರ್ತನೆಯಾಗಬಹುದು. ಉದಾ: ಅಕ್ಕ ತಂಗಿಯರು ಒಟ್ಟಿಗೇ ವಾಸಮಾಡುವಾಗ ತಂಗಿ

ಅಕ್ಕನನ್ನು 'ಅಕ್ಕ' ಎಂದು ಸಂಬೋಧಿಸುತ್ತಾಳೆ. ಅಕ್ಕನ ಮಕ್ಕಳು ಕೂಡ ತಮ್ಮ ತಾಯಿಯನ್ನು 'ಅಕ್ಕ' ಎಂದು ಸಂಬೋಧಿಸುತ್ತಾರೆ. ಹಾಗೆಯೇ ತಂಗಿ ಅಕ್ಕನ ಗಂಡನನ್ನು 'ಭಾವ' ಎಂದು ಕರೆಯುತ್ತಾಳೆ. ಮಕ್ಕಳು ಕೂಡ ತಂದೆಯನ್ನು 'ಭಾವ' ಎಂದು ಸಂಬೋಧಿಸುತ್ತಾರೆ.

ಸಂಬೋಧನಾ ಪದಗಳು ಕಾಲದಿಂದ ಕಾಲಕ್ಕೆ ರೂಪಾಂತರ ಹೊಂದುತ್ತವೆ. ಕೌಟುಂಬಿಕ ಸಂಬೋಧನೆಗಳು ಸಂಯುಕ್ತ ಮತ್ತು ಪರಸ್ಪರವಾಗಿದ್ದು, ಸಂಬಂಧಸೂಚಕಗಳಾಗುತ್ತವೆ. ಉದಾ: ತಂದೆ-ಮಗ, ತಾಯಿ-ಮಗಳು, ಅತ್ತೆ-ನಾದಿನಿ, ಅಜ್ಜಿ-ಮೊಮ್ಮಗ.

ಪರಿಚಯ ಮಾಡಿಕೊಡುವಾಗ ಸಂಬಂಧಸೂಚಕ ಸಂಬೋಧನೆಗಳನ್ನೂ ಬಳಕೆ ಮಾಡುತ್ತಾರೆ. ಈ ಸಂಬಂಧ ಸೂಚಕ ಸಂಬೋಧನೆಗಳು ಕೇವಲ ರಕ್ತ ಸಂಬಂಧಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಅವು ಅತಿ ನಿಕಟ ಸಹವಾಸ ಮತ್ತು ವಾತ್ಸಲ್ಯವನ್ನವಲಂಬಿಸಿರುತ್ತವೆ. ಒಬ್ಬ ಸ್ತ್ರೀ ತನ್ನನ್ನು ತಾಯಿಯಂತೆ ನೋಡಿಕೊಂಡಾಗ ಅವಳನ್ನು ಆ ವ್ಯಕ್ತಿ ತಾಯಿಯೆಂದು ಸಂಬೋಧಿಸುತ್ತಾನೆ. ಅಂತೆಯೇ ಒಬ್ಬ ಸ್ತ್ರೀಯ ಸೇವೆ ಮಾಡಿದವನನ್ನು ಅವಳು ಮಗನೆಂದು ಸಂಬೋಧಿಸುತ್ತಾಳೆ. ಈ ಸಂಬೋಧನೆಗಳು ಸಹೋದರರು, ಸಹೋದರಿಯರು, ಮೊಮ್ಮಕ್ಕಳು, ತಂದೆ, ತಾಯಿ, ಅತ್ತೆ, ಮಾವ, ಇತ್ಯಾದಿ ವ್ಯಕ್ತಿಗಳಿಗೆ ಅನ್ವಯವಾಗುತ್ತವೆ.

ಇದರಿಂದ ತಿಳಿಯುವ ಅಂಶವೆಂದರೆ, ಸಂಬೋಧನಾ ರೀತಿಗಳು ಯಾವ ಕಟ್ಟುನಿಟ್ಟಾದ ನಿಯಮಗಳಿಗೆ ಒಳಪಟ್ಟಿಲ್ಲ. ಅವು ಉಪಯೋಗ ಮತ್ತು ಪರಿಶ್ರಮದ ಪ್ರಭಾವಕ್ಕೊಳಗಾಗುತ್ತವೆ. ಉದಾ: ಗೌರವಸೂಚಕ ಸಂಬೋಧನೆಗಳು: ಗುರುಗಳೇ, ಸ್ವಾಮಿಯೋರೇ, ಅಯ್ಯ, ಅಯ್ಯನೋರೇ, ಈ ಸಂದರ್ಭಗಳಲ್ಲಿ ಗೌರವಕ್ಕೆ ಪಾತ್ರನಾದ ವ್ಯಕ್ತಿಯನ್ನು ಹೆಸರಿನಿಂದ ಸಂಬೋಧಿಸಲಾಗುತ್ತದೆ. ಉದಾ: ಅತ್ಯಂತ ನಿಕಟವರ್ತಿಗೆ 'ಚಡ್ಡಿದೋಸ್ತ್', 'ನನ್ನ ಕಣ್ಮಣಿ', 'ನನ್ನ ಚಿನ್ನ', 'ಲೇ ಮರೀ', ಉನ್ನತಸ್ಥಾನದಲ್ಲಿರುವ ವ್ಯಕ್ತಿಯನ್ನು ಸಂಬೋಧಿಸುವಾಗ 'ಮಹನೀಯರೇ', 'ಮಹೋದಯರೇ', ಸಾರ್ವಜನಿಕರನ್ನು ಸಂಬೋಧಿಸುವಾಗ, 'ಮಹನೀಯರೇ, ಮಹಿಳೆಯರೇ, ಸಭ್ಯರೆ, ಅಣ್ಣತಮ್ಮಂದಿರೇ, ಅಕ್ಕತಂಗಿಯರೇ, ಬಂಧುಗಳೇ ಮೊದಲಾದ ಪದಗಳನ್ನು ಗಮನಿಸಬಹುದು.

ಚಂಗಚಹಳ್ಳಿಯ ಮಾರಿಹಬ್ಬ

—ಆರ್. ಉಷಾರಾಣಿ

ಪೀಠಿಕೆ

ಭಾರತ ಹಳ್ಳಿಗಳ ದೇಶ. ಇಲ್ಲಿನ ಪ್ರತಿಯೊಂದು ರಾಜ್ಯ, ಜಿಲ್ಲೆ, ತಾಲೂಕು ಮತ್ತು ಹಳ್ಳಿಗಳು ವರ್ಷವಿಡೀ ಹಬ್ಬದ ಆಚರಣೆಯ ಜೊತೆಗೆ ವಿವಿಧ ಸಂಪ್ರದಾಯಗಳಿಂದ ತುಂಬಿವೆ. ಪ್ರತಿ ಜಿಲ್ಲೆ, ತಾಲೂಕು, ಹಳ್ಳಿಗಳಲ್ಲಿ ಒಂದೊಂದು ಹಬ್ಬವನ್ನು ಒಂದೊಂದು ರೀತಿಯಲ್ಲಿ ವಿಶೇಷತೆಯಿಂದ ಆಚರಿಸುತ್ತಾರೆ. ಅದು ಗೌರಿ, ಗಣೇಶ, ಯುಗಾದಿ, ದೀಪಾವಳಿ, ಸಂಕ್ರಾಂತಿ ಇತ್ಯಾದಿ ಯಾವುದೇ ಹಬ್ಬವಾಗಿರಬಹುದು. ಅವುಗಳ ಆಚರಣೆ ಅವರ ಸಂಪ್ರದಾಯ ನಂಬಿಕೆಗಳಿಗೆ ತಕ್ಕಂತೆ ವೈಶಿಷ್ಟ್ಯವನ್ನು ಪಡೆದಿರುತ್ತವೆ.

ಈ ರೀತಿ ಕಾಲದಿಂದ ಕಾಲಕ್ಕೆ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಯ ಜನರ ಸಂಪ್ರದಾಯ ನಂಬಿಕೆಗಳಿಗೆ ಒಳಗಾಗಿರುವ ಹಬ್ಬಗಳಲ್ಲಿ ಗ್ರಾಮದೇವತೆಯ ಹಬ್ಬವೂ ಒಂದಾಗಿದೆ. ಈ ಹಬ್ಬವನ್ನು ಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಲ್ಲಿಯೂ ಆಚರಿಸುತ್ತಾರೆ. ಕೆಲವು ಹಳ್ಳಿಗಳಲ್ಲಿ ಯುಗಾದಿ ಹಬ್ಬ ಇನ್ನೊಂದು ಹದಿನೈದು ದಿನ ಅಥವಾ ಒಂದು ವಾರವಿದೆ ಎನ್ನುವಾಗಲೇ ಆಚರಿಸುತ್ತಾರೆ. ಆಷಾಢ ಮಾಸದಲ್ಲಿ ಆಚರಿಸುವವರು ತುಂಬಾ ಕಡಿಮೆ. ಆದರೆ ಇಂತಹ ಗ್ರಾಮದೇವತೆಯ ಹಬ್ಬವನ್ನು ಆಷಾಢಮಾಸದಲ್ಲಿ ಆಚರಿಸುವ ಹಳ್ಳಿಯೆಂದರೆ, ನೂತನವಾಗಿ ರಚಿತವಾಗಿರುವ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಚಂಗಚಹಳ್ಳಿಯಲ್ಲಿ ವರ್ಷಕ್ಕೊಂದಾವರ್ತಿ ಈ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

ಜಿಲ್ಲೆಯ ಪುಟ್ಟ ತಾಲೂಕು ಎನಿಸಿರುವ ಯಳಂದೂರಿನಿಂದ ಕೇವಲ ಮೂರು ಕಿ.ಮೀ. ದೂರವಿರುವ ಹಳ್ಳಿ ಚಂಗಚಹಳ್ಳಿ, ಕೇವಲ ೨೫೦ ಮನೆಗಳನ್ನು ಹೊಂದಿರುವ ಈ ಹಳ್ಳಿಯಲ್ಲಿ ಹಲವಾರು ಜಾತಿಯ ಜನರು ವಾಸವಾಗಿದ್ದಾರೆ. ಅವರಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುವವರೆಂದರೆ ಪರಿಶಿಷ್ಟ ಜಾತಿಗೆ ಸೇರಿದವರು. ಇವರ ಜೊತೆಗೆ ಕುರುಬಗೌಡ, ನಾಯಕರು ಕಡಿಮೆ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಅಗಸರು, ಶೆಟ್ಟರು ಮತ್ತು ಕೆಲಸಿಗಳು (ಕ್ಷೌರಿಕರು) ಅಲ್ಪ ಪ್ರಮಾಣದಲ್ಲಿದ್ದಾರೆ.

ಚಂಗಚಹಳ್ಳಿ ಮಾರಿಹಬ್ಬವನ್ನು ಈ ಊರಿನ ಜನತೆಯ ಜೊತೆಗೆ ಪಕ್ಕದ ಹಳ್ಳಿಯಾದ ಹೆಗ್ಗಡಹುಂಡಿ ಎಂಬ ಗ್ರಾಮದ ಜನರೂ ಒಟ್ಟಾಗಿ ಸೇರಿ ಆಚರಿಸುತ್ತಾರೆ. ಅಲ್ಲಿ ವಾಸಮಾಡುವ ಜನರು ಕೇವಲ ಕುರುಬಗೌಡರು ಮಾತ್ರ.

ಈ ಮಾರಿಹಬ್ಬವನ್ನು ಪ್ರತಿವರ್ಷವೂ ಆಷಾಢ ಮಾಸದಲ್ಲಿಯೇ ಮಾಡುತ್ತಾರೆ. ಏಕೆಂದರೆ, ಆಷಾಢ ಸಂತುಷ್ಟಿಯ ಕಾಲ. ಕಾರುಭತ್ತ, ಹೊಸಜೋಳ, ರಾಗಿ, ಎಳ್ಳು ಬೆಳೆ ಬರುತ್ತಿತ್ತು. ಹಿಂದೆ ಎಲ್ಲರಿಗೂ ಬಡತನವಿದ್ದುದರಿಂದ ಈ ಕಾಲದಲ್ಲಿ ಬೆಳೆ ಬರುತ್ತಿತ್ತು. ಭೀಮನ ಅಮಾವಾಸ್ಯೆ ಯಾವ ದಿನ, ಯಾವ ತಿಂಗಳಲ್ಲಿ ಬರುತ್ತದೆ ಎಂಬುದನ್ನು ನೋಡಿಕೊಂಡು ಈ ಹಬ್ಬದ ಸಿದ್ಧತೆಗೆ ಜನ ತೊಡಗುತ್ತಾರೆ.

ಹಬ್ಬ ಪ್ರಾರಂಭವಾಗಲು ಇನ್ನು ಹದಿನೈದು ದಿನಗಳಿವೆ ಎಂದು ತಿಳಿದಾಗ ಎರಡು ಊರಿನ ಪ್ರಮುಖರು ಮಾರಮ್ಮನ ದೇವಸ್ಥಾನಕ್ಕೆ ಬಂದು ಪ್ರಸಾದ ಕೇಳುತ್ತಾರೆ. ಮಾರಮ್ಮನ ಮೂರ್ತಿಯ ತಲೆಯ ಮೇಲಿಂದ ಹೂವು ಬಲಗಡೆ ಬಿದ್ದರೆ ಎಲ್ಲರೂ ಸಂತೋಷದಿಂದ ಯಾವ ತೊಂದರೆಯೂ ಇಲ್ಲ ಎಂದು ಹಬ್ಬದ ಸಿದ್ಧತೆಗೆ ತೊಡಗುತ್ತಾರೆ. ಆಕಸ್ಮಿಕವಾಗಿ ಪ್ರಸಾದ ಎಡಗಡೆ ಬಿದ್ದರೆ ಅಥವಾ ವಿಗ್ರಹದಿಂದ ಎಲ್ಲಾ ಹೂವುಗಳು ಒಟ್ಟಿಗೇ ಕುಸಿದು ಬಿದ್ದರೆ ಆ ವರ್ಷ ಹಬ್ಬದ ಆಚರಣೆಯನ್ನು ಕೈ ಬಿಡುತ್ತಾರೆ. ಈ ರೀತಿ ಮಾರಮ್ಮನ ಬಳಿ ಪ್ರಸಾದ ಕೇಳಿ ಅಲ್ಲಿಂದ ಒಪ್ಪಿಗೆ ಸಿಕ್ಕುವುದಕ್ಕೆ 'ರಂಗ ಉಗ್ಗುವುದು' ಎಂದು ಹೆಸರು. ಈ ರಂಗ ಉಗ್ಗುವಿಕೆಯ ದಿನ ಮಂಗಳವಾರವಾಗಿರಬೇಕು. ಹಬ್ಬಕ್ಕೆ ನಾಂದಿಯಾದ ಈ ಮಂಗಳವಾರ ಮುಕ್ತಾಯವಾಗುವುದು ಮಂಗಳವಾರವೇ. ಸತತವಾಗಿ ನಾಲ್ಕು ದಿನಗಳು ನಡೆಯುವ ಈ ಹಬ್ಬವು 'ರಂಗ ಒಪ್ಪಿಸುವಿಕೆ'ಯೊಂದಿಗೆ ಮುಕ್ತಾಯವಾಗುತ್ತದೆ.

ಹಿನ್ನೆಲೆ

ಚಂಗಚಹಳ್ಳಿ ಮಾರಮ್ಮನ ಉಗಮದ ಬಗ್ಗೆ, ಆ ಹಬ್ಬದ ವಿಶಿಷ್ಟ ಆಚರಣೆಯ ಬಗ್ಗೆ ಒಂದು ವಿಸ್ಮಯವಾದ, ಆಶ್ಚರ್ಯ ತರುವಂಥ ಹಿನ್ನೆಲೆಯಿದೆ. ಈ ಹಳ್ಳಿಯ ಗೌಡ ನಡಕೇರಪ್ಪ. ಅವನ ಮಲೆಯಲ್ಲಿ ಒಂದು ಹಸು ಕರುಹಾಕಿದ ದಿನದಿಂದ ಒಂದು ದಿನವೂ ಕರುವಿಗೆ ಹಾಲು ಕುಡಿಸುತ್ತಿರಲಿಲ್ಲವಂತೆ. ಇದನ್ನು ತಿಳಿದ ಆ ಮನೆಯ ಆಳುಗಳು ಇದನ್ನು ಪತ್ತೆ ಹಚ್ಚಲು ಹಸುವನ್ನು ಮೇಯಲು ಬಿಟ್ಟು ಮರೆಯಲ್ಲಿ ನಿಂತು ಗಮನಿಸುತ್ತಿದ್ದರಂತೆ. ಆಗ ಹಸು ಬೇಲಿಯಲ್ಲಿ ನಿಂತು ಹಾಲು ಸುರಿಸುತ್ತಿರುವುದನ್ನು ನೋಡಿ ಬೆರಗಾಗಿ ತಕ್ಷಣ ಗೌಡನಿಗೆ ವಿಷಯವನ್ನು ತಿಳಿಸಿದರಂತೆ. ಗೌಡನು ಊರಿನಲ್ಲಿ ಕೆಲವರನ್ನು ಕರೆದುಕೊಂಡು ಹೋಗಿ ಆ ಬೇಲಿಯನ್ನು ಕಡಿಸಿ ನೋಡಿದಾಗ ಅಲ್ಲೊಂದು ದೇವತೆಯ ಕೆತ್ತನೆಯಿರುವ ಕಲ್ಲು ಇತ್ತಂತೆ. ಆಶ್ಚರ್ಯಗೊಂಡ ಅವರೆಲ್ಲರೂ ಇಲ್ಲಿ ಕಲ್ಲಿನ ದೇವರು ಒಡೆದು ಮೂಡಿರಬಹುದೆಂದು ಅದಕ್ಕೊಂದು ಜೋಪಡಿಯನ್ನು ಕಟ್ಟಿಸಿ ಅಲ್ಲಿಗೊಬ್ಬ ಪೂಜಾರಿಯನ್ನು ನೇಮಿಸಿದರಂತೆ. ಅವನೊಂದು ದಿನ ಪೂಜೆ ಮಾಡುತ್ತಿದ್ದಾಗ ಅವನ ಮೈಮೇಲೆ ದೇವರು ಬಂದಿತಂತೆ. ಆಗ ಆ ಊರಿನ ಜನತೆ

ನೀನಾರು? ಏಕೆ ಬಂದೆ? ಎಂದು ಪ್ರಶ್ನಿಸಿದಾಗ ನಾನು ಚಂಗಚಹಳ್ಳಿ ಮಾರಮ್ಮ, ಹನ್ನೆರಡಾಳು ಉದ್ದದಿಂದ ಒಡೆದು ಮೂಡಿ ಬಂದಿದ್ದೇನೆ ಎಂದು ಆ ಪೂಜಾರಿಯ ಮೈ ಮೇಲೆ ಬಂದಿದ್ದ ಮಾರಮ್ಮ ಉತ್ತರಿಸಿತಂತೆ. ನಂತರ ಗೌಡನು ನಿನಗೆ ಹಬ್ಬ ಮಾಡಬೇಕೆ ಎಂದು ಕೇಳಿದಾಗ ಹೌದೆಂದು ಹೇಳಿ ಮಾರಮ್ಮ ಆ ಪೂಜಾರಿಯ ಮೈ ಮೇಲಿಂದ ಹೊರಟು ಹೋದಳಂತೆ. ಅಂದಿನಿಂದ ಅಂದರೆ ಸುಮಾರು ೬೦-೭೦ ವರ್ಷದಿಂದ ಈ ಹಬ್ಬವನ್ನು ಆಚರಿಸಿಕೊಂಡು ಬಂದಿದ್ದಾರೆ.

ಈ ದೇವಸ್ಥಾನಕ್ಕೆ ಪೂಜಾರಿಯಾಗುವವನು ನಾಯಕ ಜಾತಿಗೆ ಸೇರಿದ ವ್ಯಕ್ತಿ. ಒಮ್ಮೆ ಗ್ರಾಮಸ್ಥರಲ್ಲಿ ಈ ಪೂಜಾರಿಯ ಮೇಲೆ ದೇವರು ಬರುವ ವಿಷಯದಲ್ಲಿ ಸಂಶಯಬಂದು ಪೂಜಾರಿಯನ್ನು ಟೀಕೆ ಮಾಡಿದ್ದರಿಂದ ಅವರಲ್ಲಿಯೇ ದೊಡ್ಡ ಜಗಳ ನಡೆದು ನಂಜನಗೂಡಿನ ಪೊಲೀಸ್ ಸ್ಟೇಷನ್‌ನಲ್ಲಿ ಕೇಸ್ ದಾಖಲಿಸಿ ಪೂಜಾರಿ ಸಮೇತ ಆ ಜಗಳದಲ್ಲಿ ಪಾಲ್ಗೊಂಡವರೆಲ್ಲಾ ಜೈಲು ಸೇರಿದರಂತೆ. ಪೊಲೀಸರು ಒಂದು ದಿನ ಜೈಲಿನಲ್ಲಿದ್ದವರಿಂದ ಕೆಲಸ ಮಾಡಿಸಲು ಹುಲ್ಲು ಅಗೆಯುವಂತೆ ಹೇಳಿ ಎಲ್ಲರಿಗೂ ಗುದ್ದಲಿ ಕೊಟ್ಟರಂತೆ. ಗುದ್ದಲಿ ಕೊಟ್ಟ ಅವರು ಅದಕ್ಕೆ ಹಿಡಿದುಕೊಳ್ಳಲು ಹಿಡಿ ಕೊಡಲಿಲ್ಲವಂತೆ. ಹಿಡಿಯನ್ನು ಕೊಡಿ ಎಂದು ಪೂಜಾರಿ ಕೇಳಿದ್ದಕ್ಕೆ ಹಿಡಿಯಿಲ್ಲವೆಂದು ಬಾಳೆದಿಂಡು ಕೊಟ್ಟರಂತೆ. ಇದರಿಂದ ಚಿಂತೆಗೀಡಾದ ಪೂಜಾರಿ ಮಾರಮ್ಮನನ್ನು ನೆನೆದು ನೀನು ಖಂಡಿತವಾಗಿಯೂ ಒಡೆದು ಮೂಡಿ ಬಂದಿದ್ದಾದರೆ, ನನ್ನ ಮೈಮೇಲೆ ನೀನು ಬರುವುದು ಸತ್ಯವಾಗಿದ್ದರೆ ಈ ಬಾಳೆದಿಂಡು ಮರದ ಹಿಡಿಯಾಗಿ ಹುಲ್ಲು ಅಗೆಯುವಂತಾಗಲಿ ಎಂದು ಕೈ ಜೋಡಿಸಿದನಂತೆ. ಆಗ ಬಾಳೆದಿಂಡು ಮರದ ಹಿಡಿಯಾಗಿ ಪರಿವರ್ತನೆಗೊಂಡು ಅವನು ಹುಲ್ಲು ಅಗೆದನಂತೆ. ಇದರಿಂದ ವಿಸ್ಮಿತರಾದ ಪೊಲೀಸರು ಇವನೇ ನಿಜವಾದ ಪೂಜಾರಿ ಎಂದು ಅವರನ್ನೆಲ್ಲಾ ಜೈಲಿನಿಂದ ಬಿಡುಗಡೆ ಮಾಡಿದರಂತೆ. ಅಂದಿನಿಂದ ಇಂದಿನವರೆಗೂ ಆ ಪೂಜಾರಿಯ ವಂಶದವರೇ ದೇವಸ್ಥಾನದಲ್ಲಿ ಪೂಜೆ ಮಾಡುತ್ತಾ ಬಂದಿದ್ದಾರೆ.

ಹಬ್ಬದ ಪ್ರಾರಂಭ

ಚಂಗಚಹಳ್ಳಿ ಮಾರಿಹಬ್ಬವು ಮಂಗಳವಾರ ರಂಗ ಉಗ್ಗುವುದರಿಂದ ಪ್ರಾರಂಭವಾಗಿ ಮತ್ತೆ ಮುಂದಿನ ಮಂಗಳವಾರ ರಂಗ ಒಪ್ಪಿಸುವುದರ ಮೂಲಕ ಅಂದರೆ ೨ಂನೆಯ ದಿನಕ್ಕೆ ಕೊನೆಗೊಳ್ಳುತ್ತದೆ. ಹಬ್ಬವು ಪ್ರಮುಖವಾಗಿ ನಾಲ್ಕು ದಿನಗಳು ನಡೆಯುತ್ತದೆ. ಅಂದರೆ ಬುಧವಾರ ಪ್ರಾರಂಭವಾದ ಹಬ್ಬ ಶನಿವಾರದಂದು ಮುಗಿಯುತ್ತದೆ.

ಬುಧವಾರ

ಈ ದಿನ ಪ್ರತಿಯೊಂದು ಮನೆಯಲ್ಲಿಯೂ ಸಡಗರ ಸಂಭ್ರಮ. ಊರಿನ ಒಂದೊಂದು ಮನೆಯೂ ಮದುವೆಗೆ ಹೊರಟಿರುವ ಮದುವಣಗಿತ್ತಿಯಂತೆ ಶೋಭಿಸುತ್ತಿರುತ್ತದೆ. ಈ ದಿನ ಬೆಳಿಗ್ಗೆ ೬.೩೦ರ ವೇಳೆಗೆ ಪರಿಶಿಷ್ಟ ಜಾತಿಯ ಜನರನ್ನು ಹೊರತುಪಡಿಸಿ ಇನ್ನುಳಿದ ಜಾತಿಯವರೆಲ್ಲಾ ತಂಬಿಟ್ಟಿನ ಆರತಿಯನ್ನು ತರುತ್ತಾರೆ. ಪ್ರತಿ ಮನೆಯ ಗಂಡಸರೆಲ್ಲರೂ ಹೊಸ

ಬಟ್ಟೆ ಧರಿಸಿ, ವಿಧವಿಧವಾಗಿ ಅಲಂಕಾರ ಮಾಡಿದ ತಂಬಿಟ್ಟಿನ ಆರತಿಯನ್ನು ಹಿಡಿದು ಊರಿನ ಪ್ರಮುಖ ರಸ್ತೆಯಲ್ಲಿ ಸಾಲಾಗಿ ವಾದ್ಯ ಸಮೇತವಾಗಿ ಬರುತ್ತಾರೆ. ಈ ಕಂಚಿನ ತಟ್ಟೆಯಲ್ಲಿ ತಂಬಿಟ್ಟನ್ನು ಅಲಂಕಾರ ಮಾಡಿ ಇಟ್ಟಿರುತ್ತಾರೆ. ಅದರ ಜೊತೆಗೆ ದೀಪವನ್ನು ಹಚ್ಚಿಟ್ಟಿರುತ್ತಾರೆ. ಗಂಧದಕಡ್ಡಿಯನ್ನು ಉರಿಸುತ್ತಾರೆ. ಇದಕ್ಕೆ "ತಂಪು ತರುವುದು" ಎಂದು ಕರೆಯುವರು. ದೇವಸ್ಥಾನಕ್ಕೆ ಎಲ್ಲರೂ ಹೋಗಿ ಅದನ್ನು ಪೂಜೆ ಮಾಡಿಸಿಕೊಂಡು ವಾದ್ಯ ಸಮೇತವಾಗಿ ಹಾಗೇ ಮನೆಗಳಿಗೆ ಹಿಂದಿರುಗುತ್ತಾರೆ.

ಸಂಜೆಯಾಗುತ್ತಿದ್ದಂತೆಯೇ ದೇವಸ್ಥಾನವನ್ನು ವಿದ್ಯುತ್ ಬಲ್ಬ್‌ಗಳಿಂದ ಅಲಂಕರಿಸುತ್ತಾರೆ. ಪ್ರತಿಯೊಂದು ವಿದ್ಯುತ್ ಕಂಬಕ್ಕೂ ಸೌಂಡ್ ಸ್ಪೀಕರ್ ಕಟ್ಟುವುದರ ಜೊತೆಗೆ ಮೆರವಣಿಗೆ ಹೊರಡುವ ಪ್ರಮುಖ ರಸ್ತೆಗೆ ಸಣ್ಣ ಸಣ್ಣ ವಿದ್ಯುತ್ ಬಲ್ಬ್‌ಗಳನ್ನು ಜೋಡಿಸುತ್ತಾರೆ.

ಈ ರಾತ್ರಿ ಯಾರ ಮನೆಯಲ್ಲಿಯೂ ಅಡುಗೆ ಮಾಡುವುದಿಲ್ಲ. ಅಂದರೆ ಅನ್ನ, ಸಾರು ಬಿಟ್ಟು ಉಪ್ಪಿಟ್ಟು, ಇಡ್ಲಿ ಇತ್ಯಾದಿಯಾಗಿ ಕಾಫಿ, ತಿಂಡಿ ಮಾಡಿ ಬಂದ ನೆಂಟರಿಗೆಲ್ಲಾ ಬಡಿಸುತ್ತಾರೆ. ಇದು ಹಿಂದಿನಿಂದಲೂ ಈ ಊರಿನ ಜನರು ರೂಢಿಸಿಕೊಂಡು ಬಂದಿರುವ ಪದ್ಧತಿ. ರಾತ್ರಿ ೯ ಗಂಟೆಯ ನಂತರ ಊರಿನ ಎಲ್ಲರೂ ಹೊಸ ಮಡಕೆಯಲ್ಲಿ ಅಕ್ಕಿ ಮತ್ತು ಬೆಲ್ಲ ಹಾಕಿ ಬೇಯಿಸಲು ದೇವಸ್ಥಾನಕ್ಕೆ ಹೋಗುತ್ತಾರೆ. ಈ ರೀತಿ ಮಾಡುವುದಕ್ಕೆ 'ಮಡೆಹುಯ್ಯುವುದು" ಎಂದು ಹೆಸರು. ಈ ಮಡೆ ಹುಯ್ಯಲು ಬೇರೆ ಬೇರೆ ಊರಿನಿಂದಲೂ ಹರಕೆ ಹೊತ್ತವರು ಬರುತ್ತಾರೆ. ದೇವಸ್ಥಾನದ ಸುತ್ತಲೂ ಒಲೆ ತೋಡಿಕೊಂಡು ಅಲ್ಲಿ ಮಡೆ ಬೇಯಿಸುತ್ತಾರೆ. ಈ ಕೆಲಸವನ್ನು ಗಂಡಸರು ಮಾಡಬೇಕು. ಮಡೆ ಬೇಯಿಸಿದ ಮಡಕೆಗಳನ್ನು ಮತ್ತೆ ಬೆಳಗಾಗುವವರೆಗೆ ಅಲ್ಲಿಯೇ ಜೋಡಿಸಿ ಇಡುತ್ತಾರೆ.

ಬೆಳಗಿನ ಜಾವ ೪ ಗಂಟೆಯ ವೇಳೆಗೆ ಮೆರವಣಿಗೆಯು ಚಿಕ್ಕಮ್ಮನ ಗುಡಿಯಿಂದ ಹೊರಡುತ್ತದೆ. ಈ ಚಿಕ್ಕಮ್ಮನ ಗುಡಿಯಲ್ಲಿ ದೇವರಿಗೆ ತೊಡಿಸುವ ಒಡವೆ ವಸ್ತ್ರ, ದೇವಸ್ಥಾನದ ಸಾಮಾನೆಲ್ಲವನ್ನೂ ಇಟ್ಟಿರುತ್ತಾರೆ. ಅಷ್ಟು ಹೊತ್ತಿಗೆ ಉಪವಾಸವಿದ್ದು ಹರಕೆ ಹೊತ್ತ ಹೆಣ್ಣು ಮಕ್ಕಳು ಪಂಜು ಉರಿಸಲು ಹೋಗುತ್ತಾರೆ. ಈ ಮೆರವಣಿಗೆಯ ಕೇಂದ್ರ ವ್ಯಕ್ತಿಗಳು ಪೂಜಾರಿ ಮತ್ತು ಅವನ ಮಗಳು. ಇಲ್ಲಿ ಪೂಜಾರಿಗೆ ಮತ್ತು ಅವನ ಮಗಳಿಗೆ ದೇವರು ಬರುತ್ತದೆ. ಪೂಜಾರಿಯ ಮಗಳು ಕೇಲುಗುಂಭ ಹೊತ್ತಿರುತ್ತಾಳೆ. ಅಂದರೆ ಮಣ್ಣಿನ ಮಡಕೆಗೆ ಅಡಿಕೆಯ ಹೂ ಹೊಂಬಾಳೆ ಹಾಕಿ ಚಿತ್ರಿಸಿ ಅದನ್ನು ಕೇಲು ತರುವ ಹುಡುಗಿಗೆ ಕೊಡುತ್ತಾರೆ. ಆಕೆ ಅದನ್ನು ತಲೆಯ ಮೇಲೆ ಹೊತ್ತುಕೊಂಡು ನಡೆಯಬೇಕು. ಇವರು ನಡೆವ ಹಾದಿಗೆ ಮಡಿಯನ್ನು ಹಾಸಿಕೊಂಡು ಹೋಗುತ್ತಾರೆ. ಇದಕ್ಕೆ "ಕೇಲು ತರುವುದು" ಎಂದು ಹೆಸರು. ಇಲ್ಲಿ ಕೇಲು ತರುವ ಹುಡುಗಿ ೧೨ ವರ್ಷಕ್ಕಿಂತ ಕಡಿಮೆ ವಯಸ್ಸಿನವಳಾಗಿರಬೇಕು. ಅಂದರೆ ಅವಳು ಇನ್ನೂ ಋತುಮತಿಯಾಗಿರಬಾರದು.

ಮೆರವಣಿಗೆ ಹೊರಟಾಗ ಮುಂದೆ ಮುಂದೆ ಚಿಕ್ಕ ಹುಡುಗರು ಸತ್ತಿಗೆ, ಸುರಿಪಾಣಿ ಮುಂತಾದವುಗಳನ್ನು ಹಿಡಿದುಕೊಂಡು ಹೋಗುತ್ತಿರುತ್ತಾರೆ. ಇವರ ಜೊತೆಯಲ್ಲಿ ವಾದ್ಯದವರೂ

ಇರುತ್ತಾರೆ. ನಂತರ ಪಂಜು ಉರಿಸುವ ಮಕ್ಕಳು, ಹುಡುಗಿಯರು, ಹೆಂಗಸರು ಎಲ್ಲರೂ ಸಾಲಾಗಿ ಹೋಗುತ್ತಾರೆ. ಇವರೆಲ್ಲಾ ಹೊಸ ಬಟ್ಟೆ ಧರಿಸಿ, ಗಮಗಮಿಸುವ ಹೂ ಮೂಡಿದು ಪಂಜು ಹಿಡಿದು ಬರುತ್ತಾರೆ. ಇವರ ಹಿಂದೆಯೇ ದೇವರು ಬರುವುದು. ಪೂಜಾರಿಯ ಮೈ ಮೇಲೆ ಕೆಂಪು ಶಲ್ಯ, ಹಳದಿ ಮಿಶ್ರಿತ ಕೆಂಪು ಪಂಚೆ ಇರುತ್ತವೆ. ತಲೆಯ ಮೇಲೆ ಕುಂಕುಮ, ಕೊರಳಿಗೆ ಹಾರ ಹಾಕಿರುತ್ತಾರೆ.

ಜೊತೆಗೆ ದಾರಿಯಲ್ಲಿ ಮಧ್ಯ ಮಧ್ಯ ನಿಂತು ಹೋಗುತ್ತದೆ. ಆಗ ಕೂಡ ಹರಕೆ ಹೊತ್ತವರು ಹಾರ ಹಾಕಿ ಕೈ ಮುಗಿಯುತ್ತಾರೆ. ಇದರ ಹಿಂದೆ ಕೇಲು ಹೊತ್ತವಳು ಬರುವುದು. ಇವಳಿಗೂ ದೇವರು ಬಂದಿರುತ್ತದೆ. ಹಾಗಾಗಿ ಇವಳನ್ನು ಹಿಡಿದುಕೊಂಡಿರುತ್ತಾರೆ. ಈಕೆಗೆ ಸೀರೆ ಉಡಿಸಿ, ತಲೆ ತುಂಬಾ ಹೂ ಮುಡಿಸಿ, ತಲೆಯ ಮೇಲೆ ಕೇಲುಗುಂಭವನ್ನು ಹೊತ್ತಿಸಿರುತ್ತಾರೆ. ಕೊನೆಯಲ್ಲಿ ಬರುವವರು ಹರಕೆ ಹೊತ್ತು ಬಾಯಿಬೀಗ ಹಾಕಿಸಿಕೊಂಡು ತಂಬಿಟ್ಟಿನ ಆರತಿಯನ್ನು ಹಿಡಿದಿರುವ ಹೆಂಗಸರು ಬಾಯಿ ಬೀಗ ಅಂದರೆ ತಂತಿಯಿಂದ ಎರಡೂ ಕೆನ್ನೆಗೂ ಚುಚ್ಚಿಸಿಕೊಂಡಿರುತ್ತಾರೆ. ಇದನ್ನು ಚುಚ್ಚಿಸಿಕೊಳ್ಳಲು ಇವರು ಉಪವಾಸ ಇರಬೇಕು. ಇದರ ಜೊತೆಯಲ್ಲಿಯೇ ಊರಿನ ಜನರೆಲ್ಲಾ ಮೆರವಣಿಗೆಯಲ್ಲಿ ಹೊರಡುತ್ತಾರೆ. ಹೀಗೆ ಹೋಗುವಾಗ ಸಂತೋಷಕ್ಕಾಗಿ ಆಗಾಗ ಪಟಾಕಿಗಳನ್ನು ಹೊಡೆಯುತ್ತಾರೆ.

ಮೆರವಣಿಗೆ ದೇವಸ್ಥಾನಕ್ಕೆ ಬರುವ ಹೊತ್ತಿಗೆ ಬೆಳಗಿನ ೬ ಅಥವಾ ೬-೩೦ ಗಂಟೆಯಾಗಿರುತ್ತದೆ. ಇಷ್ಟರಲ್ಲಿ ದೇವಸ್ಥಾನದ ಸುತ್ತಲೂ ಜನರೆಲ್ಲಾ ನೆರೆದಿರುತ್ತಾರೆ. ಈ ಕೇಲು ಬರುವುದು ಮೊದಲು ಚಂಗಚಹಳ್ಳಿ ಮಾರಮ್ಮನ ತಂಗಿಯಾದ ಬಿಸಿಲು ಮಾರಮ್ಮನ ಗುಡಿಗೆ. ಇಲ್ಲಿ ಪೂಜಾರಿ ಹಿಡಿಗಾಯಿ ಒಡೆದು, ಮಂಗಳಾರತಿ ಮಾಡಿದ ನಂತರ ದೇವರು ಮಾರಮ್ಮನ ದೇವಸ್ಥಾನಕ್ಕೆ ಹೋಗುತ್ತದೆ. ಪಂಜು ಹಿಡಿದಿರುವವರು, ತಂಬಿಟ್ಟಿನ ಆರತಿಯನ್ನು ಹಿಡಿದವರು ಉತ್ಸವಮೂರ್ತಿಯೊಡನೆ ಎಲ್ಲರೂ ವಾದ್ಯ ಸಮೇತವಾಗಿ ದೇವಸ್ಥಾನವನ್ನು ಮೂರು ಬಾರಿ ಸುತ್ತು ಹಾಕುತ್ತಾರೆ. ಹೀಗೆ ಸುತ್ತು ಹಾಕುತ್ತಿರುವಾಗ ಮಕ್ಕಳಿಗೆ ಹುಷಾರಿಲ್ಲದಿರುವಾಗ ಹರಕೆ ಹೊತ್ತವರು ಅವರ ಕೈಯಿಂದ ಎಲೆಯನ್ನು ಎಸೆಯಿಸುತ್ತಾರೆ. ಇದಕ್ಕೆ 'ಸೂರೆಲೆಯಿಡುವುದು" ಎನ್ನುವರು. ಇನ್ನು ಕೆಲವರು ಕಾಸನ್ನು ಕೂಡ ಎಸೆಯುತ್ತಾರೆ. ಈ ಸಮಯವು ಊರಿನಲ್ಲಿರುವ ಪ್ರತಿಯೊಬ್ಬರೂ ಮನೆಯಿಂದ ಹೊರಗೆ ಬರಲು ಸದವಕಾಶ ಎನ್ನಬಹುದು. ಇಲ್ಲಿ ಬರುವ ಹೆಂಗಸು, ಮಕ್ಕಳು, ಹುಡುಗಿಯರ ಅಲಂಕಾರ, ಉಡುಪು, ನಿನಗಿಂತ ನಾನೇನು ಕಡಿಮೆಯಿಲ್ಲ ಎನ್ನುವಂತಿರುತ್ತದೆ. ಜೊತೆಗೆ ಈ ಹಬ್ಬ ಆಷಾಢದಲ್ಲಿ ನಡೆಯುವುದರಿಂದ ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳೆಲ್ಲಾ ತವರು ಮನೆಯಲ್ಲಿಯೇ ಇರುತ್ತಾರೆ. ಮೆರವಣಿಗೆ ಸಮಯದಲ್ಲಿ ಎಲ್ಲಿ ನೋಡಿದರೂ ಹೊಸ ಜನರು, ನೆಂಟರು, ಅವರ ಸಂಭ್ರಮ ಹೇಳತೀರದು. ಮೆರವಣಿಗೆ ಮುಗಿದಾಗ ಎಲ್ಲರೂ ಮನೆಗಳಿಗೆ ತೆರಳುತ್ತಾರೆ.

ಇದಾದ ಬಳಿಕ ಕೆಲವರು ಮುಮ್ಮಡೆಗೆ ಮರಿತೆಗೆದು ಕೊಡುತ್ತೇವೆಂದು ಅಕ್ಕಿ ಕೊಡುತ್ತೇವೆಂದು ಹರಕೆ ಹೊತ್ತಿರುತ್ತಾರೆ. ಅಂದರೆ, ದೇವಸ್ಥಾನದಲ್ಲಿ ಎಲ್ಲರೂ ಮಡೆ ಬೇಯಿಸುವುದಕ್ಕಿಂತ ಮುಂಚೆ

ಪೂಜಾರಿಯ ಕಡೆಯವರು ಅಕ್ಕಿಯನ್ನು ಬೇಯಿಸಿ ಇಟ್ಟಿರುತ್ತಾರೆ. ಮುಮ್ಮಡೆ ಅಂದರೆ ಮೊದಲನೆಯ ಮಡೆ ಪೂಜೆ ಎಂದರ್ಥ. ಈ ಅನ್ನದ ಜೊತೆಗೆ ಹರಕೆ ಹೊತ್ತವರು ಕೊಟ್ಟ ಮೇಕೆಯನ್ನು ಕಡಿದು ಅದರ ರಕ್ತವನ್ನು ಅನ್ನಕ್ಕೆ ಕಲಸಿ ದೇವಸ್ಥಾನದ ಸುತ್ತಲೂ ಅದನ್ನು ಎಸೆಯುತ್ತಾರೆ. ಇದನ್ನು ಎಸೆಯುವಾಗ ಒಂದು ಅಗಳೂ ಸಹ ಕೆಳಗೆ ಬೀಳುವುದಿಲ್ಲ. ಇದಕ್ಕೆ 'ರಸಮುದ್ರೆ ಇಡುವುದು' ಎನ್ನುವರು. ಇದನ್ನು ಎಸೆಯುವವರು ಪೂಜಾರಿ, ಕೇಲುಮನೆ ತಮಡಪ್ಪ. ಇವರನ್ನು ಬಿಟ್ಟರೆ ಬೇರೆ ಯಾರೂ ಈ ಸಮಯದಲ್ಲಿ ಇರುವುದಿಲ್ಲ. ಕೇಲುಮನೆ ಪೂಜಾರಿ ಎಂದರೆ, ಪ್ರತಿವರ್ಷವೂ ಕೇಲು ತರುವ ಗುಂಭವನ್ನು ಇಡುವ ಮನೆಯನ್ನು ನೋಡಿಕೊಂಡು ಇವನು ಇರುತ್ತಾನಾದ್ದರಿಂದ ಇವನಿಗೆ ಈ ಹೆಸರು ಬಂದಿದೆ.

ಈ ಹೊತ್ತಿಗಾಗಲೇ ಸುಮಾರು ಬೆಳಗಿನ ೭-೩೦ ಗಂಟೆಯ ಸಮಯವಾಗಿರುತ್ತದೆ. ಎಲ್ಲರೂ ರಾತ್ರಿ ಬೇಯಿಸಿದ ಮಡೆಯನ್ನು ವಾದ್ಯಸಮೇತವಾಗಿ ಮನೆಗಳಿಗೆ ತರುತ್ತಾರೆ. ಅಷ್ಟೊತ್ತಿಗೆ ಬೆಳಗಿನ ಜಾವದಲ್ಲಿಯೇ ಮನೆಯಲ್ಲಿ ಕೋಳಿ ಕಡಿದು ಅಥವಾ ತರಕಾರಿಯ ಸಾರು ಮಾಡಿ ಅಡುಗೆ ಮಾಡಿರುತ್ತಾರೆ. ಮಡೆ ಬಂದಾಗ ದೇವರಿಗೆ ಎಡೆ ಇಟ್ಟು ಧೂಪಹಾಕಿ ಎಲ್ಲರೂ ಊಟ ಮಾಡುತ್ತಾರೆ.

ಗುರುವಾರ

ಹಬ್ಬದ ಎರಡನೆಯ ದಿನ. ಇಂದು ಪರಿಶಿಷ್ಟ ಜಾತಿಯ ಜನರು ಮಾತ್ರ ತಂಬಿಟ್ಟಿನ ಆರತಿಯನ್ನು ಮಾಡುತ್ತಾರೆ. ಅಕ್ಕಿ ನೆನೆಸಿ, ಅದನ್ನು ಕುಟ್ಟಿ, ಬೆಲ್ಲದ ಪಾಕ ತೆಗೆದು ಹಸಕ್ಕಿ ತಂಬಿಟ್ಟನ್ನು ಮಾಡುತ್ತಾರೆ. ತಂಬಿಟ್ಟನ್ನು ಎಲೆ, ಹೂವು ಮುಂತಾದವುಗಳಿಂದ ಚಿತ್ರಿಸಿ, ದೀಪ, ಗಂಧದ ಕಡ್ಡಿ ಹಚ್ಚಿ ಮಧ್ಯಾಹ್ನ ೩ ಗಂಟೆಯ ಸಮಯಕ್ಕೆ ಮೆರವಣಿಗೆಯ ಸಮೇತ ಎಲ್ಲರೂ ಬಿಸಿಲು ಮಾರಮ್ಮನ ಗುಡಿಗೆ ಹೋಗುತ್ತಾರೆ. ಅಲ್ಲಿ ಪೂಜೆ ಮಾಡಿಸಿಕೊಂಡು ಎಲ್ಲರೂ ಮನೆಗಳಿಗೆ ತೆರಳುತ್ತಾರೆ.

ಮಧ್ಯಾಹ್ನ ಚಂಗಚಹಳ್ಳಿ, ಹೆಗ್ಗಡಹುಂಡಿಯ ಹಿರಿಯರು, ಎಲ್ಲ ಜಾತಿಯವರು ಸೇರಿ ಮಾರಮ್ಮನಿಗೆ ಮೇಕೆಯನ್ನು ಒಪ್ಪಿಸಿ ಕಡಿಯುತ್ತಾರೆ. ಪ್ರತಿಯೊಂದು ಮನೆಯಲ್ಲಿಯೂ ಇದಕ್ಕಾಗಿಯೇ ಸರದಿ ಪ್ರಕಾರ ಇಂತಿಷ್ಟು ಎಂದು ಮೊದಲೇ ಹಣ ಕೊಟ್ಟಿರುತ್ತಾರೆ. ಎಲ್ಲ ಮನೆಗೂ ಈ ಮಾಂಸವನ್ನು ಹಂಚುತ್ತಾರೆ. ಈ ಹರಕೆ ಒಪ್ಪಿಸಿದ ನಂತರ ಪರಿಶಿಷ್ಟ ಜಾತಿಯವರನ್ನು ಬಿಟ್ಟರೆ ಬೇರೆಲ್ಲರಿಗೂ ಹಬ್ಬ ಮುಗಿದಂತೆ.

ಶುಕ್ರವಾರ

ಇದು ಹಬ್ಬದ ಮೂರನೆಯ ದಿನ. ಎಲ್ಲರೂ ಮಡಿ ಮಾಡಿಕೊಂಡು ದೇವಸ್ಥಾನಕ್ಕೆ ಬರುತ್ತಾರೆ. ದೇವಸ್ಥಾನದ ಮುಂದೆ ಒಂದು ಗುಂಡಿಯಿದೆ. ಇದಕ್ಕೆ 'ಇಂಡಿಗುಳಿ' ಎನ್ನುವರು. ಮಕ್ಕಳಿಗೆ ಹರಕೆ ಹೊತ್ತವರು ಅವರ ಮೈಗೆ ಬೇವಿನ ಸೊಪ್ಪನ್ನು ಕಟ್ಟಿರುತ್ತಾರೆ. ಈ ಗುಂಡಿಯ ಸುತ್ತಲೂ

ಪ್ರದಕ್ಷಿಣೆ ಹಾಕಿ ೩ ಅಥವಾ ೫ ಚೆಂಬು ನೀರನ್ನು ಹಾಕಬೇಕು. ಅನಂತರ ದೇವಸ್ಥಾನದಲ್ಲಿ ದೇವರಿಗೆ ಧೂಪ ಹಾಕಿ ಮನೆಗೆ ಹೋಗುವುದು. ಕೆಲವರು ಈ ದಿನ ಪಂಚಾಮೃತ ಮಾಡಿಸುತ್ತಾರೆ. ಇಲ್ಲಿಗೆ ನೀರು ಹುಯ್ಯಲು ಬರುವವರು ಹೆಂಗಸರು ಮತ್ತು ಮಕ್ಕಳು ಮಾತ್ರ.

ಮಧ್ಯಾಹ್ನ ಪರಿಶಿಷ್ಟ ಜಾತಿಯವರಲ್ಲಿ ಕೆಲವರು ಮರಿಕಡಿಯುತ್ತಾರೆ. ಕೆಲವರು ಕೋಣವನ್ನು ಕಡಿಯುತ್ತಾರೆ. ಇಂದು ಹೆಚ್ಚಿನ ಸಂಖ್ಯೆಯಲ್ಲಿ ನೆಂಟರು ಬರುತ್ತಾರೆ. ಸಾಯಂಕಾಲ ಮತ್ತೆ ಮೆರವಣಿಗೆ ಹೊರಡುತ್ತದೆ. ಮಾರಮ್ಮನನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ಮಾಡಿಸುವರು. ಮಾರಮ್ಮನ ಮುಖವಾಡ ಹೊರುವುದು ಎರಡು ಅಲಂಕೃತವಾದ ಕುದುರೆಗಳ ಪಲ್ಲಕ್ಕಿ, ಇದರ ಮುಂದೆ ಅಲಂಕಾರ ಮಾಡಿದ ಇಬ್ಬರು ಹೆಂಗಸರ ಬೊಂಬೆಯಿದೆ. ಅವಕ್ಕೆ ಹರಕೆ ಹೊತ್ತವರು ತೆಗೆದುಕೊಟ್ಟಿರುವ ಸೀರೆ ಉಡಿಸುತ್ತಾರೆ.

ರಾತ್ರಿ ಸುಮಾರು ೮ ಅಥವಾ ೯ ಗಂಟೆಯ ವೇಳೆಗೆ ಊರಿನಲ್ಲಿ ಮೊದಲೇ ಗೊತ್ತುಪಡಿಸಿದ ಒಬ್ಬ ಹುಡುಗನಿಗೆ ಮೂಗು ಚುಚ್ಚುತ್ತಾರೆ. ಇದಕ್ಕೆ 'ಮಾಸ್ತಿ ಚುಚ್ಚುವುದು' ಎಂದು ಕರೆಯುವರು. ಮಾಸ್ತಿ ಚುಚ್ಚಿಸಿಕೊಳ್ಳುವ ಹುಡುಗ ೧೦ ಅಥವಾ ೧೨ ವರ್ಷದೊಳಗಿನವನಾಗಿರಬೇಕು. ಈ ರಾತ್ರಿ ದೇವರ ಮನೆಯ ಅಂಗಳದಲ್ಲಿ ಹಿರಿಯರೊಬ್ಬರು ದೇವರ ಹೆಸರೇಳಿ ಈ ಹುಡುಗನಿಗೆ ಮೇಟಿಯಿಂದ ಮೂಗು ಚುಚ್ಚುತ್ತಾರೆ. ಈ ಹುಡುಗ ಶುಕ್ರವಾರ ಪೂರ್ತಿ ಉಪವಾಸವಿರಬೇಕು. ನಂತರ ಈ ಹುಡುಗನನ್ನು ಮೈಲಿಗೆಯಾಗದಂತೆ ಒಂದು ಮನೆಯಲ್ಲಿ ಮಲಗಿಸುತ್ತಾರೆ.

ಶನಿವಾರ

ಹಬ್ಬದ ಕೊನೆಯ ದಿನ. ಇಂಥು ಮಧ್ಯಾಹ್ನ ೧೨ ಗಂಟೆಯ ನಂತರ ಮಾಸ್ತಿ ಚುಚ್ಚಿದ ಹುಡುಗನಿಗೆ ಅಲಂಕಾರ ಮಾಡುವರು. ಬಿಳಿಯ ಸೀರೆ, ರವಿಕೆ ತೊಡಿಸಿ ಕೈಗೆ ಮತ್ತು ಕಾಲಿಗೆ ಬೆಳ್ಳಿಯ ಕಡಗವನ್ನು ತೊಡಿಸುವರು. ಬಣ್ಣದ ಮಿಣುಗುಟ್ಟುವ ಕಾಗದದಿಂದ ಕಿವಿಗೆ ಓಲೆ ಮಾಡಿ ಹಾಕುವರು. ತಾಳೆಯ ಗರಿಯನ್ನು ಅದರ ತುದಿ ಮುಂದೆ ಬರುವಂತೆ ಮಾಡಿ ತಲೆಗೆ ಟವೆಲ್ಲಿನಲ್ಲಿ ಕಟ್ಟುವರು. ಜೊತೆಗೆ ಎರಡೂ ಕೈಗಳಲ್ಲೂ ಅದನ್ನು ಹಿಡಿಸುತ್ತಾರೆ. ಹೀಗೆ ಅಲಂಕಾರ ಮಾಡಿದ ಹುಡುಗನನ್ನು ವಾದ್ಯ ಸಮೇತ ಮೆರವಣಿಗೆ ಕರೆದುಕೊಂಡು ಹೋಗುವರು. ಮೆರವಣಿಗೆ ಮೊದಲು ಹೆಗ್ಗಡಹುಂಡಿಗೆ ಹೋಗುತ್ತದೆ. ಅಲ್ಲಿ ಪ್ರತಿಯೊಂದು ಮನೆಯ ಮುಂದೆ ಮಾಸ್ತಿ ಚುಚ್ಚಿದ ಹುಡುಗನನ್ನು ನಿಲ್ಲಿಸಿಕೊಂಡು ಡೋಲು ಬಾರಿಸುವರು. ಮಕ್ಕಳು, ಹುಡುಗರೆನ್ನದೆ ಎಲ್ಲರೂ ವಾದ್ಯದ ಗತಿಗೆ ತಕ್ಕಂತೆ ಕುಣಿಯುವರು. ಆ ಮನೆಯವರು ಕೊಟ್ಟಷ್ಟು ಹಣವನ್ನು ಪಡೆದು ಬರುತ್ತಾರೆ. ಅದೇ ರೀತಿಯಲ್ಲಿ ಚಂಗಚಹಳ್ಳಿಯಲ್ಲಿಯೂ ಎಲ್ಲರ ಮನೆಯ ಮುಂದೆ ಕುಣಿದು ಕುಪ್ಪಳಿಸಿ ಹಣ ಪಡೆದು ದೇವಸ್ಥಾನಕ್ಕೆ ವಾಪಸ್ಸಾಗುತ್ತಾರೆ.

ಇಷ್ಟೊತ್ತಿಗಾಗಲೇ ಸಂಜೆಯಾಗಿರುತ್ತದೆ. ಊರಿನ ಜನರೆಲ್ಲರೂ ಬಿಸಿಲು ಮಾರಮ್ಮನ ಗುಡಿಯ ಹತ್ತಿರ ಕಿಕ್ಕಿರಿದು ಸೇರಿರುತ್ತಾರೆ. ಎಲ್ಲರೂ ವಾದ್ಯದ ಗತಿಗೆ ತಕ್ಕಂತೆ, ಕೆಲ ಮಕ್ಕಳನ್ನು ಹೆಗಲ ಮೇಲೆ ಕೂಡಿಸಿಕೊಂಡು ಕುಣಿಯುತ್ತಾರೆ. ಇಲ್ಲಿ ಕುಣಿದಾದ ನಂತರ ಎಲ್ಲರೂ ಮಾರಮ್ಮನ

ದೇವಸ್ಥಾನದಲ್ಲಿ ಕುಣಿಯುತ್ತಾರೆ. ಹಬ್ಬದ ಕೊನೆಯ ದಿನವಾದ್ದರಿಂದ ತುಂಬಾ ಹೊತ್ತಿನವರೆವಿಗೂ ಕುಣಿಯುತ್ತಾರೆ. ಜೊತೆಗೆ ಎಲ್ಲರೂ ಪೂಜೆ ಮಾಡಿಸಿಕೊಂಡು ತೀರ್ಥಪ್ರಸಾದ ತೆಗೆದುಕೊಂಡು ಹೋಗುತ್ತಾರೆ. ಎಲ್ಲರದೂ ಪೂಜೆ ಮುಗಿದ ನಂತರ ದೇವರಿಗೆ ಧರಿಸಿದ್ದ ಒಡವೆ ವಸ್ತ್ರಗಳನ್ನೆಲ್ಲಾ ಬಿಚ್ಚಿಕೊಂಡು ಹೋಗುತ್ತಾರೆ. ಅದರಲ್ಲಿ ಮುಖ್ಯವಾಗಿ ಮಾರಮ್ಮನ ಮುಖವಾಡ, ಅಡ್ಡಿಗೆ, ಜೋಮಾಲೆ, ತಾಲಿ, ಕಿಲೀಲ ಮುಂತಾದುವನ್ನು ತೆಗೆದುಕೊಂಡು ಹೋಗುತ್ತಾರೆ.

ಮಾಸ್ತಿ ಚುಚ್ಚಿದ ಹುಡುಗನಿಗೆ ಉಡುಪು ಬದಲಿಸುವರು. ಅವನಿಗೆ ತಿನ್ನಲು ಬಾಳೆಹಣ್ಣು ಅಥವಾ ಅನ್ನಕ್ಕೆ ಎಳ್ಳೆಣ್ಣೆ ಮತ್ತು ಬೆಲ್ಲವನ್ನು ಹಾಕಿ ಕೊಡುವರು. ಇದಕ್ಕೆ 'ಒಂದ್ಹೊತ್ತು ಬಿಡುವುದು' ಎಂದು ಹೆಸರು. ನಂತರ ಅವನನ್ನು ಒಂದು ಕೋಣೆಯಲ್ಲಿ ಮಲಗಿಸುವರು. ಅವನು ಬೆಳಿಗ್ಗೆ ಏಳುವ ಹೊತ್ತಿಗೆ ಮೂಗಿಗೆ ಚುಚ್ಚಿದ್ದ ಮೇಟಿ ಬಿದ್ದು ಹೋಗಿರುತ್ತದೆ. ಅದನ್ನು ಯಾರೂ ಬಿಚ್ಚುವುದಿಲ್ಲ. ಜೊತೆಗೆ ಮೂಗು ಚುಚ್ಚಿದ್ದ ಗುರುತು ಕೂಡ ಉಳಿಯುವುದಿಲ್ಲ. ಈ ಸೀರೆ, ವಸ್ತ್ರ ಮತ್ತು ಮೇಟಿಯನ್ನು ಮುಂದಿನ ವರ್ಷದ ತನಕ ಜೋಪಾನ ಮಾಡುತ್ತಾರೆ. ಇದು ಊರಿನ ಮಾರಿಹಬ್ಬದ ವಿಶೇಷ.

ಇಷ್ಟು ಸಂಭ್ರಮ, ಸಡಗರದಿಂದ ನಾಲ್ಕು ದಿನಗಳು ಆಚರಿಸಿದ ಮಾರಿಹಬ್ಬ ಶನಿವಾರ ಮುಗಿಯುತ್ತದೆ. ಮಧ್ಯೆ ಭಾನುವಾರ ಮತ್ತು ಸೋಮವಾರ ಬಿಡುವು. ಮಂಗಳವಾರ ಮತ್ತೆ ಎಲ್ಲರೂ ಮನೆ ತೊಳೆದು ಮಡಿ ಮಾಡಿ ದೇವಸ್ಥಾನದಲ್ಲಿ ಪೂಜೆ ಮಾಡಿಸಿ ತೀರ್ಥ ಪ್ರಸಾದ ತೆಗೆದುಕೊಳ್ಳುವುದರ ಮೂಲಕ ಹಬ್ಬ ಮುಕ್ತಾಯವಾಗುತ್ತದೆ. ಇದಕ್ಕೆ 'ರಂಗ ಒಪ್ಪಿಸುವುದು' ಎನ್ನುವರು.

ಎಚ್. ಕೆ. ವೀರಣ್ಣಗೌಡರ ಜೀವನ ಮತ್ತು ಸಾಧನೆ

—ಎಸ್. ಶಿವರಾಮು

ವ್ಯಕ್ತಿ ಸಮಾಜದ ಅವಿಭಾಜ್ಯ ಅಂಗ. ಯಾವುದೇ ವ್ಯಕ್ತಿ ಸಮಾಜಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಾನೆ. ಕೆಲವೊಮ್ಮೆ ಆ ಕೊಡುಗೆಗಳೇ ಅವರ ಹೆಸರನ್ನು ಚಿರಸ್ಥಾಯಿಗೊಳಿಸುತ್ತವೆ. ಅಂತೆಯೇ ಭಾರತದ ಇತಿಹಾಸದಲ್ಲಿ ಹಲವಾರು ವ್ಯಕ್ತಿಗಳು ಸಮಾಜಕ್ಕೆ ಮಹತ್ತರವಾದ ಕೊಡುಗೆಗಳನ್ನು ನೀಡಿ ಅಮರರೆನಿಸಿಕೊಂಡಿದ್ದಾರೆ. ಇವರುಗಳನ್ನು ಇತಿಹಾಸದ ಪುಟಗಳಲ್ಲಿ ಮತ್ತು ಸಮಾಜದಲ್ಲಿ ನಾವು ಇಂದಿಗೂ ಕಾಣಬಹುದಾಗಿದೆ. ಅಂತೆಯೇ ಕರ್ನಾಟಕದ ಇತಿಹಾಸದುದ್ದಕ್ಕೂ ಹಲವು ಮಹಾನ್ ನಾಯಕರು ಸಮಾಜಕ್ಕೆ ಹಲವಾರು ಅಮೂಲ್ಯವಾದ ಕಾಣಿಕೆಯನ್ನು ನೀಡಿರುತ್ತಾರೆ. ಈ ರೀತಿ ಅಮೂಲ್ಯವಾದ ಕಾಣಿಕೆಯನ್ನು ನೀಡಿದ ಮಹಾನ್ ನಾಯಕರಿಗೆ ಸಮಾಜದಲ್ಲಿ ವಿಶಿಷ್ಟವಾದ ಸ್ಥಾನವನ್ನು ನೀಡಿ ಗೌರವಿಸುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ಅಂತಹ ಆದರ್ಶ ಪುರುಷರುಗಳ ಜೀವನ ಮೌಲ್ಯ ರೀತಿ-ನೀತಿ, ನಡಾವಳಿಗಳು ಸಮಾಜದ ಇಂದಿನ ಹಾಗೂ ಮುಂದಿನ ಜನತೆಗೆ ದಾರಿ ದೀಪಗಳಾಗಿವೆ.

ಈ ದಿಸೆಯಲ್ಲಿ ಅಮೂಲ್ಯ ಕೊಡುಗೆಗಳನ್ನು ನೀಡಿದ ಕರ್ನಾಟಕದ ಶ್ರೇಷ್ಠ ಹಾಗೂ ಆದರ್ಶ ನಾಯಕರುಗಳ ಸಾಲಿಗೆ ಸೇರಬಹುದಾದ ವ್ಯಕ್ತಿಗಳಲ್ಲಿ ಎಚ್. ಕೆ. ವೀರಣ್ಣಗೌಡ ಅವರು ಸಹ ಒಬ್ಬರು. ಇವರು ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರಾಗಿ, ರಾಜಕಾರಣಿಯಾಗಿ, ಪತ್ರಿಕೋದ್ಯಮಿಯಾಗಿ, ಸಾಹಿತಿಯಾಗಿ ಈ ಎಲ್ಲಾ ಕ್ಷೇತ್ರದಲ್ಲೂ ಅವಿಶ್ರಾಂತವಾಗಿ ದುಡಿದು ಸಮಾಜಕ್ಕೆ ತಮ್ಮದೇ ಆದ ಉತ್ತಮ ಕಾಣಿಕೆಗಳನ್ನು ನೀಡಿ ಚಿರಸ್ಮರಣೀಯರಾಗಿದ್ದಾರೆ.

ವೀರಣ್ಣಗೌಡರು ಚನ್ನಪಟ್ಟಣ ತಾಲ್ಲೂಕು ವಿರೂಪಾಕ್ಷಪುರ ಹೋಬಳಿ ಸಾದಹಳ್ಳಿ ಎಂಬ ಗ್ರಾಮದಲ್ಲಿ ತಾಯಿಯ ತೌರುಮನೆಯಲ್ಲಿ ೧೮೯೫ನೇ ಮೇ ೧ ರಂದು ಜನಿಸಿದರು. ಇವರ ತಂದೆ ಪಟೇಲ್ ಕೆಂಚೇಗೌಡರು, ತಾಯಿ ಕೆಂಪಮ್ಮ. ಇವರು ಅಕ್ಕೂರು ಮತ್ತು ಚನ್ನಪಟ್ಟಣದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಪಡೆದರು. ಚನ್ನಪಟ್ಟಣದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ನಂತರ ಮುಂದಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದರು. ಇಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಕಾಂಗ್ರೆಸ್ ಸದಸ್ಯರಾದರು. ನಂತರ ಯೂನಿವರ್ಸಿಟಿ

ಎಂಟ್ರೆನ್ಸ್‌ನಲ್ಲಿ ತೇರ್ಗಡೆಯಾಗಿ ಬೆಂಗಳೂರಿನಲ್ಲಿ ತಮ್ಮ ವ್ಯಾಸಂಗ ಮುಂದುವರಿಸಿದರು. ಇವರು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಒಕ್ಕಲಿಗ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿಕೊಂಡು ಅಲ್ಲಿ ಬಡ ವಿದ್ಯಾರ್ಥಿಗಳ ಊಟ ಮತ್ತು ವಸತಿಯನ್ನು ಒದಗಿಸುತ್ತಿದ್ದುದಲ್ಲದೆ ಕೆಲವು ಬಡ ವಿದ್ಯಾರ್ಥಿಗಳಿಗೆ ಹಾಸ್ಟಲ್ ಫಂಡಿನಿಂದ ವಿದ್ಯಾರ್ಥಿ ವೇತನ ಕೊಡುತ್ತಿದ್ದರು. ಚೆನ್ನಪಟ್ಟಣದಲ್ಲಿ ಒಕ್ಕಲಿಗ ವಿದ್ಯಾರ್ಥಿ ಸಂಘದ ಆಗು-ಹೋಗುಗಳನ್ನು ತಿಳಿಸಲು ಒಂದು ಮಾಸಪತ್ರಿಕೆಯನ್ನು ಹೊರಡಿಸಲು ಮುಂದಾದರು. ಅದರಂತೆ 'ಕರ್ನಾಟಕ ವಿದ್ಯಾರ್ಥಿ' ಎಂಬ ದ್ವೈಮಾಸಿಕ ಪತ್ರಿಕೆಯನ್ನು ಹೊರಡಿಸಿದರು. ಈ ಮಧ್ಯೆ ವೀರಣ್ಣಗೌಡರು ಉಪಾಧ್ಯಾಯ ವೃತ್ತಿಯನ್ನು ಕೈಗೊಂಡರು. ಅದರಂತೆ ೧೯೨೪ರಲ್ಲಿ ಹೊಂಗನೂರು ಮಿಡ್ಲ್‌ಸ್ಕೂಲ್‌ಗೆ ಮುಖ್ಯೋಪಾಧ್ಯಾಯರಾಗಿ ನೇಮಕಗೊಂಡರು. ನಂತರ ಅವರನ್ನು ಜಾಲಮಂಗಲಕ್ಕೆ ವರ್ಗಾಯಿಸಲಾಯಿತು. ವೀರಣ್ಣಗೌಡರು ೧೯೨೭ನೇ ಜನವರಿ ೧ರಂದು ಒಕ್ಕಲಿಗ ಪತ್ರಿಕೆಗೆ ಸಂಪಾದಕರಾದರು. ಈ ಪತ್ರಿಕೆಯ ಸಂಪಾದಕರಾಗಿದ್ದುಕೊಂಡು ಹಲವಾರು ಲೇಖನಗಳನ್ನು ಬರೆದು ಪ್ರಕಟಿಸಿದರು. ೧೯೨೮ರ ಫೆಬ್ರವರಿಯಲ್ಲಿ ಒಕ್ಕಲಿಗ ಪತ್ರಿಕೆಯ ವತಿಯಿಂದ ವಾರ್ಷಿಕ ಸಂಚಿಕೆಯೊಂದನ್ನು ಪ್ರಕಟಿಸಿದರು. ಈ ಸಂಚಿಕೆಯಲ್ಲಿ ಒಕ್ಕಲಿಗರ ಸಂಘದ ಮುಖಂಡರ ಭಾವಚಿತ್ರಗಳೂ, ಮೈಸೂರಿನ ಖ್ಯಾತಿವೆತ್ತ ಗುಡಿಗೋಪುರಗಳೂ ವರ್ಣಚಿತ್ರಗಳೂ ಇವೆಲ್ಲಾ ಇದ್ದು ಅದೊಂದು ಉತ್ತಮವಾದ ವಾರ್ಷಿಕ ಸಂಚಿಕೆಯಾಗಿತ್ತು. ಆ ಸಂಚಿಕೆಯಲ್ಲಿ 'ಶಿವಾಜಿ ವಿಜಯ' ಎಂಬ ಹೆಸರಿನ ನಾಟಕವೂ ಸೇರಿತ್ತು. ಒಕ್ಕಲಿಗ ಸಂಘದ ಹಲವಾರು ವಿರೋಧಿಗಳ ಒಳಸಂಚಿನಿಂದ ಇವರು ತಮ್ಮ ಸಂಪಾದಕತ್ವಕ್ಕೆ ರಾಜೀನಾಮೆ ಸಲ್ಲಿಸಿದರು.

ಒಕ್ಕಲಿಗ ಸಂಘದಿಂದ ಹೊರಬಿದ್ದ ನಂತರ ವೀರಣ್ಣಗೌಡರು ಒಂದು ಪ್ರಿಂಟಿಂಗ್ ಪ್ರೆಸ್ ಸ್ಥಾಪಿಸಲು ಮುಂದಾದರು. ಇದರ ಫಲವಾಗಿ ಒಂದು ಪ್ರಿಂಟಿಂಗ್ ಪ್ರೆಸ್ ಸ್ಥಾಪಿಸಿ ಅದಕ್ಕೆ 'ಗ್ರಾಮ ಸೇವಾ ಮುದ್ರಣಾಲಯ' ವೆಂದು ಹೆಸರಿಟ್ಟರು. ಈ ಪ್ರೆಸ್ ಮಾಲೀಕರಾದ ಗೌಡರು ಹಲವಾರು ಪ್ರಭಾವಿ ವ್ಯಕ್ತಿಗಳ ಸ್ನೇಹವನ್ನು ಗಳಿಸಿಕೊಂಡರು. ಅವರ ಸಲಹೆಯಂತೆ ಒಂದು ಪತ್ರಿಕೆಯನ್ನು ಪ್ರೆಸ್‌ನ ವತಿಯಿಂದ ತರುವಂತೆ ನಿರ್ಧರಿಸಿದರು. ಅದರಂತೆ ೧೯೨೮ನೇ ಡಿಸೆಂಬರ್ ನಲ್ಲಿ 'ಚಿತ್ರಗುಪ್ತ' ಎಂಬ ಕನ್ನಡ ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯ ಸ್ಥಾಪನೆಯು ಪತ್ರಿಕೋದ್ಯಮದಲ್ಲಿ ಒಂದು ಮೈಲಿಗಲ್ಲಾಯಿತು. ಈ ಪತ್ರಿಕೆಯನ್ನು ಅನುಸರಿಸಿ ಜನಜೀವನ, ತಾಯಿನಾಡು, ಲೋಕಮತ ಮುಂತಾದ ಹೊಸ ಪತ್ರಿಕೆಗಳು ಪ್ರಾರಂಭವಾದವು. ಚಿತ್ರಗುಪ್ತ ಪತ್ರಿಕೆಯಲ್ಲಿ ವೀರಣ್ಣಗೌಡರು ಹಲವಾರು ಘಟನೆಗಳನ್ನು ಪ್ರಕಟಿಸಿದರು. ಆ ವೇಳೆಗೆ ದಾವಣಗೆರೆಯಲ್ಲಿ ನಡೆದ ಗಣಪತಿ ಮಹೋತ್ಸವ ಗಲಭೆ ನಂತರ ೧೯೨೯ರಲ್ಲಿ ಹಿಂದೂ-ಮುಸ್ಲಿಮರ ಗಲಭೆಯನ್ನು ಪ್ರಕಟಿಸಲಾಗಿ ಇವರು ಹಲವರ ವಿರೋಧವನ್ನು ಎದುರಿಸಬೇಕಾಯಿತು. ಇವರು ಗಲಭೆಯ ವಿಚಾರಣೆಯನ್ನು ತನಿಖೆ ನಡೆಸಲು ವಿಶ್ವೇಶ್ವರಯ್ಯ ಸಮಿತಿಯನ್ನು ನೇಮಕಗೊಳಿಸಿ ಅವರು ಸಿದ್ಧಗೊಳಿಸಿದ ವರದಿಯನ್ನು ಹೇಗೋ ವೀರಣ್ಣಗೌಡರು ಚಿತ್ರಗುಪ್ತ ಪತ್ರಿಕೆಯಲ್ಲಿ ಪ್ರಕಟಿಸಿದರು. ಇದರಿಂದ ಈ ಪತ್ರಿಕೆಯ ಜನಪ್ರಿಯತೆ ಹೆಚ್ಚಾಯಿತು. ಹಲವಾರು

ಕಾರಣಗಳಿಂದ ಈ ಪತ್ರಿಕೆಯನ್ನು ನಡೆಸಲು ಸಾಧ್ಯವಾಗದೇ ನಿಲ್ಲಿಸಲಾಯಿತು. ಒಟ್ಟಿನಲ್ಲಿ ಎರಡುಮೂರು ವರ್ಷಗಳು ದಾಟುವುದರಲ್ಲಿ ಪತ್ರಿಕೆ ನಡೆಸುವುದು ಸಾಧ್ಯವಿಲ್ಲದಾಯಿತು.

ಆ ವೇಳೆಗೆ ಮದ್ದೂರಿನ ಪ್ರಭಾವಿ ವ್ಯಕ್ತಿಯಾದ ಎಂ. ಎಚ್. ಚನ್ನೇಗೌಡರ ಮಗಳನ್ನು ೧೯೩೧ರ ಮಾರ್ಚಿ ೨ ರಂದು ವಿವಾಹವಾದರು. ವಿವಾಹದ ನಂತರ ಚಿತ್ರಗುಪ್ತ ಪತ್ರಿಕೆಯನ್ನು ಪುನರುಜ್ಜೀವನಗೊಳಿಸಿದರು. ಆದರೆ ಆ ಪ್ರಯತ್ನ ಯಶಸ್ವಿಯಾಗಲಿಲ್ಲ. ಈ ಕಾರ್ಯದಿಂದ ಬೇಸತ್ತು ಗೌಡರು ತಮ್ಮ ಪತ್ರಿಕಾ ವೃತ್ತಿಯನ್ನು ಕೊನೆಗೊಳಿಸಿದರು. ಎಚ್. ಕೆ. ವೀರಣ್ಣಗೌಡರು ಇರ್ವಿನ್ ನಾಲಾ ರೈತರ ಹೋರಾಟದಲ್ಲಿ ಅವಿಶ್ರಾಂತವಾಗಿ ದುಡಿದು ಜಿಲ್ಲಾದ್ಯಂತ ಕೀರ್ತಿ ಗಳಿಸಿದರು. ಇರ್ವಿನ್ ನಾಲಾ (ಈಗಿನ ವಿಶ್ವೇಶ್ವರಯ್ಯ ನಾಲೆ) ರೈತರಿಗೆ ಪ್ರಾಪ್ತವಾಗಿರುವ ಕಷ್ಟ-ನಷ್ಟಗಳನ್ನು ತಿಳಿದು ಅವರ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕೃಷ್ಣರಾಜಸಾಗರ (ಕನ್ನಂಬಾಡಿ) ದಿಂದ ಹೊರಡುವ ಕಾವೇರಿ ಶಾಖೆ, ಶಿಂಷಾ ಶಾಖೆಗಳ ರೈತರು ಅನುಸರಿಸಬೇಕಾದ ವ್ಯವಸಾಯ ಕ್ರಮ ನೀರಾವರಿಯಾಗುವ ಜಮೀನುಗಳಿಗೆ ಅವರು ಕೊಡಬೇಕಾಗಿರುವ ಕಂದಾಯ, ಕಾಂಟ್ರಿಬ್ಯೂಷನ್ (ಸಹಾಯಧನ) ಹಣ ಕೊಡುವುದು ತಡವಾದರೆ ಅದಕ್ಕೆ ಕೊಡಬೇಕಾಗಿರುವ ಬಡ್ಡಿ ಇತ್ಯಾದಿ ವಿಷಯಗಳ ಬಗ್ಗೆ ಸರ್ಕಾರದವರು ಹೊರಡಿಸಿದ್ದ ಹುಕ್ಕುಂನಿಂದ ರೈತರು ಯಾವ ಯಾವ ಕಷ್ಟ-ನಷ್ಟಗಳಿಗೆ ಗುರಿಯಾಗಬೇಕೆಂಬುದನ್ನು ಮನವರಿಕೆ ಮಾಡಿಕೊಂಡ ಗೌಡರು ರೈತರ ಮುಂದಾಳುತನ ವಹಿಸಿಕೊಂಡರು. ಈ ಹೋರಾಟವನ್ನು ಚುರುಕುಗೊಳಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಸರ್ಕಾರದ ಹುಕ್ಕುಂನಿಂದ ರೈತರಿಗಾಗುವ ಕಷ್ಟ-ನಷ್ಟಗಳನ್ನು ಕುರಿತು ನಾಲಾ ಪ್ರದೇಶದ ಎಲ್ಲ ತಾಲ್ಲೂಕುಗಳ ಪ್ರತಿಹಳ್ಳಿಗೂ ಹೋಗಿ ರೈತರಿಗೆ ತಿಳಿವಳಿಕೆ ಹೇಳುವುದು ಮತ್ತು ಆ ವಿಷಯ ಕುರಿತು ಅಂಕಿ ಅಂಶಗಳನ್ನೊಳಗೊಂಡ ಒಂದು ಪ್ರಕಟಣೆ ಹೊರಡಿಸುವುದು ಈ ಕಾರ್ಯಗಳನ್ನು ಒಡನೆಯೆ ಕೈಗೊಳ್ಳಬೇಕೆಂದು ತೀರ್ಮಾನಿಸಿದರು. ರೈತರ ಹೋರಾಟದ ಮೊದಲನೆಯ ಪ್ರಚಾರ ಸಭೆ ಮಳವಳ್ಳಿ, ಅರಸಿನಕೆರೆ, ಗೆಜ್ಜಲಗೆರೆ, ಗೌಡಗೆರೆ, ಹೊಳಲು, ಕೆರಗೋಡು ಗ್ರಾಮಗಳಲ್ಲೂ, ಮಂಡ್ಯ, ಮದ್ದೂರು, ಶ್ರೀರಂಗಪಟ್ಟಣ, ಪಾಂಡವಪುರ ತಾಲ್ಲೂಕುಗಳಲ್ಲಿಯೂ ಅನೇಕಾನೇಕ ದೊಡ್ಡ ದೊಡ್ಡ ಗ್ರಾಮಗಳಲ್ಲೂ ಪ್ರಚಾರ ಸಭೆಗಳನ್ನು ಏರ್ಪಡಿಸಿದ್ದರು. ಸರ್ಕಾರದ ಹುಕ್ಕುಂನಿಂದ ರೈತರಿಗಾಗುವ ಕಷ್ಟ-ನಷ್ಟಗಳ ವಿವರಗಳನ್ನೆಲ್ಲಾ ಮನನ ಮಾಡಿಕೊಂಡ ಮೇಲೆ ಗೆಜ್ಜಲೆಗೆರೆಯಲ್ಲಿ ಸೇರಿದ್ದ ಬೃಹತ್ ಸಭೆಯಲ್ಲಿ ಹತ್ತುಸಾವಿರ ಮಂದಿ ರೈತರು ಕಾಲುನಡುಗೆಯಲ್ಲಿ ಬೆಂಗಳೂರಿಗೆ ಜಾಥಾ ಹೊರಟು ದಿವಾನರಿಗೆ ಕೋರಿಕೆಗಳನ್ನು ಸಲ್ಲಿಸಿದರು. ೧೯೩೧ನೇ ಇಸವಿ ಡಿಸೆಂಬರ್ ೩೧ನೇ ತಾರೀಖಿನಂದು ನಾಲಾ ಬಯಲಿನ ರೈತರೆಲ್ಲಾ ಬೆಂಗಳೂರಿಗೆ ಹೊರಟರು. ಇವರಲ್ಲಿ ವೀರಣ್ಣಗೌಡರ ಪಾತ್ರ ಹಿರಿದಾದುದು ಈ ಜಾಥಾ ೧೯೩೨ರ ಜನವರಿ ೪ನೇ ತಾರೀಖು ಬೆಂಗಳೂರಿ ಅಠಾರ ಕಛೇರಿ ತಲುಪಿ ಮನವಿ ಸಲ್ಲಿಸಿದರು. ಮೈಸೂರು ಪ್ರಾಂತ್ಯದಲ್ಲಿ ಎಂದೂ ನಡೆಯದಿದ್ದ ಈವರೆಗೆ ಇನ್ನೂ ನಡೆಯದಿರುವ ಇಂತಹ ಚರಿತ್ರಾರ್ಹವಾದ ರೈತರ ಕಾಲುನಡುಗೆಯ ಯಾತ್ರೆ ಅತ್ಯಂತ ಯಶಸ್ವಿಯಾಯಿತು. ಇದನ್ನು ಸರ್ಕಾರದವರು ಮಂಡ್ಯ ಜಿಲ್ಲೆ ಗೆಜೆಟಿಯರ್‌ನಲ್ಲಿ ಬೇಸಾಯಗಾರರ

ಚಳುವಳಿ (Agrarian Revolution) ಎಂದು ವರ್ಣಿಸಿದ್ದಾರೆ. ಹೀಗೆ ವೀರಣ್ಣಗೌಡರ ನಾಯಕತ್ವದಲ್ಲಿ ನಡೆದ ಈ ಹೋರಾಟದಲ್ಲಿ ನಾಲಾಬಯಲಿನ ಜನರು ಯಶಸ್ಸು ಕಂಡರು.

೧೯೨೪ ಹಾಗೂ ೧೯೨೫ ಜನವರಿ ಮೊದಲನೆ ವಾರದಲ್ಲಿ ಬೆಳಗಾಂನಲ್ಲಿ ಮಹಾತ್ಮಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದಲ್ಲಿ ವೀರಣ್ಣಗೌಡರು ಭಾಗವಹಿಸಿದ್ದು ಗಾಂಧೀ ನಾಯಕತ್ವ ಕಾಂಗ್ರೆಸ್‌ನಿಂದ ಪ್ರಭಾವಿತರಾದರು. ೧೯೩೩ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ನಡೆಯುವ ಸಾರ್ವಜನಿಕ ಚುನಾವಣೆಯಲ್ಲಿ ಮದ್ದೂರು ಕ್ಷೇತ್ರದಿಂದ ಸ್ಪರ್ಧಿಸಿ ಚುನಾವಣೆಯಲ್ಲಿ ಸೋಲನ್ನನುಭವಿಸಿದರು. ಮದ್ದೂರಿನಲ್ಲಿ ಸ್ವಲ್ಪ ಕಾಲ ವ್ಯವಸಾಯಾಭಿವೃದ್ಧಿಗೆ ತಮ್ಮ ಗಮನಹರಿಸಿ ವ್ಯವಸಾಯ ಕಾರ್ಯದಲ್ಲಿ ಉತ್ತಮ ವ್ಯವಸಾಯಗಾರರೆನಿಸಿಕೊಂಡಿದ್ದರು.

ಬೆಂಗಳೂರಿನಲ್ಲಿ ವಾಸವಾಗಿದ್ದ ಕಾಲದಲ್ಲಿ ಕಾಂಗ್ರೆಸ್ ಕಾರ್ಯದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು. ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾದರು. ೧೯೩೪ರಲ್ಲಿ ಮೈಸೂರು ಜಿಲ್ಲಾ ಬೋರ್ಡಿಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿ ಚುನಾಯಿತರಾದರು. ಜಿಲ್ಲಾ ಬೋರ್ಡ್ ಸದಸ್ಯರಾದ ಮೇಲೆ ಮೈಸೂರು ಜಿಲ್ಲಾ ಎಜುಕೇಷನ್ ಬೋರ್ಡಿಗೂ, ಮೈಸೂರು ಪ್ರಜಾಪ್ರತಿನಿಧಿ ಸಭೆಗೂ, ಮದ್ದೂರು ಪುರಸಭೆಗೂ ಚುನಾಯಿತರಾಗಿ, ಮದ್ದೂರು ಪುರಸಭೆಯ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು. ನಂತರ ಗೌಡರು ೧೯೨೦-೨೧ರಲ್ಲಿ ಕಾಂಗ್ರೆಸ್ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಿ ಪಾನನಿರೋಧ, ಸ್ವದೇಶಿ ಮುಂತಾದ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ನಂತರ ಇವರು ೧೯೪೭ರಲ್ಲಿ ಮೈಸೂರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಅಧ್ಯಕ್ಷರಾದ ನಂತರ ತಮ್ಮನ್ನು ಸಂಪೂರ್ಣವಾಗಿ ಕಾಂಗ್ರೆಸ್ ಪ್ರಚಾರಕಾರ್ಯಕ್ಕೆ ತೊಡಗಿಸಿಕೊಂಡರು.

ಎಚ್.ಕೆ. ವೀರಣ್ಣಗೌಡರ ಹೆಸರನ್ನು ಚಿರಸ್ಥಾಯಿಗೊಳಿಸಿರುವ ಮತ್ತೊಂದು ಘಟನೆಯೆಂದರೆ ೧೯೩೮ರಲ್ಲಿ ನಡೆದ ಶಿವಪುರ ಧ್ವಜಸತ್ಯಾಗ್ರಹದಲ್ಲಿ ಇವರು ಭಾಗವಹಿಸಿದುದು ಮೈಸೂರು ನಗರದಲ್ಲಿ ಸೇರಿದ್ದ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯು ಏಪ್ರಿಲ್ ಮಧ್ಯಭಾಗದಲ್ಲಿ ಒಂದು ರಾಷ್ಟ್ರಕೂಟವನ್ನು ನಡೆಸಬೇಕೆಂದು ತೀರ್ಮಾನಿಸಿತು. ವೀರಣ್ಣಗೌಡರು ಅದನ್ನು ಶಿವಪುರದಲ್ಲಿ ನಡೆಸಬೇಕೆಂದು ತೀರ್ಮಾನಿಸಿ ಅದರಂತೆ ನಡೆಸಲು ಮುಂದಾದರು. ಮೈಸೂರಿನ ಎಸ್. ಚೆನ್ನಯ್ಯನವರು ಸ್ವಾಗತ ಸಮಿತಿಯ ಸದಸ್ಯರಾದರು. ಎ.ಜಿ. ಬಂದೀಗೌಡರೂ ಕಾರ್ಯದರ್ಶಿಯೆಂದೂ ಹಾಗೂ ಎಚ್. ಸಿ. ದಾಸಪ್ಪ, ಶಿವಪುರದ ಸಿ. ತಿರುಮಲೇಗೌಡರು, ಎಸ್. ರಂಗರಾಮಯ್ಯ ಉಪಾಧ್ಯಕ್ಷರಾಗಿಯೂ, ಜೋಗೀಗೌಡರು ಖಜಾಂಚಿ ಎಂದೂ ಎಂ.ಎಸ್. ಜೋಯಿಸ್ ಸ್ವಯಂ ಸೇವಕ ಪಡೆಯ ಮುಖ್ಯಸ್ಥರೆಂದೂ ತೀರ್ಮಾನಿಸಲಾಯಿತು. ಎಚ್. ಕೆ. ವೀರಣ್ಣಗೌಡರು ಜನರಲ್ ಸೆಕ್ರೆಟರಿಯಾಗಿ ನಿಯುಕ್ತರಾದರು. ಟಿ. ಸಿದ್ಧಲಿಂಗಯ್ಯ ಮೈಸೂರು ಸಂಸ್ಥಾನದ ಮೊದಲನೆ ರಾಷ್ಟ್ರಕೂಟದ ಅಧ್ಯಕ್ಷರಾಗಿ ಚುನಾಯಿತರಾದರು.

೧೯೩೮ರ ಏಪ್ರಿಲ್ ೯ನೇ ತಾರೀಖು ಶಿವಪುರ ಧ್ವಜ ಸತ್ಯಾಗ್ರಹ ಅತಿವಿಜೃಂಭಣೆಯಿಂದ ನಡೆಯಿತು. ಬೀದಿ ಬೀದಿಯಲ್ಲೂ ಜನರು ಕಿಕ್ಕಿರಿದು ತುಂಬಿದ್ದರು. "ಏನೇ ಬರಲಿ ಒಗ್ಗಟ್ಟಿರಲಿ" ಎಂಬ ಘೋಷಣೆಯೂ ಮೊಳಗಿತು. ಜಿಲ್ಲಾ ಮ್ಯಾಜಿಸ್ಟ್ರೇಟರು ಮದ್ದೂರು ಸುತ್ತಳತೆ ಮೂರು ಮೈಲಿಗಳೊಳಗೆ ಒಂದು ತಿಂಗಳ ಕಾಲ ಮೆರವಣಿಗೆ, ಸಭೆ ಮುಂತಾದವು ಸೇರಕೂಡದೆಂದೂ ಧ್ವಜಾರೋಹಣ ಮಾಡಕೂಡದೆಂದೂ ನಿಷೇಧಾಜ್ಞೆ ಹೊರಡಿಸಿದ್ದರು. ಈ ವೇಳೆಯಲ್ಲಿ ಹಲವಾರು ನಾಯಕರುಗಳ ದಸ್ತಗಿರಿಯಾಯಿತು. ಈ ಸತ್ಯಾಗ್ರಹದಲ್ಲಿ ಅನೇಕ ಸ್ತ್ರೀಯರೂ ಭಾಗವಹಿಸಿದ್ದರು. ಈ ರೀತಿ ಮದ್ದೂರು ಶಿವಪುರದಲ್ಲಿ ಸೇರಿದ್ದ ರಾಷ್ಟ್ರಕೂಟವೂ ಮೂರು ದಿನಗಳು ಕಾರ್ಯ ಕಲಾಪಗಳನ್ನು ನಡೆಸಿ ಮೈಸೂರು ಸಂಸ್ಥಾನದಲ್ಲಿ ಮಹಾರಾಜರ ನೇತೃತ್ವದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯನ್ನು ಕೈಗೂಡಿಸುವುದಕ್ಕಾಗಿ ಮೈಸೂರು ಕಾಂಗ್ರೆಸ್ ರಾಜಕೀಯ ಸಂಸ್ಥೆ ಸ್ಥಾಪಿತವಾಯಿತು. ನಂತರ ವೀರಣ್ಣಗೌಡರು ವಿದುರಾಶ್ವತ್ಥ ದುರಂತದಲ್ಲೂ ಭಾಗವಹಿಸಿದ್ದರೆಂದೂ ತಿಳಿಯಲಾಗಿದೆ. ಶಿವಪುರ ರಾಷ್ಟ್ರಕೂಟದಲ್ಲಿ ನೇಮಕವಾದ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಬೆಂಗಳೂರಿನಲ್ಲಿ ಸಭೆ ಸೇರಿ ಗೌಡರನ್ನು ವ್ಯವಸ್ಥಾಪಕ ಕಾರ್ಯದರ್ಶಿಯನ್ನಾಗಿ ನೇಮಕಗೊಳಿಸಿತು. ಮುಂದೆ ಗೌಡರು ಕೆ.ಜಿ.ಎಫ್.ನಲ್ಲಿ ಕೆ. ಸಿ. ರೆಡ್ಡಿಯವರ ನೇತೃತ್ವದಲ್ಲಿ ನಡೆದ ಗಣಿಕಾರ್ಮಿಕರ ಚಳವಳಿಯಲ್ಲಿ ಭಾಗವಹಿಸಿದ್ದರು. ನಂತರ ಇವರ ಬಂಧನಕ್ಕೊಳಗಾಗಿ ಮೂರು ತಿಂಗಳ ಕಾಲ ಕಠಿಣ ಸಜೆಯನ್ನು ಅನುಭವಿಸಿದರು. ಜೈಲಿನಲ್ಲಿ ಇವರು ಹಲವಾರು ಕಷ್ಟ-ನಷ್ಟಗಳನ್ನು ಅನುಭವಿಸಿದರೂ ಜೈಲಿನಲ್ಲಿ ರಾಗಿ ಬೀಸುವ ಕೆಲಸವನ್ನು ಇವರು ನಿರ್ವಹಿಸಿದರು. ಏಳು ವರ್ಷಗಳ ನಂತರ ೧೯೪೭ರಲ್ಲಿ ನಡೆದ ಚಲೋ ಮೈಸೂರು ಸತ್ಯಾಗ್ರಹ ಚಳವಳಿಯಲ್ಲಿ ಭಾಗವಹಿಸಿದರು. ಈ ಸತ್ಯಾಗ್ರಹ ನಡೆದಾಗ ಕಾಂಗ್ರೆಸ್‌ನವರನ್ನು ದಸ್ತಗಿರಿ ಮಾಡಿದರು. ಕೇವಲ ಆರು ವಾರಗಳು ಜೈಲು ವಾಸ ಅನುಭವಿಸಿದರು. ೧೯೫೨ರಲ್ಲಿ ಗೌಡರು ಎರಡನೇ ಬಾರಿಗೆ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದರು. ಎರಡು ವರ್ಷಗಳವರೆಗೆ ಅಧ್ಯಕ್ಷ ಅವಧಿಯಲ್ಲಿ ಮುಂದುವರಿದರು.

೧೯೪೭ರಲ್ಲಿ ನಡೆದ ಸಾರ್ವಜನಿಕ ಮಹಾಚುನಾವಣೆಯಲ್ಲಿ ಮದ್ದೂರು ತಾಲ್ಲೂಕಿನಿಂದ ನ್ಯಾಯ ವಿಧಾಯಕ ಸಭೆಗೆ ಆಯ್ಕೆಯಾಗಿ ಮೊಟ್ಟ ಮೊದಲ ಬಾರಿಗೆ ಶಾಸನ ಸಭೆಯನ್ನು ಪ್ರವೇಶಿಸಿದರು. ನಂತರ ೧೯೫೭ರಲ್ಲಿ ಸ್ಥಾಪಿತವಾದ ಮೈಸೂರು ಸಂಸ್ಥಾನದ ಮಂತ್ರಿಮಂಡಲದಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಅವರು ತಮ್ಮ ಮಂತ್ರಿಮಂಡಲದಲ್ಲಿ ವೀರಣ್ಣಗೌಡರನ್ನು ವಿದ್ಯುಚ್ಛಕ್ತಿ ಮತ್ತು ಲೋಕೋಪಯೋಗಿ ಮಂತ್ರಿಯಾಗಿ ನೇಮಕ ಮಾಡಿದರು. ಮಂತ್ರಿಯಾಗಿ ಗೌಡರು ಹಲವಾರು ಯಶಸ್ವಿಯುತ ಕಾರ್ಯವನ್ನು ಮಾಡಿದ್ದಾರೆ. ಅಲ್ಲದೆ ಗೌಡರ ಮತ್ತೊಂದು ಪ್ರಶಂಸನೀಯ ಕಾರ್ಯವೆಂದರೆ ಬೆಂಗಳೂರಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ವಾರ್ಷಿಕಾಧಿವೇಶನದಲ್ಲಿ ಸಂಘಟಿಸಿ ಯಶಸ್ವಿಯಾದದ್ದು. ಬಿ. ಡಿ. ಜತ್ತಿಯವರು ಮುಖ್ಯಮಂತ್ರಿಯಾಗಿದ್ದಾಗಲೂ ಸಹ ವೀರಣ್ಣಗೌಡರು ಪುನಃ ಮಂತ್ರಿಯಾದುದಲ್ಲದೆ ಅವರಿಗೆ ಮೊದಲು ವಹಿಸಿದ್ದ ಖಾತೆಗಳನ್ನೇ ಜತ್ತಿಯವರು ವಹಿಸಿದರು. ೧೯೫೬ರಲ್ಲಿ ಕರ್ನಾಟಕ ಏಕೀಕರಣ ನಡೆಯಿತು. ಇದನ್ನು ವೀರಣ್ಣಗೌಡರು ತೀವ್ರವಾಗಿ ವಿರೋಧಿಸಿದರು. ಏಕೆಂದರೆ ಉತ್ತರ ಕರ್ನಾಟಕದ ಭಾಗವೆನಿಸಿದ್ದ ಬೊಂಬಾಯಿ, ಮದರಾಸು, ಹೈದರಾಬಾದ್ ಮುಂತಾದ

ಪ್ರಾಂತ್ಯಗಳಲ್ಲಿ ಕನ್ನಡಿಗರ ಸ್ಥಾನಮಾನಗಳು ನಿಕೃಷ್ಟ ಸ್ಥಿತಿಯಲ್ಲಿದ್ದುದು ಮಾತ್ರವಲ್ಲದೆ, ಆ ಭಾಗದ ಪ್ರಾಂತ್ಯಗಳಲ್ಲಿ ಹೆಚ್ಚಿನ ಅಭಿವೃದ್ಧಿಯಾಗಿರಲಿಲ್ಲ. ಕರ್ನಾಟಕದ ಏಕೀಕರಣವಾದರೆ ಮೈಸೂರು ಪ್ರಾಂತ್ಯದಲ್ಲಿ ಅಭಿವೃದ್ಧಿ ಕಾರ್ಯ ಕುಂಠಿತವಾಗಿ ಹೊಸದಾಗಿ ಸೇರಿದ ಕರ್ನಾಟಕದ ಭಾಗಗಳು ವಿದ್ಯಾಭ್ಯಾಸ, ರಸ್ತೆ ನಿರ್ಮಾಣ ಮುಂತಾದ ಅನೇಕ ಅಭಿವೃದ್ಧಿ ಕಾರ್ಯಗಳು ಹತ್ತಾರು ವರ್ಷಗಳಾದರೂ ನಿಂತು ಹೋಗುವುದೆಂದೂ ಅಲ್ಲದೆ ಕರ್ನಾಟಕದ ಏಕೀಕರಣದಿಂದ ಹಳೆ ಮೈಸೂರು ಪ್ರಾಂತಕ್ಕೆ ತೊಂದರೆಯಾಗುವುದೆಂದೂ ಭಾವಿಸಿದರು. ೧೯೫೬ನೇ ಜನವರಿ ೧ ರಂದು ಕರ್ನಾಟಕ ಏಕೀಕರಣವನ್ನು ವಿರೋಧಿಸುವ ಬೃಹತ್ ಸಭೆಯೊಂದನ್ನು ಮಂಡ್ಯದಲ್ಲಿ ವ್ಯವಸ್ಥೆ ಮಾಡಿದ್ದರು. ಕೆ. ವಿ. ಶಂಕರಗೌಡರು ಅದರ ಮುಖಂಡರಾಗಿದ್ದರು.

೧೯೬೨ರಲ್ಲಿ ಮೈಸೂರು ಶಾಸನ ಸಭೆಗೆ ನಡೆದ ಚುನಾವಣೆಯಲ್ಲಿ ಮದ್ದೂರು ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವ ಹೊಂದಿದ್ದರು. ಆಗಿನ್ನೂ ಅವರು ಜತ್ತಿ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿಯೇ ಇದ್ದರು. ಚುನಾವಣೆಯ ಸೋಲಿನಿಂದ ಹತಾಶರಾಗದೆ ಮುಂದೆ ಗೌಡರು ಒಕ್ಕಲಿಗ ಸಂಘದ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅದರಂತೆ ೧೯೬೧ರಲ್ಲಿ ಒಕ್ಕಲಿಗ ಸಂಘದ ಮಹಾಧಿವೇಶನವನ್ನು, ದಕ್ಷಿಣ ಭಾರತದ ಒಕ್ಕಲಿಗರ ಮಹಾಸಮ್ಮೇಳನವನ್ನು ನಡೆಸಿದರು. ನಂತರ ವೀರಣ್ಣಗೌಡರು ೧೯೬೪ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಜಯಗಳಿಸಿದರು.

ಮೈಸೂರು ರಾಜ್ಯದ ಭೂಸುಧಾರಣೆ ಚಳವಳಿಯವಲ್ಲಿ ತಮ್ಮನ್ನು ತೊಡಗಿಸಿಕೊಂಡು ಆ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಸರ್ಕಾರದವರು ಒಂದು ಸಂಸಾರಕ್ಕೆ ೧೦ ಎಕರೆಗಳಷ್ಟು ಜಮೀನು ಸಾಕೆಂದು ಭಾವಿಸಿ ಕಾನೂನು ಮಾಡಿಕೊಳ್ಳುವುದಕ್ಕೆ ಸಿದ್ಧವಾಗುತ್ತಿದೆಯೆಂದೂ ರೈತರಿಗೆ ತೊಂದರೆಯಾಗುವಂತೆ ಅವರ ಮೇಲೆ ಇನ್ನೂ ಕೆಲವು ನಿಬಂಧನೆಗಳನ್ನು ವಿಧಿಸುವಂತೆ ಮಾಡಲಾಗುತ್ತಿದೆಯೆಂದೂ ಪ್ರಕಟಣೆಯನ್ನು ಹೊರಡಿಸಿದರು. ಇದರಿಂದ ಹಲವಾರು ರೈತರಿಗೆ ತೊಂದರೆಯಾಗುವುದೆಂದು ಭಾವಿಸಿದ ಗೌಡರು ಶ್ರೀರಾಯರೆಡ್ಡಿ, ಎಚ್. ಎಸ್. ರುದ್ರಪ್ಪ, ಎನ್. ಸಿ. ತಿಮ್ಮಾರೆಡ್ಡಿ ಅವರ ಜೊತೆಗೂಡಿ ಬೆಂಗಳೂರಿನಲ್ಲಿ ರೈತ ಮುಖಂಡರ ಸಭೆಯನ್ನು ಕರೆದು ಆ ಸಭೆಯಲ್ಲಿ ಈ ಸುಧಾರಣೆಯನ್ನು ಕುರಿತು ಸುದೀರ್ಘವಾದ ಚರ್ಚೆಯನ್ನು ನಡೆಸಿದರು.

ಎಚ್. ಕೆ. ವೀರಣ್ಣಗೌಡರು ದಕ್ಷ ರಾಜಕಾರಣಿ ಮಾತ್ರವಾಗಿರದೆ ಶಿಕ್ಷಣದಲ್ಲಿ ಅಪಾರವಾದ ಪ್ರೀತಿವುಳ್ಳವರಾಗಿದ್ದು ಮದ್ದೂರಿನಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದ್ದರು. ತಾಯಮ್ಮ ವೀರಣ್ಣಗೌಡ ಶಿಶುವಿಹಾರ, ಅಪ್ಪರ್ ಪ್ರೈಮರಿ ಶಾಲೆ, ಮಹಿಳಾ ಶಾಲೆಗಳನ್ನೂ, ಹೆಣ್ಣು ಮಕ್ಕಳಿಗಾಗಿ ಕಮಲಾ ನೆಹರು ಪ್ರೌಢಶಾಲೆಯನ್ನು, ಗಂಡು ಮಕ್ಕಳಿಗಾಗಿ ಜವಾಹರ್ ಪ್ರೌಢಶಾಲೆಯನ್ನು ಮುಂದೆ ಈ ಶಾಲೆಯೇ ಎಚ್. ಕೆ. ವೀರಣ್ಣಗೌಡ ಮಹಾವಿದ್ಯಾಲಯವಾಗಿ (ಅರ್ಜುನಪುರಿ ಕಾಲೇಜು) ವಿಕಾಸ ಹೊಂದಿತು. ಹೀಗೆ ಹಲವಾರು ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿದ ವೀರಣ್ಣಗೌಡರು ೧೯೭೬, ಏಪ್ರಿಲ್ ೭ರಂದು ನಿಧನರಾದರು.

ವಿಶ್ವಧರ್ಮದ ಆದರ್ಶರೂಪ

—ಡಾ. ಕೆ. ವೈ. ಬಾಲರಾಜ್

ಮಾನವ ಜೀವನದಲ್ಲಿ ಅವನ ಭಾವನೆಯ ಅತಿ ಶ್ರೇಷ್ಠವಾದ ಕ್ಷೇತ್ರವೇ ಧರ್ಮವೆಂಬ ಪರಿಕಲ್ಪನೆ. ಪ್ರೀತಿ-ದ್ವೇಷ,ಒಳಿತು-ಕೆಡುಕು, ಆಕರ್ಷಣ-ವಿಕರ್ಷಣ ಈ ಎರಡು ರೀತಿಯ ಶಕ್ತಿಗಳ ಕ್ರಿಯೆಯು ಇಲ್ಲಿ ಹೆಚ್ಚು ಸ್ಪಷ್ಟವಾಗಿ ನಮಗೆ ಕಾಣಬರುವುದು. ಮಾನವತೆಯ ಪ್ರೇಮ ಧರ್ಮದಿಂದಲೇ ಉದಿಸಿದೆ. ಹಾಗೆಯೇ ಮಾನವನ ಹೃದಯದಲ್ಲಿ ದ್ವೇಷದ ಅಸುರೀ ಭಾವನೆಯು ಕೂಡ ಈ ಧರ್ಮದಿಂದಲೇ ಬಂದಿದೆ ಎಂಬುದು ಅಷ್ಟೇ ಸತ್ಯವಾದುದು. ಇಡೀ ಜಗತ್ತಿನಲ್ಲಿ ಮಾನವ-ಮಾನವರ ಮಧ್ಯೆ ರಕ್ತದ ಕೋಡಿಯನ್ನು ಧರ್ಮದ ಮತಾಂಧತೆ ಹರಿಸಿದಷ್ಟು ಮತ್ತಾವ ವಿಚಾರಗಳೂ ಮಾಡಿಲ್ಲ. ಹಾಗೆಯೇ ಲೋಕೋತ್ತರವಾದ ಸಾಧನೆಗಳು, ದಾನಧರ್ಮಗಳು, ಆಶ್ರಯಧಾಮಗಳು, ಔಷಧಾಲಯಗಳು, ಪ್ರೀತಿ, ಕರುಣೆ, ಮಾನವೀಯ ಹೃದಯಗಳನ್ನು ಧರ್ಮ ಸೃಷ್ಟಿಸಿದ ಹಾಗೆ ಬೇರೆ ಯಾವ ಕಲ್ಪನೆಗಳೂ ಸೃಷ್ಟಿಸಿಲ್ಲ. ಹೀಗೆ ಮಾನವನ ಉದ್ದೇಶ ಪೂರ್ಣಸಾಧನೆ, ಜೀವನ ಇವೆರಡೂ ಧರ್ಮದ ಮೇಲೆಯೇ ಆಧಾರಿತವಾಗಿವೆ. ಇಂದು ಹಲವು ಮತಧರ್ಮಗಳ ಪರಸ್ಪರ ಕಚ್ಚಾಟ, ತಿಕ್ಕಾಟ, ಗೊಂದಲ, ದ್ವೇಷಾಸೂಯೆಗಳ ಮಧ್ಯೆ ಕಾಲಕಾಲಕ್ಕೆ ಇತರ ಧ್ವನಿಗಳನ್ನು ಮೆಟ್ಟಿ ನಿಂತು ಇಡೀ ಪ್ರಪಂಚವೇ ಆಲಿಸುವಂತಹ ಶಾಂತಿ-ಸೌಹಾರ್ದತೆಗಳ ವಾಣಿಗಳು ಪ್ರಬಲಯುತವಾಗಿ ಮೊಳಗಿವೆ. ಇಂದು ಪ್ರಪಂಚವು ಎಷ್ಟೇ ವೈಜ್ಞಾನಿಕ ಪ್ರಗತಿಯ ತುತ್ತ ತುದಿಯಲ್ಲಿದ್ದರೂ ಪರಸ್ಪರ ಸೌಹಾರ್ದತೆ, ಶಾಂತಿಯನ್ನು ರೂಪಿಸುವ ಮತ್ತು ಚಿಂತನೆಯನ್ನು ಮಾಡುವ ಕಾಲ ಬಂದಿದೆ. ಆದರೆ ಈ ವಿಷಯದ ಬಗ್ಗೆ ನಾವು ಎಷ್ಟೇ ಉತ್ಸಾಹ, ಕ್ರಿಯಾಶೀಲತೆ, ಯೋಜನೆಗಳನ್ನು ರೂಪಿಸಿದರೂ ಅದು ಕಷ್ಟಸಾಧ್ಯವೂ ಹೌದು. ಮಾನವನ ಉದ್ವೇಗ, ಜೀವನದ ತೀವ್ರ ಹೋರಾಟ ತಪ್ಪಿಸಿ ಅವನ ಹೃದಯದಲ್ಲಿ ಶಾಂತಿ ಸಾಮರಸ್ಯ ತರುವುದು ಮಹಾಸಾಹಸದ ಕಾರ್ಯವೂ ನಿಜ. ಇಂದಿನ ಅಂತಸ್ತಿನ, ಹಣದ ಪ್ರಪಂಚದಲ್ಲಿ ಪ್ರೀತಿ, ಶಾಂತಿ, ದಯೆ, ಸಮತ್ವ, ವಿಶ್ವಭ್ರಾತೃತ್ವ ಮುಂತಾದವು ಅರ್ಥವಿಲ್ಲದ ಪದಗಳಾಗಿವೆ. ಆದರೆ ದಿನನಿತ್ಯದ ಬದುಕಿನಲ್ಲಿ ಈ ಪದಗಳನ್ನು ನಾವು ಸರಾಗವಾಗಿ ಉಚ್ಚರಿಸುತ್ತಿರುತ್ತೇವೆ. ಇದು ನಮ್ಮ ಸ್ವಭಾವವಾಗಿ ಹೋಗಿದೆ. ಹಿಂದೆ ತತ್ತ್ವ ವಿಚಾರಗಳನ್ನು ಮಹಾಪುರುಷರು ತಮ್ಮ ಹೃದಯಗಳಲ್ಲಿ ಅನುಭವಿಸಿ ಅನಂತರ ಈ ಪದಗಳನ್ನು ಸೃಷ್ಟಿಸಿದರು. ಇವು ಕೇವಲ ಅಕ್ಷರಗಳ ಪದಪುಂಜವಲ್ಲ.

ಇವು ಮಾನವ ಜೀವನದ ಅತ್ಯುನ್ನತ ಮೌಲ್ಯಗಳನ್ನು ಸೃಷ್ಟಿಸಿ ಅವನ ಬದುಕಿಗೆ ಪೂರ್ಣತೆಯನ್ನು ತಂದುಕೊಟ್ಟವು. ಇಂದು ಇವು ಕೇವಲ ಕುತಂತ್ರಿಗಳ, ಅಜ್ಞಾನಿಗಳ ಚೆಲ್ಲಾಟಕ್ಕೆ ಈ ಪದಗಳ ಉಪಯೋಗ ನಡೆಯುತ್ತಿರುವುದು ಅಷ್ಟೇ ವಿಷಾದನೀಯ ಸಂಗತಿಯೂ ಆಗಿದೆ.

ಪ್ರತಿಯೊಂದು ಧರ್ಮವೂ ಆಚಾರ, ವಿಚಾರ, ನಂಬಿಕೆ ಈ ಮೂರು ಅಂಶಗಳನ್ನು ಒಳಗೊಂಡಿರುತ್ತದೆ. ಆಚಾರಗಳಲ್ಲಿ ನಿತ್ಯಕರ್ಮಗಳು, ಪೂಜೆ, ವ್ರತ, ಸಂಪ್ರದಾಯಗಳು ಹಾಗೂ ವ್ಯಕ್ತಿಯ ನಡವಳಿಕೆಗಳನ್ನು ಒಳಗೊಂಡಿರುತ್ತವೆ. ವಿಚಾರದಲ್ಲಿ ಒಂದು ಮೂಲತತ್ತ್ವದ ಸ್ವರೂಪ, ಗುರಿ, ಅದನ್ನು ಸಾಧಿಸುವ ಮಾರ್ಗವು ಮುಖ್ಯವಾಗಿರುತ್ತದೆ. ಇನ್ನು ನಂಬಿಕೆಯೆಂದರೆ ಪ್ರತಿಯೊಂದು ಧರ್ಮಕ್ಕೂ ತಮ್ಮದೇ ಆದ ಹಿನ್ನೆಲೆಯಿರುತ್ತದೆ. ಅದರ ಪ್ರಕಾರ ಅವು ತಮ್ಮದೇ ಕಥೆ, ಪುರಾಣ, ದೇವಮಾನವ ಸಂಬಂಧ, ಅವತಾರವಾದಗಳ ವಿಷಯಗಳಿಂದ ರೂಪಿತ ವಾಗಿರುತ್ತವೆ. ಒಂದೊಂದು ಮತಧರ್ಮಗಳಲ್ಲಿಯೂ ಇರುವ ತತ್ತ್ವ, ವಿಚಾರ, ನಂಬಿಕೆಗಳು ಪರಸ್ಪರ ಹೊಂದಾಣಿಕೆಗಿಂತ ಹೆಚ್ಚಾಗಿ ಭಿನ್ನ ಭಿನ್ನ ಅಭಿಪ್ರಾಯ, ಭಾವನೆಗಳನ್ನು, ವಿರೋಧ ಗಳನ್ನು ಸೃಷ್ಟಿಸಿವೆ. ಒಂದು ಧರ್ಮಕ್ಕೆ ಆಚಾರವಾಗಿರುವುದು ಇನ್ನೊಂದು ಧರ್ಮಕ್ಕೆ ಮೂಢ ನಂಬಿಕೆಯಾಗಿದೆ. ಒಬ್ಬರ ಧಾರ್ಮಿಕ ನಂಬಿಕೆಗಳು ಮತ್ತೊಂದು ಜನಾಂಗದವರಿಗೆ ಮೌಢ್ಯ ತುಂಬಿದ ವಿಚಾರಗಳು. ಹಿಂದೂಗಳ ಮೂರ್ತಿಪೂಜೆಯನ್ನು ಮುಸಲ್ಮಾನರು ಒಪ್ಪುವುದಿಲ್ಲ. ಒಂದು ಕಡೆ ಗೋಪೂಜೆ ಪೂಜನೀಯವಾದರೆ ಮತ್ತೊಂದೆಡೆ ಅದರ ಹತ್ಯೆ ಸಾಮಾನ್ಯವಾಗಿದೆ. ನಿರಾಕಾರ, ನಿರ್ಗುಣ ತತ್ತ್ವಕ್ಕೆ ರೂಪ ಆಕಾರಗಳನ್ನು ರೂಪಿಸುವುದು ಕೆಲವು ಮತಗಳಲ್ಲಿ ನಿಷಿದ್ಧವಾದರೂ ಶಿಲುಬೆಯ ಚಿಹ್ನೆ, ಹಸ್ತದ ಚಿಹ್ನೆ, ಅರ್ಧಚಂದ್ರ ನಕ್ಷತ್ರದ ಚಿಹ್ನೆ ಪರಮ ಪವಿತ್ರವಾಗಿವೆ ಎಂಬುದನ್ನು ಗಮನಿಸಬಹುದು. ಒಬ್ಬ ಮತಸ್ಥಾಪಕ ನಿಜವಾಗಿಯೂ ಅದ್ಭುತ ಕೆಲಸ ಸಾಧಿಸಿದರೆ ಇನ್ನೊಂದು ಮತಧರ್ಮದವರು ಅದನ್ನು ಧಾರಾಳವಾಗಿ ಟೀಕಿಸುತ್ತಾರೆ. ನಮ್ಮ ದೇವರು, ನಮ್ಮ ದೇವದೂತರು, ನಮ್ಮ ಪವಿತ್ರಗ್ರಂಥ, ನಮ್ಮ ಆಚಾರ-ವಿಚಾರಗಳೇ ಶ್ರೇಷ್ಠ. ಉಳಿದವರ ನಂಬಿಕೆ ವಿಚಾರಗಳು ಹಾಸ್ಯಾಸ್ಪದ ಎಂದು ಟೀಕಿಸಿ ನಗುವುದು ಇಂದಿನ ಮತಧಾರ್ಮಿಕರ ಸಂಪ್ರದಾಯವಾಗಿ ಹೋಗಿವೆ. ಇಂದು ಎರಡು ಅಭಿಪ್ರಾಯಗಳು, ಎರಡು ವಿಚಾರಗಳು, ಎರಡು ಸಂಪ್ರದಾಯಗಳು ಒಟ್ಟಾಗಿ ಕೂಡಿ ಬಾಳುವ ಸೌಹಾರ್ದತೆಯನ್ನು ಕಳೆದುಕೊಳ್ಳುತ್ತಿರುವುದು ಬಹಳ ಶೋಚನೀಯ ಸಂಗತಿಯಾಗಿದೆ. ಅದರಲ್ಲೂ ಕೆಲವು ಮತಜನಾಂಗಗಳಲ್ಲಿ ಇಂತಹ ಭಾವನೆಗಳು ಬಲವಾಗಿ ಬೇರೂರಿವೆಯೆಂದರೆ, ಈ ಜಗತ್ತಿನಲ್ಲಿ ನಾವೇ ಶ್ರೇಷ್ಠರು. ಇಡೀ ಜಗತ್ತನ್ನು ಆಳಲು ನಾವೇ ಯೋಗ್ಯರು. ಅದಕ್ಕಾಗಿಯೇ ಭಗವಂತನು ನಮ್ಮನ್ನು ಸೃಷ್ಟಿಸಿ ಈ ಭೂಮಿಗೆ ಕಳುಹಿಸಿದ್ದಾನೆ. ಕೆಡುಕಿನ ಶಕ್ತಿಗಳನ್ನು ನಾಶಗೊಳಿಸಿ ನಮ್ಮ ಪವಿತ್ರಧರ್ಮದ ಸಂದೇಶಗಳನ್ನು ಜಗತ್ತಿನಲ್ಲಿ ಬಿತ್ತರಿಸುತ್ತೇವೆಂಬ ಹುಚ್ಚು ಭ್ರಮೆಯಲ್ಲಿ ಅತಿರೇಕದ ಕಲ್ಪನೆ ಮಾಡಿಕೊಂಡು ಜನಾಂಗೀಯ ದ್ವೇಷಗಳನ್ನು ತುಂಬುವವರನ್ನು ಇತಿಹಾಸದಲ್ಲಿ ಕಂಡಿದ್ದೇವೆ. ಈಗಲೂ ಕೂಡ ಇಂತಹ ಮಹಾನುಭಾವರುಗಳು ಇದ್ದಾರೆಯೆಂಬುದು ಬಹಳ

ಆಶ್ಚರ್ಯಕರವಾದ ಸಂಗತಿಯಾಗಿದೆ. ಸ್ವಾಮಿ ವಿವೇಕಾನಂದರು ಹೇಳುವಂತೆ ಹಿಂದೂಗಳಿಗೆ ವಿಗ್ರಹಪೂಜೆಯೇ ದೇವರಲ್ಲ. ಆ ವಿಗ್ರಹವನ್ನು ಸಾಂಕೇತಿಕವಾಗಿ ಇಟ್ಟುಕೊಂಡು ಇಡೀ ಜಗತ್ತಿನ ಅಚಿಂತ್ಯ ಮಹಾನ್‌ಶಕ್ತಿಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವಾಗಿದೆ. ಅಲ್ಲಿ ಭಗವಂತನ ಪ್ರಚಂಡ ಆವಿರ್ಭಾವ ಶಕ್ತಿಯು ಗೋಚರಿಸುತ್ತದೆ. ಆ ತಿಳಿವಳಿಕೆಯೇ ಇಲ್ಲದ ಮೂಢರಿಗೆ ಅದು ವಿಗ್ರಹ, ಕಲ್ಲುಮಣ್ಣಿನ ಬೊಂಬೆಯಾಗಿ ಕಾಣಿಸುತ್ತದೆ ಅಷ್ಟೆ. ಹೀಗೆ ಪ್ರಪಂಚದ ಎಲ್ಲ ಮತಧರ್ಮಗಳಲ್ಲಿ ಸರ್ವಸಾಮಾನ್ಯವಾದ ಆಚಾರವಿಲ್ಲ, ಎಲ್ಲರಿಗೂ ಅನ್ವಯಿಸುವ ಏಕಭಾವನೆಯ ತತ್ತ್ವವಿಲ್ಲ. ಮೂಲತಃ ಎಲ್ಲ ಧರ್ಮಗ್ರಂಥಗಳು, ತತ್ತ್ವಗಳು, ವಿಚಾರಗಳು ಒಂದೇ ತತ್ತ್ವವನ್ನು ಪ್ರತಿಪಾದಿಸಿದರೂ ಅವುಗಳನ್ನು ಅರ್ಥ ಮಾಡಿಕೊಳ್ಳುವ ದಿಶೆಯಲ್ಲಿ ಮಾನವ ಜನಾಂಗ ಸೋತಿದೆಯೆಂಬುದನ್ನು ನಾವು ಖಂಡಿತವಾಗಿಯೂ ಹೇಳಬಹುದು. ಕೆಲವರಲ್ಲಿ ಏಕತಾಭಾವನೆಗಳ ಆದರ್ಶವಿದ್ದರೂ ಅವು ಯಾವುವೂ ಬದುಕಿನ ಅನುಷ್ಠಾನದಲ್ಲಿ ಕಾಣುತ್ತಿಲ್ಲ. ಅವರವರ ಭಾವನೆಗಳ, ತಿಳಿವಳಿಕೆಯ ಸಾಮರ್ಥ್ಯದ ಮಟ್ಟದಲ್ಲಿಯೇ ಪ್ರತಿಯೊಂದನ್ನು ತೂಗಿನೋಡುವ ಪರಿ ಈಗ ಸಾಮಾನ್ಯವಾಗಿ ಹೋಗಿದೆ ಎಂದ ಮೇಲೆ ಇಂದಿನ ದಿನಗಳಲ್ಲಿ ನಮಗೆ ವಿಶ್ವಧರ್ಮದ ಕಲ್ಪನೆ, ವಿಶ್ವಮಾನವ ಸಂದೇಶ, ಏಕತೆಯ ಸಂಘಟನೆ ಸಾಧ್ಯವೇ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ.

ಇಂದು ನಾವು ವಿಶ್ವಬಾಂಧವ್ಯ, ಸಮಾನತೆ, ಏಕತೆ ಎಂದು ಅರಚಿಕೊಳ್ಳುತ್ತಿದ್ದೇವೆ. ಪ್ರತಿಯೊಬ್ಬರೂ ವಿಶ್ವಮಾನವ ಸಂದೇಶವನ್ನು ಹೇಳುವವರೇ ಆಗಿದ್ದಾರೆ. ಆದರೆ ಅವೆಲ್ಲವೂ ಕೇವಲ ಬಾಯಿ ಮಾತಿನ ಘೋಷಣೆಗಳಾಗಿವೆ ಅಷ್ಟೆ. ಆಚಾರ-ವಿಚಾರಗಳಲ್ಲಿಯೇ ನಾವು ಬೇರೆಯೇ ಆಗಿದ್ದೇವೆ. ಹಿಂದೂ, ಕ್ರೈಸ್ತ, ಮುಸಲ್ಮಾನ, ಬೌದ್ಧ ಯಾರಲ್ಲೂ ಒಮ್ಮತವಿಲ್ಲ, ಸಹನಾಶೀಲತೆಯನ್ನೇ ಕಳೆದುಕೊಂಡುಬಿಟ್ಟಿದ್ದೇವೆ. ಮಾನವ-ಮಾನವರ ನಡುವಿನ ಮಾನವೀಯತೆಯನ್ನೇ ಮರೆತಿದ್ದೇವೆ. ಕೇವಲ ಭೇದಭಾವನೆಯನ್ನೇ ನಮಗರಿವಿಲ್ಲದಂತೆಯೇ ವ್ಯಕ್ತಪಡಿಸುತ್ತಿದ್ದೇವೆ. ವಿಶ್ವಬಾಂಧವ್ಯದ ಬಗ್ಗೆ ನಾವು ಬರೀ ಮಾತನಾಡುವುದಲ್ಲ, ಅದನ್ನು ಆಚರಿಸಿ ಜೀವನದಲ್ಲಿ ಬಾಳಿ ಬದುಕಿಸಬೇಕು. ಆಗ ಮಾತ್ರ ನಮ್ಮ ಹೃದಯಗಳಲ್ಲಿ ಪ್ರೀತಿ, ದಯೆ, ಮಮತೆ ಉಕ್ಕಿ ಹರಿದು ಅದು ವಿಶ್ವಮಾನವ ತತ್ತ್ವದೆಡೆಗೆ ಕರೆದೊಯ್ಯುವುದು ದಿಟ. ನಮ್ಮಲ್ಲಿಂದು ಶ್ರದ್ಧಾಪೂರ್ವಕವಾದ ಕಾರ್ಯ ಹೆಚ್ಚಾಗಬೇಕು. ಮಾತು, ಭಾಷಣ, ಉಪದೇಶಗಳು ಕಡಿಮೆಯಾಗಬೇಕು. ವ್ಯರ್ಥ ಚರ್ಚೆ, ಪಾಂಡಿತ್ಯ ಪ್ರದರ್ಶನ ಬದಿಗಿರಿಸಿ ನಾವು ಮುನ್ನಡೆಯಬೇಕು.

ನಾವೆಲ್ಲ ಮಾನವರು, ಆದರೆ ನಾವೆಲ್ಲರೂ ಸಮಾನವಾಗಿರುವೆವೆ? ಎಂದಿಗೂ ಇಲ್ಲ. ಒಬ್ಬ ಬಲಶಾಲಿ- ಒಬ್ಬ ದುರ್ಬಲ, ಒಬ್ಬ ಸುಂದರ-ಒಬ್ಬ ಕುರೂಪಿ, ಒಬ್ಬ ಆರೋಗ್ಯವಂತ ಒಬ್ಬ ರೋಗಿ, ಹೀಗೆ ದೈಹಿಕ ಸಾಮರ್ಥ್ಯಗಳು, ಬಣ್ಣರೂಪಗಳು, ಜೀವನದ ರೀತಿನೀತಿಗಳು, ಓದು ವಿದ್ಯೆ, ಊಟ ತಿಂಡಿ, ಉಡುಗೆತೊಡುಗೆಗಳಲ್ಲೂ ಭಿನ್ನತೆಯನ್ನು ಕಾಣುತ್ತಿದ್ದೇವೆ. ಪ್ರತಿಯೊಬ್ಬರೂ ತಮ್ಮ ತಮ್ಮ ಗುಣಸ್ವಭಾವಗಳಿಗನುಗುಣವಾಗಿ ಬದುಕುತ್ತಿದ್ದಾರೆ. ಒಬ್ಬನಿಗೆ ಅನ್ವಯವಾಗುವ

ವಿಚಾರ ಮತ್ತೊಬ್ಬರಿಗೆ ಆರೋಪಣೆ ಮಾಡುವುದು ಕಠಿಣವೂ ಹೌದು. ಹೀಗಿರುವಾಗ ಸಮಾನತೆ, ವಿಶ್ವಧರ್ಮ, ವಿಶ್ವಜೀವನವೆಂದು ನಾವು ಕೂಗಾಡುತ್ತಿರುವುದು ತಪ್ಪಲ್ಲವೇ? ಎಂದು ಕೇಳುವ ಮಂದಿಯೂ ಜಗತ್ತಿನಾದ್ಯಂತ ತುಂಬಿಕೊಂಡಿದ್ದಾರೆ. ಮೇಲು ನೋಟಕ್ಕೆ ವಿಚಾರ ನಮಗೆ ಸರಿ ಎನಿಸಿದರೂ ನಿಜವಾಗಿಯೂ ಅದರಲ್ಲಿ ಯಾವ ಹುರುಳಿಲ್ಲವೆಂದು ನಮಗೆ ತಿಳಿಯುತ್ತದೆ. ಇಡೀ ಜಗತ್ತಿನಾದ್ಯಂತ ವೈವಿಧ್ಯತೆಯೆಂಬುದು ಸಹಜವಾದುದು ಮತ್ತು ಸ್ವಾಭಾವಿಕವಾದುದು. ಅದನ್ನು ನಾವು ಒಪ್ಪಿಕೊಳ್ಳೋಣ. ಅದನ್ನು ನಾವು ಅಲ್ಲಗಳೆಯಲು ಸಾಧ್ಯವೇ ಇಲ್ಲ. ವೈವಿಧ್ಯತೆಗಿಂತಲೂ ಭಿನ್ನವಾಗಿ ಇಡೀ ಮಾನವ ಕುಲಕ್ಕೆ ಸಾಮಾನ್ಯವಾಗಿರುವ ಅಂಶ ಮಾನವೀಯತೆ ಮತ್ತು ಪ್ರೀತಿ ಎಂಬುದನ್ನು ನಾವು ಮರೆಯುವಂತಿಲ್ಲ. "ಹಲವು ಮಣಿಗಳನ್ನು ಒಂದೇ ದಾರದಲ್ಲಿ ಪೋಣಿಸಿ ಒಂದು ಸುಂದರವಾದ ಹಾರವನ್ನು ರಚಿಸಿದಂತೆ ಅನೇಕ ಧರ್ಮಗಳ ಮಣಿಗಳನ್ನು ದೈವತ್ವವೆಂಬ ಒಂದೇ ದಾರದಲ್ಲಿ ಪೋಣಿಸಿ ಸಾಮರಸ್ಯವನ್ನು ಮೂಡಿಸುವಂತೆ ವೈವಿಧ್ಯತೆಯಲ್ಲಿ ಏಕತೆಯನ್ನು ಮೂಡಿಸಬೇಕು " ಎಂದು ಶ್ರೀರಾಮಕೃಷ್ಣಪರಮಹಂಸರು ಹೇಳುತ್ತಾರೆ. ಹಾಗೆಯೇ ವೈವಿಧ್ಯತೆಯಲ್ಲಿ ಏಕತೆಯೆಂಬುದು ವಿಶ್ವದ ನಿಯಮ. ಈ ವಿಶ್ವದ ಅಸ್ತಿತ್ವವೇ ದೇವರು. ಆ ದೇವರಿಗೆ ನಾವೆಲ್ಲರೂ ಒಂದೇ. ಆದರೂ ಜಗತ್ತಿನ ಆವಿರ್ಭಾವದ ದೃಷ್ಟಿಯಿಂದ ವ್ಯತ್ಯಾಸಗಳು ಯಾವಾಗಲೂ ಇದ್ದೇ ಇರುತ್ತವೆ. ನಮ್ಮ ಶಕ್ತಿ, ಸಾಮರ್ಥ್ಯ, ಕ್ರಿಯೆಗಳಲ್ಲಿ ವ್ಯತ್ಯಾಸಗಳು ಇದ್ದೇ ಇರುತ್ತವೆ. ವೈವಿಧ್ಯತೆಯೆಂಬುದೇ ನಮ್ಮ ಪ್ರಗತಿಯ ಜೀವಾಳ. ಅದು ಯಾವಾಗಲೂ ಇರಬೇಕು. ಒಂದೇ ತರಹದ ಬದುಕು, ಆಲೋಚನೆ ಸಮತ್ವವಾದರೆ ಜೀವನಕ್ಕೆ ಅರ್ಥವೂ ಇಲ್ಲ, ಮೌಲ್ಯವೂ ಇಲ್ಲ. ಕ್ರಿಯಾಶೀಲತೆ, ಪ್ರತಿಭೆ, ಸಾಮರ್ಥ್ಯಗಳಲ್ಲಿ ಭಿನ್ನತೆಯಿದ್ದರೂ ಮಾನವರಾಗಿ ನಾವೆಲ್ಲರೂ ಒಂದೇ.

ಹಾಗಾದರೆ ವಿಶ್ವಧರ್ಮದ ಆದರ್ಶ ಯಾವುದು? ಏಕತತ್ತ್ವವೇ, ಏಕ ಆಚಾರವೇ ಅಥವಾ ಏಕ ವಿಚಾರವೇ? ಇದರಲ್ಲಿ ಯಾವುದೂ ಅಲ್ಲ. ಒಂದು ಗಡಿಯಾರದ ಲೋಲಕದೊಳಗೆ ಅನೇಕ ಸಣ್ಣಪುಟ್ಟ ಚಕ್ರಗಳು ಕೆಲಸ ಮಾಡುತ್ತಾ ಏಕಪ್ರಕಾರದ ಸಮಯವನ್ನು ತೋರುವಂತೆ ವಸ್ತುವೊಂದೇ ಇದ್ದರೂ ಅದರ ಹಿಂದೆ ನೂರಾರು ಕ್ರಿಯಾಶೀಲತೆಗಳಿವೆ ಎಂಬುದರ ತಿಳಿವಳಿಕೆ ನಮಗಿರಬೇಕು. ರಾಮಕೃಷ್ಣರು ಹೇಳುವಂತೆ "ಹೇಗೆ ಅನೇಕ ನದಿಗಳು ಅನೇಕ ಕಡೆ ಹುಟ್ಟಿ ಅನೇಕ ಕಡೆಯಿಂದ ಹರಿದು ಅಂತಿಮವಾಗಿ ಸಾಗರದಲ್ಲಿ ಸೇರಿ ಒಂದಾಗುವಂತೆ ಅನೇಕ ಧರ್ಮಗಳೆಂಬ ಆಚಾರ, ವಿಚಾರ, ನಂಬಿಕೆಗಳು ಇದ್ದರೂ ಅಂತಿಮವಾಗಿ ಭಗವಂತನ ಸಾಕ್ಷಾತ್ಕಾರವೇ ಅದರ ಮೂಲ ಗುರಿಯಾಗಿರುತ್ತದೆ. ದೇವರು ಅವರವರು ಹಿಡಿದಿರುವ ಪಾತ್ರೆಯಲ್ಲಿನ ನೀರಿನ ಆಕಾರದಂತೆ ಇರುತ್ತಾನೆ. ನೀರು ಯಾವ ಆಕಾರವನ್ನು ಧರಿಸಿದರೂ ನೀರು ಎಂಬ ವಸ್ತು ಒಂದೇ. ಹಾಗೆಯೇ ವೈವಿಧ್ಯತೆಗಳು ಈ ಜಗತ್ತಿನ ಜೀವನದಲ್ಲಿ ತುಂಬಿಕೊಂಡಿದ್ದರೂ ಮಾನವೀಯತೆ, ಪ್ರೀತಿ ಸೌಹಾರ್ದತೆಯನ್ನು ಬೆಳೆಸುವ ಧರ್ಮವು ಎಲ್ಲರಲ್ಲೂ ಒಂದೇ. ಅದೇ ವಿಶ್ವಧರ್ಮ."

ಪ್ರತಿಯೊಂದು ಧರ್ಮಗಳು ಅರಿತೋ ಅರಿಯದೆಯೋ ಸಾಗುತ್ತಿರುವುದು ಈ ಪರಮಾತ್ಮನ ದರ್ಶನಕ್ಕಾಗಿಯೇ ಎಂಬುದನ್ನು ಮರೆಯುವಂತಿಲ್ಲ. ಪ್ರತಿಯೊಬ್ಬನೂ ತನ್ನ ಸ್ವಭಾವಕ್ಕೆ ಅನುಗುಣವಾಗಿ ವಿಕಾಸವಾಗುತ್ತಿರುವನು. ಒಂದು ದಿನ ನಿಜವಾದ ಸತ್ಯವನ್ನು ಅರಿತೇ ಅರಿಯುವನು. ಅಂದರೆ ಮನುಷ್ಯ ತನಗೆ ತಾನೇ ಕಲಿಯಬೇಕಾಗಿದೆ. ನಮ್ಮ ಬೆಳವಣಿಗೆ, ಸಾಮರ್ಥ್ಯ ನಮ್ಮಿಂದಲೇ ನಡೆಯಬೇಕಾಗಿದೆ. ಹೊರಗಿನಿಂದ ತಂದು ಅದನ್ನು ಯಾರೂ ಜೋಡಿಸುವುದಿಲ್ಲ. ಒಬ್ಬ ಗುರುವು ಕೂಡ ಏನು ಮಾಡಬಲ್ಲ. ನಮ್ಮ ಆತಂಕ ತೊಡೆಯಬಲ್ಲ. ಮಾರ್ಗದರ್ಶನ ಮಾಡಬಲ್ಲ. ಸರಿ-ತಪ್ಪು ತೋರಿಸಬಲ್ಲ. ಆದರೆ ನಮ್ಮ ಸ್ವಂತ ಪ್ರಯತ್ನದಿಂದಲೇ ನಾವು ಸಾಗಬೇಕು, ಸಾಧಿಸಬೇಕಾಗಿದೆ. ನಮ್ಮ ನಮ್ಮ ಆತ್ಮಶಕ್ತಿಗಿಂತ ಹಿರಿದಾದ ಗುರುವಾಗಲಿ, ಮಾರ್ಗದರ್ಶಕರಾಗಲಿ ಯಾರೂ ಇಲ್ಲ ಎಂಬುದನ್ನು ನಾವು ಮರೆಯಬಾರದು.

ಒಂದು ಕಡೆ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: ಎಲ್ಲಾ ಧರ್ಮಗಳು ಸತ್ಯ ಎನ್ನುವುದನ್ನು ಹಲವಾರು ಧರ್ಮಗಳು ಒಪ್ಪಿಕೊಂಡಿವೆ. ಆದರೂ ಆ ಧರ್ಮಗಳನ್ನು ಒಟ್ಟು ಸೇರಿಸಿ ಪ್ರತಿಯೊಂದು ತನ್ನ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬರುವುದಕ್ಕೆ ಯಾವ ಮಾರ್ಗವನ್ನೂ ಅವು ಅನುಸರಿಸಲಿಲ್ಲ. ಧರ್ಮದಲ್ಲಿ ಯಾವ ವ್ಯಕ್ತಿ ವೈಶಿಷ್ಟ್ಯವನ್ನೂ ನಾಶಮಾಡದೆ, ಇತರರೊಂದಿಗೆ ಒಂದು ಸಾಮರಸ್ಯವನ್ನು ಕಾಣುವಂತೆ ಮಾಡಬಲ್ಲ ಯೋಜನೆಯೇ ಅನುಷ್ಠಾನ ಯೋಗ್ಯ ಮಾರ್ಗವು. ಆದರೆ ಇದುವರೆಗೆ ಪ್ರಯತ್ನಿಸಿದ ಧಾರ್ಮಿಕ ಸೌಹಾರ್ದತೆಯ ಯೋಜನೆಗಳೆಲ್ಲ, ಧರ್ಮದ ವಿಭಿನ್ನ ದೃಷ್ಟಿಗಳೆಲ್ಲ ನಾವು ಸ್ವೀಕರಿಸುತ್ತೇವೆ ಎಂದು ಹೇಳಿದರೂ ವ್ಯವಹಾರದಲ್ಲಿ ಕೆಲವು ಸಿದ್ಧಾಂತಗಳಿಂದ ಧರ್ಮಗಳನ್ನೆಲ್ಲಾ ಬಂಧಿಸಲು ಪ್ರಯತ್ನಪಡುತ್ತಿದ್ದೇವೆ. ಇದರಿಂದ ಪರಸ್ಪರ ಕಾದಾಡುವ, ಸ್ಪರ್ಧಿಸುವ ಭಿನ್ನಾಭಿಪ್ರಾಯಗಳಿಂದ ಕೂಡಿದ ಪಂಗಡಗಳೇ ಹೆಚ್ಚಾಗಿ ಹೋದವು. ನಮ್ಮಲ್ಲಿ ಒಬ್ಬ ಒಳ್ಳೆಯವನಾಗಿ ಆದರ್ಶಯುತವಾಗಿ ಧಾರ್ಮಿಕ ಸುಧಾರಣೆ ಮಾಡಲು ಹೋದರೆ ಅವನನ್ನು ಅಪಹಾಸ್ಯ ಮಾಡಿಯೋ ಅಥವಾ ಅವನ ಕಾಲೆಳೆಯುವ ಕೆಲಸವನ್ನು ಮಾಡುವ ಬಹಳ ಮಂದಿ ಚಾಣಾಕ್ಷರಿದ್ದಾರೆ. ಈ ರೀತಿಯ ವಿಧ್ವಂಸಕ ಮಾರ್ಗವನ್ನು ಸಮಾಜ ಸುಧಾರಣೆಯ ಹೆಸರಲ್ಲಿ ಅನುಸರಿಸುವುದರಿಂದ ಪ್ರಪಂಚಕ್ಕೆ ಪ್ರಯೋಜನಕ್ಕಿಂತ ಹಾನಿಯಾಗುವುದೇ ಹೆಚ್ಚು. ಆದುದರಿಂದ ಮೊದಲು ಮಾನವ ಜನಾಂಗದಲ್ಲಿ ಮಾನವೀಯತೆಯನ್ನು ನಿರ್ಮಿಸಿ, ಸಾಧ್ಯವಾದರೆ ದೀನ ದುರ್ಬಲರಿಗೆ, ದುಃಖಿಗಳಿಗೆ ಸಹಾಯ ಮಾಡಿ. ಇಲ್ಲದಿದ್ದರೆ ಸುಮ್ಮನಿದ್ದು ಬಿಡಿ. ಒಂದು ಉತ್ತಮ ಕೆಲಸ ಸಾಗುವುದನ್ನು ಕಂಡಾಗ ಅಲ್ಲಿ ಉಪಕಾರ, ಸಹಾಯಹಸ್ತವನ್ನು ನೀಡಿ, ಸಾಧ್ಯವಿಲ್ಲದಿದ್ದರೆ ಅಪಕಾರ ಮಾಡಲು ಮಾತ್ರ ದಯವಿಟ್ಟು ಹೋಗಬೇಡಿ. ಸಾಧ್ಯವಿದ್ದರೆ ಅವರನ್ನು ನೊಂದು ಬೇಯುವ ಮನಸ್ಸಿನಿಂದ ಮುಕ್ತಗೊಳಿಸಿ. ಒಬ್ಬ ವ್ಯಕ್ತಿಗೆ ಪ್ರೀತಿಸಲು ಅಗತ್ಯವಾದ ಸನ್ನಿವೇಶ, ಅವಕಾಶಗಳನ್ನು ಕೊಡಿ. ಅವರವರ ಆದರ್ಶಕ್ಕೆ ಮಹತ್ವ ಕೊಡಿ. ಆಶಾವಾದವನ್ನು ನಿರ್ಮಿಸಿ ಅವರ ಬದುಕಿಗೊಂದು ಭರವಸೆಯ ಕಿರಣವನ್ನು ಬೆಳಗಿಸಲು ಪ್ರಯತ್ನಿಸಿ. ಇದೇ ನಿಜವಾದ ವಿಶ್ವಧರ್ಮದ ಮೂಲಸೂತ್ರ.

ವ್ಯಾವಹಾರಿಕವಾಗಿ ನೋಡುವುದಾದರೆ ವ್ಯಕ್ತಿಯ ಬದುಕಲ್ಲಿ ಸಾಮರ್ಥ್ಯ, ಸ್ವಭಾವಗಳಿಗೆ ಅನುಗುಣವಾಗಿ ನಾಲ್ಕು ತರಹದ ಜೀವಿಗಳಿದ್ದಾರೆ. ಅವರನ್ನು ಕರ್ಮಜೀವಿ, ಭಾವಜೀವಿ, ಯೋಗಿ ಜೀವಿ ಮತ್ತು ತತ್ತ್ವಜ್ಞಾನ ಜೀವಿ ಎಂದು ನಾವು ವಿಂಗಡಿಸಬಹುದು.

ಮಾನಸಿಕ, ಶಾರೀರಕ ಶಕ್ತಿಗಳಿಂದ ಕೆಲಸ ಮಾಡಲು ಕರ್ಮಜೀವಿ ಆಶಿಸುತ್ತಾನೆ. ಉದ್ದೇಶಪೂರ್ಣವಾಗಿ ಹಣ, ಹೆಸರು, ಅಂತಸ್ತು, ಪ್ರತಿಷ್ಠೆಗಾಗಿ ಆತ ಕೆಲಸ ಮಾಡುತ್ತಿರುತ್ತಾನೆ. ಸ್ವಲ್ಪಮಟ್ಟಿನ ಸ್ವಾರ್ಥತೆಯನ್ನು ಬೆಳೆಸಿಕೊಂಡು ನಾನು, ನನ್ನವರು ಎಂಬ ಅಹಂಕಾರ-ಮಮಕಾರಗಳಿಗೆ ಆತ ಒಳಗಾಗಿರುತ್ತಾನೆ. ಇದರೊಂದಿಗೆ ದಾನ, ಧರ್ಮ, ಸೇವೆ, ಉತ್ಸವ, ಪೂಜೆಗಳನ್ನು ಕೂಡ ಕೀರ್ತಿಗಾಗಿ ಆತ ಮಾಡುತ್ತಿರುತ್ತಾನೆ. ಪ್ರಪಂಚದಲ್ಲಿ ಬಹುಸಂಖ್ಯಾತ ಜನರು ಈ ಕರ್ಮಜೀವಿಗಳ ವಿಭಾಗಕ್ಕೆ ಸೇರಿದ್ದಾರೆ.

ಇನ್ನು ಭಾವಜೀವಿ ಈ ಪ್ರಪಂಚವನ್ನೇ ಪ್ರೀತಿಸುತ್ತಾನೆ. ಎಲ್ಲವೂ ದೈವಿಕ ನಿಯಂತ್ರಣವೆಂಬ ವಿಚಾರವನ್ನು ಈತ ನಂಬಿರುತ್ತಾನೆ. ಸುಂದರ-ಕುರೂಪ, ಕತ್ತಲು-ಬೆಳಕು, ವಿಷ-ಅಮೃತ, ಹೂವು-ಮುಳ್ಳು, ಒಳಿತು-ಕೆಡುಕು, ಹುಟ್ಟು-ಸಾವು ಇವುಗಳಲ್ಲಿ ದೈವಿಕ ಶಕ್ತಿಯ ಕೈವಾಡವನ್ನು ನಂಬುತ್ತಾನೆ. ದೇವರಲ್ಲಿ ಅಚಲವಾದ ನಂಬಿಕೆಯನ್ನು ಇರಿಸಿಕೊಂಡು ಪ್ರಾರಬ್ಧಕರ್ಮ, ಹಣೆಬರಹ, ದೈವಸಂಕಲ್ಪ, ಅನುಗ್ರಹ ಎಂಬ ತತ್ತ್ವಗಳಿಗೆ ಮಾರುಹೋಗಿರುತ್ತಾನೆ. ಶಾಸ್ತ್ರ, ಸಂಪ್ರದಾಯ, ಪುರಾಣ, ಪುಣ್ಯಕಥೆಗಳಿಂದ ಜೀವನ ಪಾವನಗೊಳಿಸಿಕೊಳ್ಳಲು ಸದಾ ಪ್ರಯತ್ನಿಸುತ್ತಿರುತ್ತಾನೆ. ಸಂಸಾರತೆ, ಜೀವನದಲ್ಲಿ ವೈಜ್ಞಾನಿಕತೆಗೆ ಅಷ್ಟೊಂದು ಬೆಲೆ ಕೊಡುವುದಿಲ್ಲ.

ಮೂರನೆಯದಾಗಿ, ಯೋಗಜೀವಿಗಳು ಸಂಖ್ಯೆಯಲ್ಲಿ ಬಹಳ ಕಡಿಮೆ ಎನ್ನಬಹುದು. ಇವರು ತಮ್ಮ ಮನಸ್ಸನ್ನು ವಿಭಜನೆ ಮಾಡಿ ಮನಸ್ಸು ಹೇಗೆ ಕೆಲಸ ಮಾಡುತ್ತದೆ, ಅಂತರಾಳದ ಅಭಿವ್ಯಕ್ತಿ ಎಂದರೇನು? ಅದನ್ನು ಹೇಗೆ ಸ್ವಾಧೀನ ಮಾಡಿಕೊಳ್ಳುವುದು ಮತ್ತು ಅದನ್ನು ಹೇಗೆ ಅರಿಯುವುದು ಎಂಬ ಪ್ರಯತ್ನದಲ್ಲಿರುತ್ತಾರೆ. ತಮ್ಮ ಸಾಧನೆಯ ಸಂಕಲ್ಪದ ಮುಂದೆ ಉಳಿದ ವ್ಯವಹಾರಿಕತೆಯನ್ನೇ ಇವರು ಗೌಣವಾಗಿ ಪರಿಗಣಿಸಿರುತ್ತಾರೆ.

ಇನ್ನು ಕೊನೆಯವನೇ ತತ್ತ್ವಜ್ಞಾನಿ ಜೀವಿ. ಇವನು ಬದುಕಿನ ಎಲ್ಲಾ ಸ್ತರಗಳನ್ನು ಒಪ್ಪಿಕೊಂಡರೂ ಇವನ ಉದ್ದೇಶ ವಿಶ್ಲೇಷಣಾ ಮಾರ್ಗವಾಗಿರುತ್ತದೆ. ಪ್ರತಿಯೊಂದು ವಿಷಯವನ್ನು ವಿಮರ್ಶಿಸಿ ಅದನ್ನು ಬದುಕಿಗೆ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾನೆ. ಯುಕ್ತಿ, ವಿಚಾರ, ತರ್ಕಗಳಿಗೆ ಆತನ ಪ್ರಾಧಾನ್ಯತೆ. ಅದಕ್ಕೆ ವ್ಯತಿರಿಕ್ತವಾಗುವ ವಿಚಾರಗಳು ಯಾವುದೇ ಇರಲಿ ಕೊನೆಗೆ ದೇವರಿರಲಿ, ಆತನನ್ನು ಕೂಡ ನಿರಾಕರಿಸಲು ಆತ ಹಿಂದು-ಮುಂದು ನೋಡುವುದಿಲ್ಲ.

ಈ ನಾಲ್ಕು ಭಾವನೆಗಳು ಪ್ರತಿಯೊಬ್ಬನ ಜೀವನದಲ್ಲಿಯೂ ಒಂದಲ್ಲ ಒಂದು ಅವಿಭಾಜ್ಯ ರೂಪವಾಗಿರುತ್ತವೆಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ಆದರೆ ಇಂದು ಈ ವಿಚಾರಗಳು ಕೇವಲ ಪೂರ್ವಗ್ರಹಪೀಡಿತವಾಗಿ ಮುಂದುವರೆಯುತ್ತಿರುವುದು ನಿಜವಾಗಿಯೂ ವಿಷಾದದ

ಸಂಗತಿಯಾಗಿದೆ. ಒಬ್ಬರನ್ನೊಬ್ಬರು ಸಹಾನುಭೂತಿಯಿಂದ ಪರಿಶೀಲಿಸಬೇಕಾದ ಸತ್ಯತೆಯ ಪ್ರಾಮಾಣಿಕತೆಯನ್ನೇ ಕಳೆದುಕೊಂಡುಬಿಟ್ಟಿದ್ದಾರೆ. ಒಬ್ಬ ಕರ್ಮಜೀವಿಯ ಬಳಿ ಹೋದರೆ ಹಣ, ಸಂಪಾದನೆ, ಸಂಸಾರ, ಸುಖದ ಬಗ್ಗೆ ಮಾತನಾಡುತ್ತಾನೆ. ಪೂಜೆ, ತತ್ತ್ವ, ವಿಚಾರ, ತರ್ಕಗಳಿಂದ ಹೊಟ್ಟೆ ತುಂಬುವುದಿಲ್ಲವೆಂದು ಹಾಸ್ಯ ಮಾಡುತ್ತಾನೆ. ಒಬ್ಬ ಭಾವಜೀವಿ ಬಳಿ ಹೋದರೆ ಎಲ್ಲವೂ ಅವನಿಚ್ಛೆಯಂತೆ ನಡೆಯುತ್ತಿದೆ. ಅದನ್ನು ಮೀರಲು ನಮಗೆ ಯಾವ ಅಧಿಕಾರವೂ ಇಲ್ಲ. ಈ ಕರ್ಮಗಳನ್ನು ಕಳೆದುಕೊಳ್ಳಲು ಸದಾ ಅವನ ಪೂಜೆ, ಭಜನೆ, ಪ್ರಾರ್ಥನೆಗಳನ್ನು ಮಾಡುತ್ತಿರಬೇಕು. ಅವನ ಅನುಗ್ರಹದಿಂದ ಜನ್ಮಸಾಫಲ್ಯವಾಗುತ್ತದೆ ಎಂದು ಹೇಳುತ್ತಾನೆ. ಹಾಗೆಯೇ ಒಬ್ಬ ಯೋಗಜೀವಿಯ ಬಳಿ ಹೋದರೆ ಮನುಷ್ಯನ ಅಶಾಂತಿ, ಒದ್ದಾಟ ಕಂಡು ನಗುತ್ತಾನೆ. ಎಲೆ ಹುಲುಮಾನವ ಯಾವ ಪುರುಷಾರ್ಥಕ್ಕಾಗಿ ಈ ಹೋರಾಟ ಎಂದು ಹೇಳಿ ಅರ್ಥವಾಗದ ಬೋಧನೆಗಳ ಮಹಾಪೂರವನ್ನೇ ಹರಿಸುತ್ತಾನೆ. ಕಡೆಗೆ ಒಬ್ಬ ವೇದಾಂತಿಯ ತತ್ತ್ವಜ್ಞಾನಿಯ ಬಳಿ ಹೋದರೆ ಅಯ್ಯೋ ಹುಚ್ಚನೇ, ಈ ಜಗತ್ತೇ ಮಾಯೆ. ಯಾವುದನ್ನು ಸತ್ಯವೆಂದು ನಂಬಿಕೊಂಡಿದ್ದೀಯೋ ಅವೆಲ್ಲವೂ ಮಿಥ್ಯೆ. ಈ ಬದುಕೊಂದು ನೀರಿನ ಮೇಲಿನ ಗುಳ್ಳೆಯಂತೆ ಕ್ಷಣಿಕ. ಜಗತ್ತಿನ ಪರಮಸತ್ಯ ತಿಳಿಯುವುದು ಅಷ್ಟೊಂದು ಸುಲಭಸಾಧ್ಯವಿಲ್ಲ ಎಂದು ನಗಾಡುತ್ತಾನೆ.

ಈ ನಾಲ್ಕು ವಿಚಾರಗಳಲ್ಲಿ ಸತ್ಯಾಂಶವಿದ್ದರೂ ಆ ಸತ್ಯಗಳನ್ನು ಯಾರೂ ಪೂರ್ಣ ಪ್ರಮಾಣದಲ್ಲಿ ಅರ್ಥ ಮಾಡಿಕೊಳ್ಳುವುದಾಗಲಿ, ಸಾಕ್ಷಾತ್ಕಾರ ಮಾಡಿಕೊಂಡಿರುವುದಾಗಲಿ ಆಗಿರುವುದಿಲ್ಲ. ಅವರವರ ಮೂಗಿನ ನೇರಕ್ಕೆ ಅಥವಾ ಪೂರ್ವಗ್ರಹಕ್ಕೆ ಒಳಗಾಗಿ ಆ ತತ್ತ್ವಗಳನ್ನು ಹೇಳಲು ಬಯಸುತ್ತಾರೆ. ಒಬ್ಬ ಮನುಷ್ಯ ಇಂತಹವರ ಬಳಿ ಹೋಗಿ ನಾನೊಬ್ಬ ಸಾಧಾರಣ ಮನುಷ್ಯ. ನನಗೆ ಈ ನಾಲ್ಕು ವಿಚಾರಗಳನ್ನು ಹೊರತುಪಡಿಸಿ ಮನುಷ್ಯನಾಗಿ ಬದುಕುವ ಹಾಗೂ ನಾಲ್ಕು ಜನರಿಗೆ ಒಳ್ಳೆಯದನ್ನು ಮಾಡುವುದಕ್ಕೆ ಸಾಧ್ಯವಿದ್ದರೆ ತಿಳಿಸಿಕೊಡಿ. ನಾನು ಕರ್ಮಜೀವಿಯಲ್ಲ, ಭಾವನ ಜೀವಿಯಲ್ಲ, ಯೋಗಿಯಲ್ಲ, ಜ್ಞಾನಿಯಲ್ಲ. ನನಗೆ ಬದುಕಲು ಯೋಗ್ಯವಾದುದನ್ನು ಕೊಡುತ್ತೀರಾ? ಎಂದು ಕೇಳಿದರೆ ಈ ಎಲ್ಲರೂ ನಗುತ್ತಾರೆ. ಈ ಮನುಷ್ಯ ಮೂರ್ಖನಂತೆ ಮಾತನಾಡಿ ತನ್ನ ಬಾಳನ್ನು ವ್ಯರ್ಥಮಾಡಿಕೊಳ್ಳುತ್ತಿದ್ದಾನೆ ಎಂದು ಎಲ್ಲರೂ ಖಂಡಿತವಾಗಿಯೂ ಹೇಳುತ್ತಾರೆ. ಇದೇ ನಮ್ಮ ಜೀವನದ ವೈಖರಿ. ಇಂದಿನ ಪ್ರಪಂಚದಲ್ಲಿ ನಡೆಯುತ್ತಿರುವುದು ಇಷ್ಟೇ. ಒಬ್ಬ ಸಾಮಾನ್ಯ ಮನುಷ್ಯನನ್ನು ಉದ್ಧರಿಸುವ ಶಕ್ತಿಯನ್ನು ಯಾರೂ ಪಡೆದುಕೊಂಡಿಲ್ಲ. ಕೇವಲ ಉದಾತ್ತ ವಿಚಾರಗಳ ಅಧ್ಯಯನ, ಸಾಧನೆಯಲ್ಲಿ ಸಾಮಾನ್ಯ ಬಡವನ ಪಾಡು ಯಾವ ಮಟ್ಟಕ್ಕೆ ಇದೆ, ಇಂತಹ ವಿಚಾರಗಳನ್ನು ಗ್ರಹಿಸಲು ಅವನಿಗೆ ಸಾಧ್ಯವೇ? ಅವನ ಸದ್ಯದ ಅವಶ್ಯಕತೆಗಳೇನು? ಅವನಿಗಾಗಿ ನಾವೇನು ಮಾಡಬಲ್ಲೆವು ಎಂಬ ಔಚಿತ್ಯ ಜ್ಞಾನವನ್ನೇ ನಾವು ಪಡೆದುಕೊಳ್ಳದೆ ಇಡೀ ಬ್ರಹ್ಮಾಂಡ, ತತ್ತ್ವ, ಜೀವ, ಮಾಯೆ, ಹಣ, ಅಂತಸ್ತು, ಸಾಧನೆಗಳ ಬಗ್ಗೆ ಮೂಟೆಗಟ್ಟಲೆ ಉಪದೇಶವನ್ನು ಮಾಡುತ್ತೇವೆ. ಇವೇ ನಮ್ಮಲ್ಲಿರುವ ವಿಲಕ್ಷಣ ಭಾವನೆಗಳು ಮತ್ತು ನಮ್ಮ ಸಾಧನೆಯ ಇತಿಮಿತಿಗಳು. ಎಲ್ಲಿಯವರೆಗೆ ನಾವು ಈ ಜಡಬದುಕುಗಳಿಂದ ಹೊರಬರುವುದಿಲ್ಲವೋ ಅಲ್ಲಿಯವರೆಗೆ ವಿಶ್ವಧರ್ಮದ ಆದರ್ಶ ರೂಪ

ಕಾಣಲು ಸಾಧ್ಯವಿಲ್ಲ. ಹೀಗೆ ಸಾಮಾನ್ಯ ಬದುಕನ್ನೇ ಮರೆತು ಕೇವಲ ವಿಭಿನ್ನ ವಿಚಾರಗಳು, ವಿಭಿನ್ನ ಧರ್ಮಗಳು, ಉದಾತ್ತ ಸಂಸ್ಕೃತಿ, ಪರಂಪರೆಗಳೆಂದು ಒಬ್ಬರನ್ನೊಬ್ಬರು ದೂಷಿಸಿಕೊಳ್ಳುತ್ತಾ ತೀವ್ರಗಾಮಿಗಳಂತೆ ಹೋರಾಟ ನಡೆಸುವ ಇವರುಗಳ ಮಧ್ಯೆ ವಿಶ್ವಧರ್ಮದ ಕಲ್ಪನೆ ಕೇವಲ ಕಲ್ಪನೆಯಾಗಿಯೇ ಬಾಡುತ್ತಿದೆ.

ನಮಗೆ ಬೇಕಾಗಿರುವ ವಿಶ್ವಧರ್ಮದ ಆದರ್ಶರೂಪ ಮಾನವರನ್ನು ಒಂದುಗೂಡಿಸುವ, ಪರಸ್ಪರ ಅರ್ಥಮಾಡಿಕೊಳ್ಳುವ ಮನುಷ್ಯತ್ವದಿಂದ ಕಟ್ಟಲ್ಪಡಬೇಕು. ಅಂತಹ ಒಂದು ತಳಪಾಯದಲ್ಲಿ ಕ್ರಿಯಾಶೀಲತೆಯ ನಿಸ್ವಾರ್ಥಸೇವೆ, ಪ್ರೀತಿಯುತವಾದ ಭಕ್ತಿಯ ಅವಿಭಾಜ್ಯರೂಪ, ಆರೋಗ್ಯಪೂರ್ಣಯೋಗದ ಚಮತ್ಕಾರ, ಎಲ್ಲಕ್ಕಿಂತಲೂ ಹೆಚ್ಚಾಗಿ ಉತ್ಸಾಹ ತುಂಬಿ ಮುನ್ನಡೆಸುವ ತಾತ್ವಿಕವಾದ ದಿವ್ಯವಾದ ಬೆಳಕು ಇರಬೇಕು. ಈ ನಾಲ್ಕರ ಸಮ್ಮಿಶ್ರವೇ ವಿಶ್ವಧರ್ಮದ ಆದರ್ಶ ಕಟ್ಟಡಕ್ಕೆ ಬೇಕಾಗಿರುವ ಸಾಮಗ್ರಿ ಎಂಬುದನ್ನು ಮರೆಯಬಾರದು. ಆದರೆ ನಮ್ಮ ಹೃದಯಗಳಲ್ಲಿ ಈ ಎಲ್ಲ ವಿಚಾರಗಳ, ಕ್ರಿಯಾಶೀಲತೆಯ ಮಿಲನವಿಲ್ಲ. ಪ್ರತಿಯೊಂದು ಧಾರ್ಮಿಕ ಜನಾಂಗಗಳಲ್ಲಿ ಅವರವರ ಮತಧರ್ಮಗಳ ಮಾರ್ಗದ ಪರಿಚಯವಿರುವುದು ಅಷ್ಟೆ. ಉಳಿದೆಲ್ಲವೂ ಅಸಹ್ಯಕರವೋ, ಮೂಢನಂಬಿಕೆಯೋ ಎನ್ನುವ ಅಭಿಪ್ರಾಯ. ಇದೊಂದು ಅಪಾಯಕಾರಿ ಬೆಳವಣಿಗೆ ಎನ್ನದೇ ವಿಧಿಯಿಲ್ಲ. ಆದುದರಿಂದ ವಿಶ್ವಧರ್ಮದ ಆದರ್ಶದಲ್ಲಿ ಕೇವಲ ಸಿದ್ಧಾಂತಗಳಿಂದ ಏನೂ ಪ್ರಯೋಜನವಿಲ್ಲ. ಮೊದಲು ಎಲ್ಲವನ್ನೂ ಸಹನೆಯಿಂದ, ಶ್ರದ್ಧೆಯಿಂದ, ಭಕ್ತಿಯಿಂದ ಕೇಳೋಣ, ನೋಡೋಣ. ಆ ನಂತರ ಅವುಗಳ ಸತ್ಯತೆಯ ಬಗ್ಗೆ ಮನನ ಮಾಡೋಣ, ಅವುಗಳನ್ನು ಕುರಿತು ಪರ್ಯಾಲೋಚಿಸೋಣ. ಕಡೆಯಲ್ಲಿ ಅವು ನಮ್ಮ ಬದುಕಿನಲ್ಲಿ ಅನುಷ್ಠಾನವಾಗಬೇಕು, ನಮ್ಮ ಬಾಳಿನ ಉಸಿರಾಗಬೇಕು. ಆಗ ಮಾತ್ರ ಧರ್ಮವೆಂಬುದು ಕೇವಲ ಒಂದು ಭಾವನೆ ಅಥವಾ ಸಿದ್ಧಾಂತವೆನಿಸುವುದಿಲ್ಲ. ಅದು ನಮ್ಮ ಬಾಳನ್ನು ಪ್ರೀತಿಮಯವಾಗಿ ಆವರಿಸಿಕೊಳ್ಳುತ್ತದೆ. ಮಾನವೀಯತೆಯ ಪರಿಮಳವನ್ನು ಸೂಸುತ್ತದೆ. ನಾವು ಕೂಡ ಕೇವಲ ಭಾವುಕ ಅಂಶಗಳಿಂದಲೋ, ಪಾಂಡಿತ್ಯತರ್ಕದಿಂದಲೋ ಅಥವಾ ಮಮಕಾರ-ವ್ಯಾಮೋಹಗಳಿಂದಲೋ ನಮ್ಮ ಬದುಕನ್ನು ರೂಪಿಸಿಕೊಳ್ಳುವುದಲ್ಲ. ಕಾಲದ ಗತಿಯಲ್ಲಿ ಬದುಕುಗಳು, ಆಚಾರ, ವಿಚಾರಗಳು, ವ್ಯವಹಾರಗಳು ಬದಲಾಯಿಸುತ್ತಿರುತ್ತವೆ. ಆದರೆ ಧರ್ಮತತ್ತ್ವವೊಂದೇ ಶಾಶ್ವತವಾಗಿರುತ್ತದೆ. ಅದು ಎಂದಿಗೂ ಬದಲಾಯಿಸುವುದಿಲ್ಲ. ಸತ್ಯ ಸದಾಕಾಲಕ್ಕೂ ಸತ್ಯವೇ. ವಿಶ್ವಧರ್ಮವೆಂಬುದು ಬರಿಯ ಮಾತಲ್ಲ, ಒಂದು ನಂಬಿಕೆಯಲ್ಲ, ಒಂದು ಸಿದ್ಧಾಂತವಲ್ಲ, ಒಂದು ತತ್ತ್ವವಲ್ಲ. ನಾವು ಅದರಂತೆಯೇ ಆಗಬೇಕು ಅಂದರೆ ವಿಶ್ವಧರ್ಮವೆಂಬುದು ನಮ್ಮ ಸಹಜ ಬದುಕೇ ಆಗಿರುತ್ತದೆ. ನಮ್ಮಲ್ಲಿ ಸೂಸುತ್ತಿರುವ ಮಾನವೀಯತೆಯೇ ಅದರ ಆದರ್ಶರೂಪವಾಗಿರುತ್ತದೆ ಎಂಬುದನ್ನು ಮರೆಯಬಾರದು.

ಈ ಸಂಚಿಕೆಯ ಲೇಖಕರ ವಿಳಾಸ

೧. ಗಂಗಾರಾಂ ಚಂಡಾಳ	....	ಎಲ್.೧೬, ೩ನೇ ಹಂತ ಕುವೆಂಪುನಗರ, ಮೈಸೂರು ೨೩
೨. ಡಾ. ಎಚ್. ಎಂ. ಹೇಮಲತ	....	ಮಹಿಳಾ ಅಧ್ಯಯನ ಕೇಂದ್ರ ಮಾನವಿಕ ವಿಭಾಗ ಮಾನಸಗಂಗೋತ್ರಿ, ಮೈಸೂರು ೬
೩. ಡಾ. ಎಂ. ಪಿ. ಮಹದೇವಯ್ಯ	....	ಪ್ರಾಧ್ಯಾಪಕ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸಗಂಗೋತ್ರಿ, ಮೈಸೂರು ೬
೪. ಡಾ. ಎಂ. ಪಿ. ರಮೇಶ್	....	ಸಂಶೋಧನ ಸಹಾಯಕ ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ೬
೫. ಡಾ. ಟಿ. ಎಲ್. ವೆಂಕಣ್ಣ	....	ಕನ್ನಡ ಪ್ರಾಧ್ಯಾಪಕ ಕೆಜಿಎಫ್ ಪ್ರಥಮದರ್ಜೆ ಕಾಲೇಜು ಉರಿಗಾಂ, ಕೆ.ಜಿ.ಎಫ್.
೬. ಮಹಾದೇವಿಬಾಯಿ	....	ಸಂಶೋಧಕಿ ಜಾನಪದ ವಿಭಾಗ, ಕು.ಕ.ಅ.ಸಂ., ಮಾನಸಗಂಗೋತ್ರಿ, ಮೈಸೂರು ೬
೭. ಪ್ರೊ. ಶಿವರಾಮಯ್ಯ	....	೧೭೨, ಐಸಾಕ್ ರಸ್ತೆ, ಟೀಚರ್ಸ್ ಕಾಲೋನಿ, ನಾಗರಭಾವಿ ಮೊದಲನೆಯ ಹಂತ ನಾಗರಭಾವಿ, ಬೆಂಗಳೂರು ೭೨
೮. ಡಾ. ಎಲ್. ಮಂಜುಳಾಕ್ಷಿ	....	ಸಂಶೋಧಕಿ ಭಾಷಾವಿಜ್ಞಾನ ವಿಭಾಗ,ಕು.ಕ.ಅ.ಸಂ., ಮಾನಸಗಂಗೋತ್ರಿ, ಮೈಸೂರು ೬
೯. ಆರ್. ಉಷಾರಾಣಿ	....	ಸಂಶೋಧನಾ ವಿದ್ಯಾರ್ಥಿ ಕನ್ನಡ ವಿಭಾಗ, ಕು.ಕ.ಅ.ಸಂ., ಮಾನಸಗಂಗೋತ್ರಿ, ಮೈಸೂರು ೬
೧೦. ಎಸ್. ಶಿವರಾಮು	....	ಸಂಶೋಧಕ ಇತಿಹಾಸ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು ೬
೧೧. ಡಾ. ಕೆ. ವೈ. ಬಾಲರಾಜ್	....	ಎಸ್.ಜಿ.ಎಸ್. ನಿಲಯ ಸಾವರ್ಕರ್‌ನಗರ, ಮುನ್ಸಿಫಲ್ ಆಫೀಸ್ ರಸ್ತೆ ಎದುರು, ಶಿವಮೊಗ್ಗ ೫೭೭ ೨೦೨

ಕೆ.ಸಂ. ೭೫೬೩-ಎಂಯುಪಿಎಂ-೩೦೦ ಪ್ರತಿಗಳು-೪.೧೨.೨೦೦೨